ಸೆಪ್ಟೆಂಬರ್ 2021

₹ 15/-

# ಯುಗರಶ್ಮಿ

ತ್ರೈಮಾಸಿಕ



- ಸಾಮಾಜಿಕ ಶಾಂತಿ
- ಇಸ್ಲಾಮಿನ ಸತ್ಯಸಾಕ್ಷ್ಯ
- ವಾಗ್ದತ್ತ ಮಸೀಹರ ಭವ್ಯ ಮರಣ
- ಧರ್ಮದ ಪುನಶ್ಚೇತನ ಸಿದ್ಧಾಂತ
- ಅಫ್‌ಘಾನಿಸ್ಥಾನ, ಭಾಗ್ಯಹೀನ ದೇಶ
- ನೀನು ಮಾಡು – ಮಾಡಬೇಡ

"ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟವರು ಮೃತರೆಂದು ನೀವು ಭಾವಿಸಬೇಡಿರಿ. ಅವರು ತಮ್ಮ ಒಡೆಯನ ಬಳಿ ಜೀವಂತರು; ಅವರಿಗೆ ಆಹಾರ ನೀಡಲಾಗುತ್ತದೆ." – ಪವಿತ್ರ ಖುರ್‌ಆನ್ (3:170)

# ಯುಗರಶ್ಮಿ

**ವಿಷಯ ಸೂಚಿಕೆ** **ಪುಟ**


* ಹೇ ನಿರ್ಭಾಗ್ಯ ಅಫ್‌ಘಾನ್ ಭೂಪ್ರದೇಶವೇ 1
* ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು 2
* ಸಾಮಾಜಿಕ ಶಾಂತಿ 3
* ಇಸ್ಲಾಮಿನ ಸತ್ಯಸಾಕ್ಷ್ಯ – 4 8
* ವಾಗ್ದತ್ತ ಮಸೀಹರ ಭವ್ಯ ಮರಣ 10
* ಖುರ್‌ಆನಿನ ಮಹತ್ವ 15
* ಧರ್ಮದ ಪುನಶ್ಚೇತನ ಸಿದ್ಧಾಂತ 16
* ನೀನು ಮಾಡು – ಮಾಡಬೇಡ 23
* ಅಫ್‌ಘಾನಿಸ್ಥಾನ, ಭಾಗ್ಯಹೀನ ದೇಶ 27
* ಪ್ರತಿಭೆಗಳು 28
* ಅಹ್ಮದಿಯಾ ಜಮಾಅತಿನ ಪ್ರಗತಿ 29
* ಆರೋಗ್ಯ 30
* ಓದಿದ್ದು 31

* ಪ್ರಚಾರದ ಹಂಗಿಲ್ಲದ 24X7 ಅಂಬ್ಯುಲೆನ್ಸ್ * ಕಲ್ಲು, ನಾಗರಕ್ಕೆ, ಹುತ್ತಕ್ಕೆ ಹಾಲನ್ನು ಹಾಕದೆ ಮಕ್ಕಳು, ಬಡವರು ಮತ್ತು ರೋಗಿಗಳಿಗೆ ನೀಡಿ * ಹಿಂದೂ ವೃದ್ಧನಿಗೆ ಮುಸ್ಲಿಮರಿಂದ ಅಂತ್ಯ ಸಂಸ್ಕಾರ * ಇಸ್ರೇಲ್: ಕಾಲ್ತುಳಿತಕ್ಕೆ 44 ಮಂದಿ ಬಲಿ
* ಭಾರತದಲ್ಲಿ ಮುಸ್ಲಿಮರು ಇರಬಾರದು ಎಂದು ಹಿಂದುವೊಬ್ಬ ಹೇಳಿದರೆ ಆತ ಹಿಂದುವೇ ಅಲ್ಲ * ದೇಶದಲ್ಲಿದೆ ಬದುಕಲು ಮುಕ್ತ ಅವಕಾಶ * ಮುಸ್ಲಿಮರಿಗೆ ಎನ್‌ಆರ್‌ಸಿ, ಸಿಎಎ ಆತಂಕ ಬೇಡ * 5ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಹಲವು ಸೌಲಭ್ಯ
* ಚೀನದಲ್ಲಿನ್ನು 3 ಮಕ್ಕಳಿಗೆ ಅವಕಾಶ * ಲೈಂಗಿಕ ದೌರ್ಜನ್ಯ: ಪೋಪ್ ಕಠಿನ ಕ್ರಮ * ಕೇರಳದ ಕ್ರೈಸ್ತ ಸನ್ಯಾಸಿನಿ ಲೂಸಿ ಮನವಿ ತಿರಸ್ಕೃತ * ಅತ್ಯಾಚಾರಿ ಜತೆ ಮದುವೆ: ಸಂತ್ರಸ್ತೆ ಮನವಿ * ಗಾಂಧಿ ಮರಿಮೊಮ್ಮಗಳಿಗೆ ಜೈಲು * ಶವಾಗಾರ ಸಹಾಯಕ ಹುದ್ದೆ: 8000 ಅರ್ಜಿ! * ಗಲ್ಲುಶಿಕ್ಷೆ ಅಭ್ಯಾಸಕ್ಕೆ ಹೋಗಿ ಬಾಲಕ ಸಾವು * ಅಂತೂ ಬದುಕುಳಿಯಿತು ವಿಶ್ವದ ಅತೀ ಕಡಿಮೆ ತೂಕದ ಶಿಶು! * ಧರ್ಮ ನಿಂದನೆ ಸುಳಿಗೆ 8ರ ಬಾಲಕ * ವ್ಯಕ್ತಿಯ ದೇಹದಲ್ಲಿ ಐದು ಕಿಡ್ನಿ * ಗರ್ಭಿಣಿ ಬೆಕ್ಕನ್ನು ರಕ್ಷಿಸಿದವರಿಗೆ ತಲಾ 10 ಲಕ್ಷ ರೂ. ಬಹುಮಾನ! * ಸೌದಿಯಲ್ಲೀಗ ಸೇನೆಯಲ್ಲೂ ಮಹಿಳೆ * ಮಾಜಿ ಸಿಎಂ ಎಸೆಸೆಲ್ಸಿ ಪಾಸ್!
* ತಾಲಿಬಾನಿಗಳ ಆದಾಯ * ಕ್ರಾಂತಿಕಾರಿ ನಟ ನಾನಾ ಪಾಟೇಕರ್ * ಜನಧ್ವನಿ * ದೇಶಪ್ರೇಮ ಎಂದರೇನು ಗೊತ್ತಾ?
* ಜವಾಹರ್ ಸರ್ಕಾರ * ಕೃತಕ ಸೂರ್ಯ ಪ್ರಯೋಗದಲ್ಲಿ ಹೊಸ ದಾಖಲೆ * ಕಪ್ಪುರಂಧ್ರ: ಅಧ್ಯಯನಕ್ಕೆ ಹೊಸ ತಿರುವು
* ಮಂಗಳೂರು ಸೇರಿ 12 ನಗರ ಮುಳುಗಡೆ? * ಬಾಹ್ಯಾಕಾಶ ನಿಲ್ದಾಣಕ್ಕೆ ಕಾಲಿಟ್ಟ ವಿಶೇಷ ಜೀವಿ!
* ನಿಧನ ವಾರ್ತೆಗಳು 40
* ಸಯ್ಯದ್ ತಾಲಿಲ್ ಅಹ್ಮದ್ ಸಾಹಿಬ್ * ಮೌಲವಿ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್
* ಮೌಲವಿ ಪಿ. ಮುಹಮ್ಮದ್ ಯೂಸುಫ್ ಸಾಹಿಬ್ * ಜನಾಬ್ ಸಿ.ಪಿ. ಮುಹಮ್ಮದ್ ಸಾಹಿಬ್


ಮುಖಪುಟ ಚಿತ್ರ : ಅಹ್ಮದಿಯಾ ಮಸ್ಜಿದ್: ಅಲ್–ಮಹ್‌ದಿ, ಬ್ರಾಡ್‌ಫೋರ್ಡ್, ಯು.ಕೆ.

## ಯುಗರಶ್ಮಿ ಓದುಗರಿಗೆ ಒಂದು ಸಂತಸದ ಸುದ್ದಿ

ಪ್ರಿಯ ಓದುಗರೇ, 1975ರಿಂದ 2021ರ ತನಕದ ಯುಗರಶ್ಮಿ ತ್ರೈಮಾಸಿಕದ ಎಲ್ಲ ಪ್ರತಿಗಳನ್ನು ಅಪ್‌ಲೋಡ್ ಮಾಡಲಾಗಿದೆ. ಇನ್ನು ಮುಂದೆ https://ahmadiyyamuslimjamaat.in/home/books/Kannad/ ಎಂಬ ಲಿಂಕನ್ನು ಕ್ಲಿಕಿಸಿ ಯುಗರಶ್ಮಿಯ ಎಲ್ಲ ಪ್ರತಿಗಳನ್ನು ಮತ್ತು ಅಹ್ಮದಿಯಾ ಜಮಾಅತಿನ ಕನ್ನಡ ಸಾಹಿತ್ಯಗಳನ್ನು ಉಚಿತವಾಗಿ ಓದಬಹುದಾಗಿದೆ.


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸೆಪ್ಟೆಂಬರ್ 2021

| ಆರಂಭ : 1975 | ಸಂಪುಟ : 38 | ತಬೂಕ್ : 1400 ಹಿಜರೀ ಶಮ್ಸೀ | ಸಂಚಿಕೆ : 1 |
|---|---|---|---|

## ಹೇ ನಿರ್ಭಾಗ್ಯ ಅಫ್‌ಘಾನ್ ಭೂಪ್ರದೇಶವೇ

(ಸಾಹಿಬ್‌ಝಾದಾ ಅಬ್ದುಲ್ಲತೀಫರ ಹತ್ಯೆಯ ಬಗ್ಗೆ ಪ್ರತಿಕ್ರಿಯೆ)

"ಸಾಹಿಬ್‌ಝಾದ ಅಬ್ದುಲ್ಲತೀಫರಿಗೆ ವಿಧಿಸಲಾದ ಹುತಾತ್ಮತೆ ಹಾಗೆ ಘಟಿಸಿತು. ಇನ್ನು ದ್ರೋಹಿಗಿರುವ ಪ್ರತಿಕ್ರಿಯೆ ಬಾಕಿಯಿದೆ. ಈ ಕೊಲೆ ಅತ್ಯಂತ ನಿಷ್ಕರುಣೆಯಿಂದ ಮಾಡಲ್ಪಟ್ಟಿದೆ. ಆಕಾಶದ ಕೆಳಗೆ ಈ ಕೊಲೆಗೆ ತುಲ್ಯವಾದ ಬೇರೊಂದು ಘಟನೆಯನ್ನು ಕಾಣಲು ಸಾಧ್ಯವಿಲ್ಲ. ಹಾ, ಕಷ್ಟ! ಅವಿವೇಕಿಯಾದ ಅಮೀರ್ ಎಂತಹ ದುಷ್ಕೃತ್ಯವನ್ನು ಮಾಡಿಬಿಟ್ಟನು! ಒಬ್ಬ ಪರಮ ನಿರಪರಾಧಿಯನ್ನು ಅತ್ಯಂತ ನಿರ್ದಯೆಯಿಂದ ಕೊಂದುಬಿಟ್ಟು ಆತನು ಸ್ವಯಂ ನಾಶಕ್ಕೆ ಈಡಾಗಿದ್ದಾನೆ! ಹೇ ಕಾಬೂಲ್ ಭೂಪ್ರದೇಶವೇ, ನೀನು ಸಾಕ್ಷಿಯಾಗು. ನಿನ್ನ ಪ್ರದೇಶದಲ್ಲಿ ಈ ಮಹಾಪಾತಕ ನಡೆಸಲ್ಪಟ್ಟಿದೆ. ಹೇ ಭಾಗ್ಯಹೀನ ಭೂಪ್ರದೇಶವೇ, ದೇವದೃಷ್ಟಿಯಲ್ಲಿ ನೀನು ನಿಂದ್ಯನಾಗಿರುವೆ. ಈ ಮಹಾ ಪಾತಕದ ಕ್ರಿಯಾವೇದಿಕೆ ನಿನ್ನ ನೆಲವಷ್ಟೇ!"

(ತದ್‌ಕಿರತುಶ್ಶಹಾದತೈನ್)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಮನುಷ್ಯರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ. (ಮುಸ್ನದ್ ಅಹ್ಮದ್)

♦ ಸ್ವರ್ಗದ ಬಾಗಿಲುಗಳಲ್ಲಿ ಒಂದು ಬಾಗಿಲಿನ ಹೆಸರು 'ಬಾಬು ಸದಖ' ಎಂದಾಗಿದೆ. ಅದರ ಮೂಲಕ ದಾನಧರ್ಮ ಮಾಡಿದವರು ಪ್ರವೇಶಿಸುವರು. (ಸಹೀಹ್ ಮುಸ್ಲಿಂ)

♦ ಮುನಾಫಿಕ್ (ಕಪಟವಿಶ್ವಾಸಿ)ಗಳಿಗೆ ಅತ್ಯಂತ ಪ್ರಯಾಸಕರವಾದ ನಮಾಝ್ ಇಶಾ ನಮಾಝ್ ಮತ್ತು ಸುಬ್‌ಹಿ ನಮಾಝ್ ಆಗಿದೆ. (ಮುಸ್ಲಿಂ)

♦ ಸತ್ಕರ್ಮದೊಂದಿಗೆ ದೀರ್ಘಾಯುಷ್ಯ ಪಡೆದವನು ಜನರೆಡೆಯಲ್ಲಿ ಮಹೋನ್ನತನು. (ತಿರ್ಮಿದೀ)

♦ ವಿಶ್ವಾಸಿಗಳಿಗೆ ತೊಂದರೆಯಾಗದಿರುತ್ತಿದ್ದರೆ ಪ್ರತಿಯೊಂದು ನಮಾಝ್ ವೇಳೆಯಲ್ಲೂ ದಂತ ಶುದ್ಧಿ ಮಾಡಲು ನಾನು ಅವರಿಗೆ ಆದೇಶಿಸುತ್ತಿದ್ದೆ. (ಮುಸ್ಲಿಂ)

♦ ಪುಣ್ಯ ಕರ್ಮಗಳಲ್ಲಿ ಯಾವುದನ್ನೂ ನೀನು ಅವಗಣಿಸಬೇಡ; ಅದು ನಿನ್ನ ಸಹೋದರನನ್ನು ಮುಖ ಪ್ರಸನ್ನತೆಯೊಂದಿಗೆ ಭೇಟಿಯಾಗುವುದಾದರೂ. (ಮುಸ್ಲಿಂ)

♦ ಅಲ್ಲಾಹು ಹೇಳುತ್ತಾನೆ: "ನನ್ನ ದಾಸರೇ, ನಾನು ಯಾರನ್ನೂ ಆಕ್ರಮಿಸುವುದಿಲ್ಲ. ನೀವು ಸಹ ಯಾರನ್ನೂ ಆಕ್ರಮಿಸಬಾರದು. ಅದು ನಿಮಗೆ ನಿಷಿದ್ಧ. (ಮುಸ್ಲಿಂ)

♦ ಇಬ್ಬರ ಮಧ್ಯೆ ನೀನು ನೀತಿಯುತವಾಗಿ ವರ್ತಿಸುವುದು ಧರ್ಮವಾಗಿದೆ. ಒಬ್ಬನು ತನ್ನ ವಾಹನವನ್ನೇರಲು, ಯಾತ್ರೋಪಕರಣಗಳನ್ನು ಅದರ ಮೇಲಿಡಲು ನೀನು ಸಹಾಯ ಮಾಡುವುದೂ ಧರ್ಮವಾಗಿದೆ. ಒಳ್ಳೆಯ ಮಾತನ್ನಾಡುವುದೂ ಧರ್ಮವಾಗಿದೆ. ನಮಾಝಿಗೋಸ್ಕರ ನಡೆದು ಹೋಗುವುದೂ ಧರ್ಮವಾಗಿದೆ. ದಾರಿಯಲ್ಲಿರುವ ಅಡಚಣೆಗಳನ್ನು ನೀಗಿಸುವುದೂ ಧರ್ಮವಾಗಿದೆ. (ಬುಖಾರಿ, ಮುಸ್ಲಿಂ)

♦ ಪ್ರವರ್ತನೆಗಳಿಗೆ ಉದ್ದೇಶಾನುಸಾರ ಪ್ರತಿಫಲ ನೀಡಲಾಗುತ್ತದೆ. ಪ್ರತಿಯೊಬ್ಬನಿಗೆ ಅವನು ಉದ್ದೇಶಿಸುವುದು ಲಭಿಸುತ್ತದೆ. (ಬುಖಾರಿ)

♦ ಸ್ವಂತ ಕೈಯಿಂದ ಸಂಪಾದಿಸಿದ ಆಹಾರಕ್ಕಿಂತ ಉತ್ತಮವಾದ ಬೇರೊಂದು ಆಹಾರವಿಲ್ಲ. (ಬುಖಾರಿ)

♦ ದಾನಧರ್ಮ ಮಾಡಿದ ಕಾರಣ ಧನ ಕಮ್ಮಿಯಾಗಲಿಕ್ಕಿಲ್ಲ. ಯಾರಾದರೂ ಕ್ಷಮೆ ನೀಡಿದರೆ ಅಲ್ಲಾಹನು ಆತನ ಗೌರವವನ್ನು ಹೆಚ್ಚಿಸುತ್ತಾನೆ. ಅಲ್ಲಾಹನಿಗೆ ವಿಧೇಯತೆಯನ್ನು ತೋರಿಸಿದವನ ಸ್ಥಾನವನ್ನು ಅವನು ಉನ್ನತಗೊಳಿಸುತ್ತಾನೆ. (ಮುಸ್ಲಿಂ)

♦ ಜನರಿಗೆ ಒಂದು ಕಾಲಘಟ್ಟ ಬರಲಿದೆ. ಅಂದು ತಾನು ಧನ ಸಂಪಾದಿಸಿರುವುದು ಧರ್ಮಬದ್ಧವಾದ ರೀತಿಯಲ್ಲೋ ಅಥವಾ ಧರ್ಮ ವಿರುದ್ಧವಾದ ರೀತಿಯಲ್ಲೋ ಎಂಬ ವಿಚಾರ ಮನುಷ್ಯನಿಗೆ ಒಂದು ಸಮಸ್ಯೆಯೇ ಆಗಿರಲಾರದು. (ಬುಖಾರಿ)

♦ ಕೊಡು-ಕೊಳ್ಳುವಿಕೆಯಲ್ಲೂ ಸಾಲ ತೀರಿಸುವಿಕೆಯಲ್ಲೂ ರಿಯಾಯಿತಿ ತೋರಿಸುವವನಿಗೆ ಅಲ್ಲಾಹನು ಕರುಣೆದೋರುತ್ತಾನೆ. (ಬುಖಾರಿ)

♦ ಕಷ್ಟದಲ್ಲಿರುವವನಿಗೆ ಸಾಲ ತೀರಿಸುವ ಗಡುವನ್ನು ಹೆಚ್ಚಿಸಿಕೊಟ್ಟರೆ ಅಥವಾ ಸಾಲವನ್ನು ಮನ್ನಾ ಮಾಡಿದರೆ ಅಂತ್ಯದಿನದ ಕಷ್ಟದಿಂದ ಅಲ್ಲಾಹನು ಅವನನ್ನು ಪಾರುಮಾಡುವನು. (ಮುಸ್ಲಿಂ)

♦ ಒಬ್ಬ ನ್ಯಾಯಾಧೀಶ ಕೋಪೋದ್ರಿಕ್ತನಾಗಿ ಕಕ್ಷಿಗಾರರ ಮಧ್ಯೆ ಎಂದಿಗೂ ತೀರ್ಪು ನೀಡಬಾರದು. (ಬುಖಾರಿ, ಮುಸ್ಲಿಂ)

# ಸಾಮಾಜಿಕ ಶಾಂತಿ

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

**"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ, ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ."**

**(ಪವಿತ್ರ ಖುರ್‌ಆನ್ 16 :91).**

**"ತಿಳಿದುಕೊಳ್ಳಿರಿ, ಇಹಲೋಕ ಜೀವನ ಒಂದು ಆಟವೂ ವಿನೋದವೂ ಅಲಂಕಾರವೂ ನೀವು ಪರಸ್ಪರ ಡಂಭಾಚಾರ ಮಾಡುವುದೂ ಸಂಪತ್ತು ಮತ್ತು ಸಂತತಿಗಳಲ್ಲಿ ಹೆಮ್ಮೆಪಡುವುದೂ ಮಾತ್ರವಾಗಿದೆ. (ಇಹಲೋಕ ಜೀವನ) ಒಂದು ಮಳೆಯ ಹಾಗೆ. ಆ ಮೂಲಕ ಉತ್ಪನ್ನವಾದ ಬೆಳೆಯು ಕೃಷಿಕನನ್ನು ಸಂತೋಷಪಡಿಸುತ್ತದೆ. ಅನಂತರ ಅದು ಒಣಗಿ ಹೋದಾಗ, ಅದು ಹಳದಿ ಬಣ್ಣಕ್ಕೆ ತಿರುಗಿ ನೀನು ಕಾಣುವೆ. ಅನಂತರ ಅದು ಹುಲ್ಲುಕಡ್ಡಿಗಳಾಗುತ್ತವೆ. ಪರಲೋಕದಲ್ಲಿ (ಅವಿಶ್ವಾಸಿಗಳಿಗೆ) ಕಠಿಣವಾದ ಶಿಕ್ಷೆ ಇದೆ. ಹಾಗೆಯೇ (ವಿಶ್ವಾಸಿಗಳಿಗೆ) ಅಲ್ಲಾಹನಿಂದ ಕ್ಷಮಾದಾನವೂ ಸಂತುಷ್ಟಿಯೂ ಇದೆ. ಐಹಿಕ ಜೀವನವು ಮೋಸಗೊಳಿಸುವ (ತಾತ್ಕಾಲಿಕ ಸುಖಾನುಭವ) ಮಾತ್ರವಾಗಿದೆ."** **(ಪವಿತ್ರ ಖುರ್‌ಆನ್ 57 :21)**

*ಇಂದಿನ ಕಾಲಘಟ್ಟದ ಸಮಾಜಕ್ಕೆ ಶಾಂತಿಯನ್ನು ನೀಡುವುದಕ್ಕೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳನ್ನು ನಾನು ವಿವರಿಸುವೆನು.*

## ಇಂದಿನ ಸಾಮಾಜಿಕ ವ್ಯವಸ್ಥೆ

ದುರದೃಷ್ಟಕರವಾದುದೇನೆಂದರೆ, ಇಂದಿನ ಸಮಾಜದ ನೈತಿಕ ಸ್ವಭಾವಗಳ ಮೇಲೆ ಧಾರ್ಮಿಕ ಪ್ರಭಾವವು ವೇಗವಾಗಿ ನಿಶ್ಶೇಷವಾಗುತ್ತಾ ಇದೆ. ಈ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಲು ಧಾರ್ಮಿಕ ಕರ್ತವ್ಯಗಳಿಂದ ಬಿಡುಗಡೆ ಹೊಂದುವ ಬಲವತ್ತಾದ ಆಕಾಂಕ್ಷೆಯು ಸಾಮಾನ್ಯವಾಗಿ ಲೋಕದಲ್ಲಿ ಈಗ ಎಲ್ಲ ಕಡೆಗಳಲ್ಲೂ ವರ್ಧಿಸುತ್ತಾ ಇರುವುದನ್ನು ಕಾಣುತ್ತೇವೆ. ಧಾರ್ಮಿಕ ಮತ್ತು ನೈತಿಕ ನಿಬಂಧನೆಗಳನ್ನು ಕಡೆಗಣಿಸುವ ಮನೋಭಾವದೊಂದಿಗೆ ಭದ್ರತೆಯ ಕೊರತೆ ಬಗ್ಗೆ ಹಾಗೂ ಸಾಮಾಜಿಕ ವರ್ತನೆಯಲ್ಲಿ ನಿಯಮರಾಹಿತ್ಯದ ಬಗ್ಗೆ ಗಾಬರಿಯು ಅದರೊಂದಿಗೆ ಜಾರಿಯಲ್ಲಿದೆ. ಮನುಷ್ಯರ ಅದೃಷ್ಟವನ್ನು ರೂಪಿಸಿದ, ಮಾತ್ರವಲ್ಲ ಅವರ ದೈನಂದಿನ ಜೀವಿತ ಹೇಗಿರಬೇಕೆಂದು ನಿಗದಿಪಡಿಸಿದ ಜೀವಂತ ದೇವ ವಿಶ್ವಾಸವು ಸಹ ವೇಗವಾಗಿ ಕರಗಿ ಹೋಗುತ್ತಾ ಇದೆ. ಪವಿತ್ರ ಖುರ್‌ಆನ್ ಈ ಪರಿಸ್ಥಿತಿಯನ್ನು ಹೀಗೆ ಸಂಕ್ಷಿಪ್ತವಾಗಿ ಹೇಳಿದೆ: "ನೆಲದಲ್ಲೂ ಜಲದಲ್ಲೂ ಗಲಭೆ ಗೊಂದಲ ಗೋಚರಿಸಿದೆ." (30:42).

ಕ್ರೈಸ್ತ ಧರ್ಮವು ಪಶ್ಚಿಮದ ಪ್ರಧಾನ ಧರ್ಮವಾಗಿದ್ದು ಇಪ್ಪತ್ತನೆಯ ಶತಮಾನ ಪ್ರಾರಂಭವಾಗುವ ಮೊದಲು ಅದರ ಅನುಯಾಯಿಗಳ ನೈತಿಕ ಗುಣಗಳ ಮೇಲೆ ಬಲಿಷ್ಠವಾದ ಹಿಡಿತವನ್ನು ಪಶ್ಚಿಮ ದೇಶಗಳಲ್ಲಿ ಹೊಂದಿತ್ತು. ಆದರೆ ಈಗ ಆ ಸ್ಥಿತಿ ಇಲ್ಲ.

ವೈಜ್ಞಾನಿಕ ಸಮಾಜವಾದ, ವೇಗದ ವೈಜ್ಞಾನಿಕ ಪ್ರಗತಿ ಮತ್ತು ಲೌಕಿಕ ಅಭಿವೃದ್ಧಿಯ ಕಾರಣ ಎಂತಹ ನಾಗರಿಕತೆ ತಲೆಯೆತ್ತಿದೆ ಎಂದರೆ ಅದು ಕ್ರೈಸ್ತ ಧರ್ಮವನ್ನು ಕ್ರಮೇಣ ಹಿಂದೆ ಸರಿಯುವಂತೆ ಮಾಡಿದೆ ಮತ್ತು ಮನುಷ್ಯನ ಸಾಮಾಜಿಕ ನಡತೆಯ ರೂಪೀಕರಣದಲ್ಲಿ ಕ್ರಮೇಣ ಕುಸಿಯುತ್ತಿರುವ ಪ್ರಭಾವವನ್ನು ಅದು ಹೊಂದಿದೆ.

ನೈತಿಕ ನಡತೆಯು ಇಂದು ಪಶ್ಚಿಮದಲ್ಲಿ ಎಷ್ಟು ಹೆಚ್ಚು ಅಥವಾ ಕಡಿಮೆ ಕ್ರೈಸ್ತ ಧರ್ಮದಿಂದ ಪ್ರಭಾವಿತವಾಗಿದೆಯೋ ಅದೇ ರೀತಿ ಹೆಚ್ಚಿನ ಮುಸ್ಲಿಮ್ ದೇಶಗಳಲ್ಲಿ ಜನರ ನೈತಿಕ ನಡತೆಯ ಮೇಲೆ ಇಸ್ಲಾಮಿನ ಪ್ರಭಾವವೂ ಇದೆ. ಲೋಕದ ಬೇರೆ ಕಡೆಗಳಲ್ಲೂ ಜನರ ನೈತಿಕ ಸ್ವಭಾವದ ಕುಸಿತವು ಇದೇ ರೀತಿ ಇದೆ.

ಇಂದು ಲೋಕದಲ್ಲಿ ಬುದ್ಧ ಧರ್ಮಾನುಯಾಯಿಗಳೂ ಕನ್‌ಫ್ಯೂಶಿಯಸ್ ಧರ್ಮಾನುಯಾಯಿಗಳೂ ಹಿಂದೂ ಧರ್ಮಾನುಯಾಯಿಗಳೂ ಇರುವರಾದರೂ ದುರದೃಷ್ಟಕರವಾಗಿ ಅವರಲ್ಲಿ ಬೌದ್ಧ ಧರ್ಮ, ಕನ್‌ಫ್ಯೂಶಿಯಸ್ ಧರ್ಮ ಮತ್ತು ಹಿಂದೂ ಧರ್ಮವನ್ನು ಬಹಳ ಕಡಿಮೆ ಕಾಣುತ್ತೇವೆ.

"ನೀರು, ನೀರು ಎಲ್ಲ ಕಡೆಗಳಲ್ಲೂ ಇದೆ. ಆದರೆ ಕುಡಿಯಲು ಹನಿ ನೀರು ಇಲ್ಲ.'' ಎಂಬ ಕವಿ ವಚನದ ಹಾಗೆ ಧರ್ಮಾನುಯಾಯಿಗಳ ಸ್ಥಿತಿ ಇದೆ.

ಧಾರ್ಮಿಕ ಮತ್ತು ಪರಂಪರಾಗತ ನೈತಿಕ ನಿಯಮಗಳು ಒಂದು ಸಮಾಜದಲ್ಲಿ ಜಾರಿಯಲ್ಲಿಲ್ಲವಾದರೆ ಪೀಳಿಗೆಗೆ ನೈತಿಕತೆಯೊಂದಿಗೆ ಸಂಬಂಧ ನಷ್ಟವಾಗುವುದು ಮತ್ತು ಅದು ಪಾರಂಪರಿಕ ಆಚಾರಗಳನ್ನು ಸರಿ ಎಂದೂ ಅಂಗೀಕಾರ್ಹವೆಂದೂ ಗಣಿಸಲಾರದು. ಅಂತಹ ಪೀಳಿಗೆ ಶೂನ್ಯವೂ ವಿಷಮವೂ ಆದ ಪರಿಸ್ಥಿತಿಯನ್ನು ದಾಟಿ ಹೋಗುವುದು. ಇಂತಹ ಸ್ಥಿತಿಯಲ್ಲಿ ಅನ್ವೇಷಣೆ ಮಾಡುವ ಹೊಸ ಅಪೇಕ್ಷೆ ಉಂಟಾಗುವುದು. ಅನ್ವೇಷಣೆಯ ನಂತರ ಹೊಸ ಮತ್ತು ಸಮಾಧಾನಕರವಾದ ಜೀವಿತ ಶೈಲಿಯನ್ನು ಕಂಡುಹಿಡಿಯಲು ಸಾಧ್ಯವಾಗಬಹುದು ಅಥವಾ ಸಾಧ್ಯವಾಗದೆ ಇರಲೂಬಹುದು. ಅದು ನೈತಿಕ ಅರಾಜಕತೆಯಲ್ಲಿ ಕೊನೆಗೊಳ್ಳಲೂಬಹುದು. ನನ್ನ ಅಭಿಪ್ರಾಯದಲ್ಲಿ ಆಧುನಿಕ ಸಮಾಜವು ನೈತಿಕ ಅರಾಜಕತೆಯನ್ನು ಆಯ್ಕೆ ಮಾಡಿರುವುದಾಗಿ ಹೆಚ್ಚು ಕಡಿಮೆ ನನಗೆ ಕಾಣಿಸುತ್ತದೆ.

ಬದಲಾವಣೆಯ ಗಾಳಿ ಲೋಕದ ಎಲ್ಲ ಸಮಾಜಗಳಲ್ಲೂ ಬೀಸುತ್ತಾ ಇದೆ. ಪೂರ್ವ ದೇಶಗಳಲ್ಲೂ ಪಶ್ಚಿಮ ದೇಶಗಳಲ್ಲೂ ಧಾರ್ಮಿಕ ಸಮಾಜದಲ್ಲೂ ಧರ್ಮರಹಿತ ಸಮಾಜದಲ್ಲೂ ಇದನ್ನು ಕಾಣಬಹುದು. ಇದೊಂದು ಕೆಟ್ಟ ಗಾಳಿಯಾಗಿದೆ. ಲೋಕದ ವಾತಾವರಣವನ್ನೆಲ್ಲ ಇದು ಮಾಲಿನ್ಯಗೊಳಿಸುತ್ತಾ ಇದೆ.

ಆಧುನಿಕ ಲೋಕವು ಬಾಹ್ಯ ವಾತಾವರಣವು ಮಾಲಿನ್ಯಗೊಳ್ಳುವ ಬಗ್ಗೆ ಹೆಚ್ಚು ಜಾಗ್ರತೆಗೊಂಡಿದೆ ಎಂದು ಕಾಣಿಸುತ್ತದೆ. ಆದರೆ ಸಾಮಾಜಿಕ ವಾತಾವರಣದಲ್ಲಿ ಮಾಲಿನ್ಯದ ಮಟ್ಟ ವೇಗವಾಗಿ ವರ್ಧಿಸುತ್ತಿರುವ ಬಗ್ಗೆ ಅದು ಗಮನಿಸುತ್ತಾ ಇಲ್ಲ.

ಪವಿತ್ರ ಖುರ್‌ಆನ್ ಈ ಕಾಲಘಟ್ಟದ ಸ್ಥಿತಿಯನ್ನು ವರ್ಣಿಸುತ್ತಾ ಹೀಗೆ ಹೇಳಿದೆ: "ನಾವು ಆ ಕಾಲಘಟ್ಟವನ್ನು ಸಾಕ್ಷಿಯಾಗಿ ತರುತ್ತೇವೆ. ಆಗ ಮನುಷ್ಯನು ಸಂಪೂರ್ಣವಾಗಿ ಹಾನಿಗೊಳಗಾಗಿರುವನು – ಸತ್ಯವಿಶ್ವಾಸಿಗಳಾಗಿದ್ದು ಉತ್ತಮ ಕೆಲಸಮಾಡುತ್ತಾ ಇತರರೊಂದಿಗೆ ಸತ್ಯವನ್ನು ಅನುಸರಿಸಲು ಉಪದೇಶಿಸುವವರು ಮತ್ತು ಇತರರನ್ನು ಸಹನೆದೋರಲು ಉಪದೇಶಿಸಿ ಸ್ವತಃ ಸಹನೆದೋರುವವರು ಹೊರತು." (103 :2–4).

ಶೋಷಣೆ, ವಂಚನೆ, ಕಾಪಟ್ಯ, ಸ್ವಾರ್ಥ, ದೌರ್ಜನ್ಯ, ದುರಾಶೆ, ಭೋಗಲಾಲಸೆ, ಅಶಿಸ್ತು, ಭ್ರಷ್ಟಾಚಾರ, ಕಳ್ಳತನ, ದರೋಡೆ, ಮಾನವರ ಹಕ್ಕುಗಳ ಧ್ವಂಸ, ಮೋಸ, ವಿಶ್ವಾಸಘಾತ, ಹೊಣೆಗೇಡು, ಪರಸ್ಪರ ಗೌರವಿಸದಿರುವಿಕೆ, ವಿಶ್ವಸ್ತತೆಗೆ ಹಾನಿ, ಇವುಗಳು ಆಧುನಿಕ ಸಮಾಜದ ಹೆಗ್ಗುರುತುಗಳಾಗಿವೆ. ನಾಗರಿಕತೆಯ ತೆಳು ಪರದೆಯು, ಹೆಚ್ಚು ಹೆಚ್ಚಾಗಿ ಪ್ರಕಟಗೊಳ್ಳುತ್ತಾ ಇರುವ ಕುರೂಪವನ್ನು ಇನ್ನು ಮುಂದೆ ಅಡಗಿಸಡಲಾರದು. ಆದರೆ ಮಾನವ ದೌರ್ಬಲ್ಯಗಳ ಈ ಬೆದರಿಸುವ ಚಿಹ್ನೆಗಳು ಹಿಂದಿನ ಕಾಲದಲ್ಲಿ ಇರಲೇ ಇಲ್ಲ ಎಂದು ಹೇಳುವುದು ತಪ್ಪಾಗಿದೆ. ವಾಸ್ತವಿಕವಾಗಿ ಅನೇಕ ನಾಗರಿಕ ಸಮಾಜಗಳು ಹಿಂದಿನ ಕಾಲದಲ್ಲಿ ಇಂತಹ ಕೆಡುಕುಗಳಿಂದ ಪೀಡಿತವಾಗಿದ್ದುವು. ಮಾನವರ ಚರಿತ್ರೆಯಲ್ಲಿ ಅವರ ಅಧ್ಯಾಯವು ಮುಕ್ತಾಯವಾಗುವ ಮೊದಲು ನೈತಿಕ ಕೆಡುಕುಗಳು ಬಾಧಿಸಿದುದು ಲೋಕದ ಒಂದು ನಿರ್ದಿಷ್ಟ ಭಾಗದಲ್ಲಾಗಿತ್ತು ಎಂದು ಹೇಳುವುದು ಸಹ ಸರಿಯಲ್ಲ.

ಸಮಾಜ ವ್ಯವಸ್ಥೆ ಎಲ್ಲ ಪ್ರದೇಶಗಳಲ್ಲೂ ಕುಸಿದು ಹೋಗಲು ಪ್ರಾರಂಭವಾಗಿದೆ. ಸರ್ವಾಧಿಕಾರವುಳ್ಳ ದೇಶಗಳಿಗೆ ವಿರುದ್ಧವಾಗಿ ತಥಾಕಥಿತ ಸ್ವತಂತ್ರ ಲೋಕ ರಾಜ್ಯಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ವರ್ಧಿಸುತ್ತಿರುವ ಪ್ರಜ್ಞೆಯ ಕಾರಣ ಸಮತೋಲನೆಯ ಸ್ಥಿತಿಯು ಕುಸಿಯುತ್ತಿದ್ದು ಮನುಷ್ಯರಲ್ಲಿ ಸಾಮಾಜಿಕ ದುರ್ಗುಣಗಳು ವರ್ಧಿಸಲು ಹೇತುವಾಗಿದೆ.

ಸರ್ವಾಧಿಕಾರವಿರುವ ದೇಶಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕಾಗಿರುವ ಹಂಬಲವು ವರ್ಧಿಸುತ್ತಿರುವುದರಿಂದ ಸರಕಾರದ ದಬ್ಬಾಳಿಕೆಯಿಂದ ಬಿಡುಗಡೆ ಹೊಂದುವ ಉಗ್ರ ಹೋರಾಟಕ್ಕೆ ಅದು ಸೀಮಿತವಾಗಿದೆ. ಇಂತಹ ದೇಶಗಳ ಸೇನೆಯಲ್ಲಿ ಬಲಿಷ್ಠ ಎಡಪಕ್ಷ ಮನೋಭಾವವು ಅವರ ವಿರುದ್ಧ ವರ್ತಿಸದಿದ್ದರೆ ಈ ಜನರ ಹೋರಾಟವು ಬೇಗನೆ ಸಫಲವಾಗುವುದು. ಆದರೆ ಹಿಂದಿನ ಕಮ್ಯುನಿಸ್ಟ್ ದೇಶಗಳು ಕಮ್ಯುನಿಸಂನಿಂದ ಬಿಡುಗಡೆ ಹೊಂದಿದ ನಂತರ ಅಲ್ಲಿನ ಯುವಕರ ನೈತಿಕ ಮಟ್ಟದ ಬಗ್ಗೆ ಏನು ಸಂಭವಿಸುವುದು ಎನ್ನುವುದರ ಬಗ್ಗೆ ಶುಭ ಪ್ರತೀಕ್ಷೆ ಇಲ್ಲ.

ನಾಸ್ತಿಕ ಸಮಾಜದಲ್ಲಿ ಎರಡು ಪೀಳಿಗೆಗಳು ಬೆಳೆದಿರುತ್ತವೆ. ಅವರ ನೈತಿಕ ಸ್ವಭಾವ ಗುಣಗಳನ್ನು ಮತ್ತು ಶಿಸ್ತನ್ನು ಬೆಳೆಸಲು ಮಾರ್ಗದರ್ಶನ ಅವರಿಗೆ ದೊರೆತಿರಲಿಲ್ಲ. ಧಾರ್ಮಿಕ ಮೌಲ್ಯಗಳು ನೀಡುವ ಆಂತರಿಕ ನೈತಿಕ ಶಿಸ್ತು ಲಭಿಸದೆ ಇರುವುದರೊಂದಿಗೆ ಪಶ್ಚಿಮದಿಂದ ನೆರೆಯೋಪಾದಿ ಹರಿದು ಬರುತ್ತಿರುವ ನಿರರ್ಥಕ, ಹೊಣೆಗಾರಿಕೆ ರಹಿತ, ಭೋಗಲಾಲಸೆಯ ರಶ್ಯ ಮತ್ತು ಪೂರ್ವ ಯುರೋಪಿನ ದೇಶಗಳ ಯುವಕರ ಸ್ವಭಾವ ಗುಣಗಳಲ್ಲಿ ಹಾನಿಕಾರಕ ಪ್ರಭಾವಗಳನ್ನು ಮುಂದಿನ ವರ್ಷಗಳಲ್ಲಿ ಉಂಟುಮಾಡುವುದು.

ಧರ್ಮವಿಲ್ಲದೆ ಅನೇಕ ದಶಕಗಳ ಕಾಲ ಜೀವಿಸಿದ ಕಾರಣ ಸಮಾಜಕ್ಕೆ ಹಾನಿಯನ್ನುಂಟು ಮಾಡಿದುದರೊಂದಿಗೆ ಅದಕ್ಕೆ ಕೆಲವು ಸ್ಪಷ್ಟ ಉಪಕಾರಗಳನ್ನೂ ಅದು ಮಾಡಿಕೊಟ್ಟಿದೆ. ರಶ್ಯದ ಕ್ರಾಂತಿಯಿಂದ ಆ ದೇಶವು ಧರ್ಮದೊಂದಿಗೆ ಸಂಬಂಧ ವಿಚ್ಛೇದಿಸಿದುದು ಮಾತ್ರವಲ್ಲ ಭ್ರಷ್ಟ ಧಾರ್ಮಿಕ ವಿಶ್ವಾಸಗಳಿಂದಲೂ ನಂಬಿಕೆಗಳಿಂದಲೂ ಅದು ಮುಕ್ತವಾಯಿತು. ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಧರ್ಮಗಳ ಯಾವ ಪಂಗಡಗಳಿಗೆ ಸೇರಿದ್ದರೂ ಆ ಪಂಗಡಗಳು ಮಧ್ಯ ಕಾಲಘಟ್ಟದ ಅನೇಕ ಅಂಧ ವಿಶ್ವಾಸಗಳನ್ನು ಒಳಗೊಂಡಿದ್ದು ನೈಸರ್ಗಿಕ ವಾಸ್ತವಿಕತೆಗಳಿಗೆ ವಿರುದ್ಧವಾದ ಧಾರ್ಮಿಕ ನಂಬಿಕೆಗಳನ್ನು ಹೊಂದಿದ್ದುವು. ಎರಡು ವಿರುದ್ಧ ವಿಶ್ವಾಸಗಳಲ್ಲಿ ಎರಡು ಸಹ ಸತ್ಯಾಧಿಷ್ಠಿತವಾಗಲು ಸಾಧ್ಯವಿಲ್ಲ. ಧಾರ್ಮಿಕ ವಿಶ್ವಾಸಗಳು ಮತ್ತು ಪ್ರಕೃತಿ ಸತ್ಯಗಳ ಮಧ್ಯೆ ಇರುವ ವಿಭಿನ್ನತೆಗಳನ್ನು ಪರಿಶೀಲಿಸಲು ಮನಸ್ಸಿಗೆ ವಿಶಿಷ್ಟವಾದ ತರಬೇತಿ ನೀಡಬೇಕಾಯಿತು. ಸತ್ಯವನ್ನು ಕಂಡುಕೊಂಡ ನಂತರ ಗಾಬರಿಗೊಳ್ಳದಿರುವುದು ಆವಶ್ಯಕವಾಗಿದೆ. ಪೀಳಿಗೆಗಳ ನಂತರ ಪೀಳಿಗೆಗಳಿಗೆ ವಿರೋಧಾಭಾಸಕರವಾದ ವಿಶ್ವಾಸಗಳನ್ನು ಕಲಿಸಿದರೆ ಮಾತ್ರ ವಿರೋಧಾಭಾಸಗಳನ್ನು ಅಂಗೀಕರಿಸಿ ಪ್ರಾಯಶಃ ಜೀವಿಸಬಹುದು. ಕ್ರಮೇಣ ಧಾರ್ಮಿಕ ಸಮಾಜಗಳು ವಿರೋಧಾಭಾಸಗಳೊಂದಿಗೆ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಜೀವಿಸುತ್ತವೆ.

ಸಮಾಜವಾದಿ ಕ್ರಾಂತಿ ನಡೆದ ದೇಶಗಳಲ್ಲಿ ಅಲ್ಲಿನ ಜನರ ಅಂಧವಿಶ್ವಾಸಗಳನ್ನು ತೊಳೆದು ಹಾಗೆ ಅವರ ಮೆಳ್ಳೆಗಣ್ಣನ್ನೂ ಸಮೀಪ ದೃಷ್ಟಿಯನ್ನೂ ಗುಣಪಡಿಸಿತು. ಇದರ ಫಲಸ್ವರೂಪವಾಗಿ ಅವರಿಗೆ ನಿಷ್ಕಳಂಕತೆಯು ಕಾಪಟ್ಯರಾಹಿತ್ಯದ ಕಾರಣದಿಂದ ವರದಾನವಾಗಿ ದೊರಕಿತು. ಆ ಜನರ ನಿಷ್ಕಳಂಕತೆಯನ್ನು ನೈತಿಕ ಗುಣವಾಗಿ ಪರಿವರ್ತಿಸಲು ಸಾಧ್ಯವೇ ಎಂದು ಹೇಳಲು ಸಮಯವಾಗಿಲ್ಲ. ಏಕೆಂದರೆ ಹೋರಾಟದ ಕಷ್ಟಕಾಲವು ಮುಂದಿದೆ. ಆದರೆ ಒಂದು ವಿಷಯ ಖಂಡಿತವಾಗಿ ಹೇಳಬಹುದು. ಸತ್ಯವನ್ನು ಅಂಗೀಕರಿಸಲು ಮತ್ತು ಪೂರ್ವಗ್ರಹವಿಲ್ಲದೆ ನಂಬಲು ಈ ಜನರು ಲೋಕದ ಇತರ ಜನರಿಗಿಂತ ಹೆಚ್ಚು ಅರ್ಹತೆಯನ್ನು ಪಡೆದಿರುತ್ತಾರೆ.

ಆದರೆ ದುರದೃಷ್ಟಕರವಾಗಿ, ಲೋಕದ ಇತರ ಭಾಗಗಳಲ್ಲಿರುವ ಜನರು ವೈಯಕ್ತಿಕ ಸ್ವಾತಂತ್ರ್ಯದ ಪ್ರತಿಪಾದಕರಾದುದರಿಂದ ಅವರ ಬಗ್ಗೆ ಹಾಗೆ ಹೇಳಲು ಸಾಧ್ಯವಿಲ್ಲ. ವೈಯಕ್ತಿಕ ಸ್ವಾತಂತ್ರ್ಯದ ಹೆಸರಿನಲ್ಲಿ ತಮಗಿಷ್ಟವಿರುವ ಹಾಗೆ ಅವರು ವರ್ತಿಸುವವರಾಗಿದ್ದಾರೆ. ಈ ಮನೋಭಾವದ ನಾಯಕ ಸ್ಥಾನದಲ್ಲಿರುವ ಅಮೇರಿಕ ಪ್ರಥಮ ಲೋಕದ ಯುರೋಪಿಯನ್ ದೇಶಗಳ ಜನರನ್ನು ಮಾತ್ರವಲ್ಲ, ದ್ವಿತೀಯ ಮತ್ತು ತೃತೀಯ ಲೋಕದ ಜನರನ್ನೂ ಹೆಚ್ಚು ಹೆಚ್ಚಾಗಿ ಮತ್ತು ಗಾಢವಾಗಿ ಪ್ರಭಾವಕ್ಕೊಳಪಡಿಸುತ್ತಾ ಇದೆ. ವೈಯಕ್ತಿಕ ಸ್ವಾಂತಂತ್ರ್ಯದ ಈ ವಿಕೃತ ಕಲ್ಪನೆಯು ಮಾನವರನ್ನು ನೈತಿಕ ಜೀವಿತದ ಶಿಸ್ತಿನಿಂದ ಮುಕ್ತಿಗೊಳಿಸುತ್ತಾ ಇದ್ದು ಇದರ ಪ್ರತಿಧ್ವನಿ ವೈಜ್ಞಾನಿಕ ಸಮಾಜವಾದಿ ದೇಶಗಳಲ್ಲೂ ಕೇಳುತ್ತಾ ಇದೆ.

ಸ್ವವರ್ಗರತಿ ಪ್ರಿಯರಾದ ಪುರುಷರು ಮತ್ತು ಸ್ತ್ರೀಯರು, ದ್ರವ್ಯ ವ್ಯಸನಿಗರು, ಬೋಳುತಲೆಯವರು, ಲೈಂಗಿಕ ಕರ್ಮಚಾರಿಗಳು, ಎಲ್ಲ ವಿಧಗಳ ಅಪರಾಧಿಗಳು – ಇವರ ಸಂಖ್ಯೆ ಮತ್ತು ಶಕ್ತಿ ವರ್ಧಿಸುತ್ತಾ

ಇದೆ. ಅವರು ತಮ್ಮ ನಡೆವಳಿಕೆಯನ್ನು ಅಹಂಕಾರಭರಿತರಾಗಿ ಪ್ರತಿರೋಧಿಸುತ್ತಾ, "ಏಕೆ ಹಾಗೆ ಮಾಡಬಾರದು" ಎಂದು ಕೇಳುತ್ತಾ ಇರುವುದು ಈ ಕಾಲದ ಸಮಾಜಕ್ಕೆ ಬೆದರಿಕೆ ಒಡ್ಡುವಂತಹದ್ದಾಗಿದೆ.

## ಸಾಮಾಜಿಕ ವ್ಯವಸ್ಥೆಯ ಎರಡು ಋತು ಕಾಲಗಳು

ಪವಿತ್ರ ಖುರ್‌ಆನ್ ಎರಡು ಸಾಮಾಜಿಕ ಋತು ಕಾಲಗಳನ್ನು ವಿವರಿಸುತ್ತದೆ: 1. ಒಂದು ಋತು ಕಾಲದಲ್ಲಿ ಕೆಡುಕು ತಡೆಯಲ್ಪಡದೆ ವೃದ್ಧಿಗೊಳ್ಳುತ್ತಾ ಇರುತ್ತದೆ. 2. ಇನ್ನೊಂದು ಋತು ಕಾಲದಲ್ಲಿ ಕೆಡುಕಿನ ಬೆಳವಣಿಗೆಯನ್ನು ಬಲವಾಗಿ ತಡೆಗಟ್ಟಲಾಗುತ್ತದೆ.

ಇಸ್ಲಾಮಿನ ನೈತಿಕ ಉಪದೇಶಗಳನ್ನು ವಿಂಗಡಿಸಿ ಒಂದೊಂದಾಗಿ ಪರಿಶೀಲಿಸುವುದಾದರೆ, ಅದರಲ್ಲಿ ಅಡಕವಾದ ಸಂದೇಶವನ್ನು ಮನವರಿಕೆ ಮಾಡಿಕೊಳ್ಳಲು ಪಾಶ್ಚಿಮಾತ್ಯ ಮನಸ್ಸಿಗೆ ಕಷ್ಟಕರವಾಗುವುದು. ಏಕೆಂದರೆ ನೈತಿಕ ಉಪದೇಶಗಳನ್ನು ಒಂದು ಸಾಮಾಜಿಕ ಋತು ಕಾಲದ ಭಾಗವೆಂದು ಪರಿಗಣಿಸಿ ಅಧ್ಯಯನ ಮಾಡಬೇಕಾಗಿದೆ. ಅವುಗಳೆಲ್ಲವನ್ನೂ ಒಟ್ಟಿಗೆ ಸೇರಿಸಿ ನೋಡಬೇಕು. ಉದಾಹರಣೆಗೆ, ಮರಗಳ ಬಿದ್ದ ಎಲೆಗಳನ್ನು ನೋಡಿಕೊಂಡು ಅಥವಾ ಸಸ್ಯ ಗಿಡಗಳ ಎಲೆಗಳು ಬಣ್ಣ ಬದಲಾಯಿಸುವುದನ್ನು ನೋಡಿಕೊಂಡು ಶರತ್ಕಾಲವನ್ನು ಮನವರಿಕೆ ಮಾಡಿಕೊಳ್ಳಲಾಗದು. ಒಂದು ಚಿಹ್ನೆಯ ಮೂಲಕ ಒಂದರ ಬಗ್ಗೆ ಸಮಗ್ರವಾಗಿ ತಿಳಿಯಲಾಗದು. ಶರತ್ಕಾಲವು ಜೀವನವನ್ನು ನಿರುತ್ಸಾಹ ಪಡಿಸುವಾಗ ವಸಂತಕಾಲವು ಅದನ್ನು ಪ್ರೋತ್ಸಾಹಿಸುತ್ತದೆ. ಅದು ಕೇವಲ ತಾಪಮಾನ ವೃದ್ಧಿ ಮಾತ್ರವಲ್ಲ ಸಂಪೂರ್ಣ ವಾತಾವರಣವೇ ಬದಲಾಯಿಸುತ್ತದೆ ಮತ್ತು ಬೀಸುವ ಗಾಳಿ ಸಹ ಜೀವನದ ಉಸಿರಾಟ ಮಾಡುವಂತೆ ಭಾಸವಾಗುತ್ತದೆ. ಇದೇ ರೀತಿ ಸಾಮಾಜಿಕ ವ್ಯವಸ್ಥೆಗಳು ಸಹ ಕಾಲಾವಸ್ಥೆಯ ಹಾಗಿದೆ. ಅವುಗಳಿಗೆ ತಮ್ಮದೇ ಆದ ಗುಣ ವೈಶಿಷ್ಟ್ಯಗಳೂ ಪ್ರಭಾವಗಳೂ ಇರುತ್ತವೆ.

## ಲೌಕಿಕ ಸಮಾಜದ ನಿಸ್ಸಾರತೆ ಮತ್ತು ಅದು ಅಂತಿಮವಾಗಿ ತಲಪುವ ಸ್ಥಾನ

ಅನಿಸ್ಲಾಮಿಕವಾದ ಸಮಾಜವನ್ನು ಪವಿತ್ರ ಖುರ್‌ಆನ್ ಹೀಗೆ ಚಿತ್ರೀಕರಿಸುತ್ತದೆ: "ತಿಳಿದುಕೊಳ್ಳಿರಿ, ಇಹಲೋಕ ಜೀವನ ಒಂದು ಆಟವೂ ವಿನೋದವೂ ಅಲಂಕಾರವೂ ನೀವು ಪರಸ್ಪರ ಡಂಭಾಚಾರ ಮಾಡುವುದೂ ಸಂಪತ್ತು ಮತ್ತು ಸಂತತಿಗಳಲ್ಲಿ ಹೆಮ್ಮೆ ಪಡುವುದೂ ಮಾತ್ರವಾಗಿದೆ. (ಇಹಲೋಕ ಜೀವನ) ಒಂದು ಮಳೆಯ ಹಾಗೆ. ಆ ಮೂಲಕ ಉತ್ಪನ್ನವಾದ ಬೆಳೆಯು ಕೃಷಿಕನನ್ನು ಸಂತೋಷಪಡಿಸುತ್ತದೆ. ಅನಂತರ ಅದು ಒಣಗಿ ಹೋದಾಗ, ಅದು ಹಳದಿ ಬಣ್ಣಕ್ಕೆ ತಿರುಗಿ ನೀನು ಕಾಣುವೆ. ಅನಂತರ ಅದು ಹುಲ್ಲು ಕಡ್ಡಿಗಳಾಗುತ್ತವೆ. ಪರಲೋಕದಲ್ಲಿ (ಅವಿಶ್ವಾಸಿಗಳಿಗೆ) ಕಠಿಣವಾದ ಶಿಕ್ಷೆ ಇದೆ. ಹಾಗೆಯೇ (ವಿಶ್ವಾಸಿಗಳಿಗೆ) ಅಲ್ಲಾಹನಿಂದ ಕ್ಷಮಾದಾನವೂ ಸಂತುಷ್ಟಿಯೂ ಇದೆ. ಐಹಿಕ ಜೀವನವು ಮೋಸಗೊಳಿಸುವ (ತಾತ್ಕಾಲಿಕ) ಸುಖಾನುಭವ ಮಾತ್ರವಾಗಿದೆ." (57:21).

ಇದೇ ವಿಷಯಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಪುನಃ ಹೀಗೆ ಹೇಳುತ್ತದೆ: "ಅವಿಶ್ವಾಸಿಗಳಾದರೋ, ಅವರ ಕೃತ್ಯಗಳು ಮರುಭೂಮಿಯಲ್ಲಿರುವ ಮರೀಚಿಕೆಯಂತೆ. ಬಾಯಾರಿಕೆಯಾದವನು ಅದನ್ನು ನೀರೆಂದು ಗ್ರಹಿಸುತ್ತಾನೆ. ಅವನು ಹತ್ತಿರ ಬಂದಾಗ ಅದು ಏನೂ ಅಲ್ಲವೆಂದು ಅವನಿಗೆ ಮನವರಿಕೆಯಾಗುತ್ತದೆ. ಅಲ್ಲಿ ಅವನು ಪೂರ್ಣವಾಗಿ ಲೆಕ್ಕ ತೆಗೆಯುವ ಅಲ್ಲಾಹನನ್ನು ಕಾಣುವನು. ಅಲ್ಲಾಹನು ಶೀಘ್ರವಾಗಿ ಲೆಕ್ಕ ತೆಗೆಯುವವನಾಗಿದ್ದಾನೆ." (24:40).

ಪವಿತ್ರ ಖುರ್‌ಆನ್ ವರ್ಣಿಸುತ್ತದೆ – ಬಾಯಾರಿಕೆಯಿಂದ ಬಳಲುವವನಿಗೆ ಮರೀಚಿಕೆಯು ನೀರಿನ ಆಶೆಯನ್ನು ನೀಡಿ ಆಕರ್ಷಿಸುತ್ತದೆ. ಅವನು ಅದನ್ನು ಹಿಂಬಾಲಿಸಿ ಓಡುತ್ತಾನೆ. ಕೊನೆಗೆ ನಿರಾಶೆಗೊಂಡು ನಿಂತುಬಿಡುತ್ತಾನೆ. ಆಗ ಅವನು ಶಿಕ್ಷೆಗೆ ಗುರಿಯಾಗುತ್ತಾನೆ. ಆಗ ಅವನಿಗೆ ತಿಳಿಯುತ್ತದೆ ತಾನು ಓಡಿ ತಲಪಲು ಬಯಸಿದ ಗುರಿ ಶೂನ್ಯವೆಂದು. ಮರೀಚಿಕೆಯು ದಿಢೀರೆಂದು ನಿಂತುಬಿಡುವಾಗ ಅವನಿಗೆ ತಾನು ಯಾವುದನ್ನು ಪಡೆಯಲು ಓಡಿದೆನೋ ಅದು ಏನೂ ಅಲ್ಲವೆಂದು ತಿಳಿಯುತ್ತದೆ. ಲೋಕದಲ್ಲಿ ಲೌಕಿಕ ಸುಖ ಭೋಗಗಳಲ್ಲಿ ಜೀವಿಸುವವರ ಗತಿ ಹೀಗೆಯೇ ಆಗುತ್ತದೆ. ಪವಿತ್ರ ಖುರ್‌ಆನ್ ಪ್ರಕಾರ ಇಂತಹ ಜನರ ಸಮಾಜದ ಸ್ಥಿತಿ ನಿರರ್ಥಕವಾಗುತ್ತದೆ.

ಇದಕ್ಕೆ ವಿರುದ್ಧವಾಗಿ ಧರ್ಮವು ಹೀಗೆ ಒಂದು ವಿಚಾರವನ್ನು ಪ್ರತಿಪಾದಿಸುತ್ತದೆ. ಮನುಷ್ಯನ ಜೀವಿತ ಇಹಲೋಕಕ್ಕೆ ಮಾತ್ರ ಸೀಮಿತವಾಗಿಲ್ಲ. ಮನುಷ್ಯನಿಗೆ ಇಹಲೋಕ ಜೀವಿತದ ನಂತರ ಪರಲೋಕ ಜೀವಿತವೂ ಇದೆ.

ಇಸ್ಲಾಮ್ ಮತ್ತು ಇತರ ಅನೇಕ ಧರ್ಮಗಳು ಪ್ರತಿಪಾದಿಸುವ ಹಾಗೆ ನಮ್ಮ ಜೀವಿತವೂ ಇಹಲೋಕದಲ್ಲಿ ಸಂಪೂರ್ಣವಾಗಿ ಕೊನೆಗೊಳ್ಳುವುದಿಲ್ಲವಾದರೆ ಇಹಲೋಕ ಜೀವಿತವು ಪರಲೋಕ ಜೀವಿತದಿಂದ ಬೇರೆಯಾಗಿ ಪರಿಗಣಿಸಲಾಗದು. ಪರಲೋಕ ಜೀವಿತವು ಇಹಲೋಕ ಜೀವಿತದ ಮುಂದುವರಿಕೆ ಎಂದು ಗಣಿಸಬೇಕು. ಇಂತಹ ಸ್ಥಿತಿಯಲ್ಲಿ ಮನುಷ್ಯನ ಜೀವಿತದಲ್ಲಿ ಇಹಲೋಕ ಜೀವಿತದ ಪ್ರಭಾವವನ್ನು ಕಡೆಗಣಿಸುವುದು ಅತ್ಯಂತ ದೊಡ್ಡ ಬುದ್ಧಿ ವಿಹೀನತೆಯಾಗುವುದು. ಕೆಟ್ಟ, ಅನೈತಿಕ ಮತ್ತು ಅನಾರೋಗ್ಯಕರ ಪ್ರಭಾವಗಳು ಅನಾರೋಗ್ಯಕರ ಆತ್ಮಕ್ಕೆ ಪರಲೋಕದಲ್ಲಿ ಜನ್ಮ ನೀಡುವುದು ಖಂಡಿತವಾಗಿದೆ.

## ಪರಲೋಕ ಜೀವಿತದ ನಿರಾಕರಣೆ

ಪರಲೋಕ ಜೀವಿತದ ಬಗ್ಗೆ ಇಸ್ಲಾಮೀ ಸಿದ್ಧಾಂತದ ಬಗ್ಗೆ ಸವಿಸ್ತಾರವಾಗಿ ವಿವರಿಸಲು ಈಗ ಸಾಧ್ಯವಿಲ್ಲವಾದರೂ ಸಂಕ್ಷಿಪ್ತವಾಗಿ ಅದರ ಬಗ್ಗೆ ಹೀಗೆ ಹೇಳಬಹುದು: ಭ್ರೂಣಾವಸ್ಥೆಯಲ್ಲಿರುವ ಮಗು ತನ್ನ ಗರ್ಭವತಿ ತಾಯಿಯ ಕೆಲವು ರೋಗಗಳಿಂದ ಬಾಧಿತವಾಗುವ ರೀತಿಯಲ್ಲಿ ನಾವು ಇಹಲೋಕ ಜೀವಿತದಲ್ಲಿ ನಡೆಸುವ ಜೀವಿತದಿಂದ ನಮ್ಮ ಆತ್ಮಗಳು ಪ್ರಭಾವಿತವಾಗುತ್ತವೆ. ತಾಯಿಯ ರೋಗದಿಂದ ಬಾಧಿತವಾದ ಮಗು ಜನನದಿಂದ ವೊದಲುಗೊಂಡು ಅಂಗವಿಕಲತೆಯಿಂದ ಕೂಡಿದ್ದು ಆರೋಗ್ಯವಂತ ಮಕ್ಕಳ ಮಧ್ಯೆ ಅತ್ಯಂತ ನಿಸ್ಸಹಾಯವಸ್ಥೆಯಲ್ಲಿ ನರಕ ಸಮಾನ ಸ್ಥಿತಿಯಲ್ಲಿ ಜೀವಿಸಬೇಕಾಗುತ್ತದೆ. ಅದರ ಪ್ರಜ್ಞೆ ಬೆಳೆದ ಹಾಗೆ ಅದು ಅನುಭವಿಸುವ ದಾರುಣ ಯಾತನೆಯು ವರ್ಧಿಸುತ್ತಾ ಹೋಗುವುದು. ನಾವು ನಮ್ಮ

ನಮ್ಮ ಸ್ವರ್ಗ–ನರಕಗಳನ್ನು ಸೃಷ್ಟಿಸುವುದು ಹೇಗೆ ಎನ್ನುವುದರ ಇದು ಇಸ್ಲಾಮ್ ನೀಡುವ ವಿವರಣೆಯ ಸಂಕ್ಷಿಪ್ತ ನಿರೂಪಣೆಯಾಗಿದೆ.

ಮೇಲೆ ವಿವರಿಸಿದ ಕಾರಣದಿಂದ ಸ್ಪಷ್ಟವಾಗುವುದೇನೆಂದರೆ, ಜವಾಬ್ದಾರಿ ರಹಿತ, ಕ್ರಮ ರಹಿತ, ಕೆಟ್ಟ ಸ್ವಭಾವ ಗುಣಗಳನ್ನು ಅವು ಮೇಲಿಂದ ಮೇಲೆ ನೋಡುವಾಗ ಆಕರ್ಷಕವಾಗಿ ಕಂಡರೂ ಇಂತಹ ಸ್ವಭಾವ ಗುಣಗಳನ್ನು ಪ್ರೋತ್ಸಾಹಿಸುವ ಸಾಮಾಜಿಕ ವ್ಯವಸ್ಥೆಯನ್ನು ತಿರಸ್ಕರಿಸಬೇಕಾದುದು ಆವಶ್ಯಕ.

ಸಮಾಜವನ್ನು ಹೇಗೆ ರೂಪಿಸಬೇಕು ಮತ್ತು ಯಾವ ತತ್ವಾಧಾರಗಳಲ್ಲಿ ಎಂಬುದರ ಬಗ್ಗೆ ಇಸ್ಲಾಮೀ ತತ್ವಗಳನ್ನು ನಿರಾಕರಿಸುವ ಲೌಕಿಕ ವಾದಿಗಳು ನೀಡುವ ಉತ್ತರ ಹೀಗಿದೆ: ಸತ್ಯವಿಶ್ವಾಸಿಗಳು ಪರಲೋಕದ ಬಗ್ಗೆ ನೀಡುವ ವಿವರಣೆಗಳು ಅವರಿಗೆ ಸಮಂಜಸವಾಗಿವೆ. ಆದರೆ ತಥಾಕಥಿತ ಪರಲೋಕದಿಂದ ಆಗಮಿಸಿ ಅವರು ಹೇಳಿದುದಕ್ಕೆ ಸಾಕ್ಷ್ಯ ನೀಡಲು ಯಾರಾದರೂ ಆಗಮಿಸಿದ್ದಾರೆಯೋ? ಕೈಯಲ್ಲಿರುವ ಒಂದು ಪಕ್ಷಿಯಿಂದ ತೃಪ್ತರಾಗಿರುವುದು ಪೊದೆಯೊಳಗಿರುವ ಎರಡು ಹಕ್ಕಿಗಳಿಗೋಸ್ಕರ ಹಂಬಲಿಸುವುದಕ್ಕಿಂತ ಉತ್ತಮವಲ್ಲವೇ?

ಇಸ್ಲಾಮೀ ಸಿದ್ಧಾಂತದ ಪ್ರಕಾರ ಇಹಲೋಕದ ಜೀವಿತವು ಪರಲೋಕದ ಜೀವಿತದೊಂದಿಗೆ ಮುಂದುವರಿಯುತ್ತದೆ. ಮೃತ್ಯು ಮೂಲಕ ಒಂದು ಕ್ಷಣ ಇದು ನಿಂತು ಹೋಗುತ್ತದೆಯಾದರೂ ಜೀವಿತದ ಒಂದು ಹಂತ ಮುಗಿದು ಇನ್ನೊಂದು ಹಂತ ಪ್ರಾರಂಭಗೊಳ್ಳುತ್ತದೆ. ಇದಕ್ಕೆದುರಾಗಿ ಲೌಕಿಕ ವಾದಿಗಳು ಹೀಗೆ ಹೇಳುತ್ತಾರೆ: ಜೀವನವು ಸ್ವಲ್ಪ ಕಾಲದ ಆಕಸ್ಮಿಕ ಪ್ರಜ್ಞಾವಸ್ಥೆಯ ಅವಧಿಯಾಗಿದೆ. ಮೃತ್ಯುವಿನೊಂದಿಗೆ ಅದು ಶೂನ್ಯತೆಯಲ್ಲಿ ಮುಳುಗಿ ಹೋಗುತ್ತದೆ. ಆದುದರಿಂದ ಸಾಮಾಜಿಕ ವ್ಯವಸ್ಥೆ ಮನುಷ್ಯನ ಅಲ್ಪಕಾಲಾವಧಿಯ ಇಹಲೋಕ ಜೀವಿತ ಕಾಲಕ್ಕೆ ಆವಶ್ಯಕತೆಗಳನ್ನು ಈಡೇರಿಸುವಂತಹದು ಆಗಿರಬೇಕು. ಮನುಷ್ಯನು ಜೀವಿಸಿರುವ ಕಾಲದಲ್ಲಿ ಮಾತ್ರ ಅವನು ಸಮಾಜದ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿರುತ್ತದೆ. ಅವನು ಮಾಡುವ, ಇತರರು ಕಾಣುವ ಕೆಲಸಗಳಿಗೆ ಅವನು ಜವಾಬ್ದಾರನಾಗಿರುತ್ತಾನೆ. ಅವನ ಯೋಚನೆಗಳು, ಅವನ ನಿರ್ಧಾರಗಳು, ಅವನ ಗೂಢಾಲೋಚನೆಗಳು, ರಹಸ್ಯವಾಗಿ ಸೂಕ್ಷ್ಮವಾಗಿ ನಡೆಸಿದ ಅಪರಾಧಗಳು ಕಂಡು ಹಿಡಿಯಲ್ಪಡಲಾರವು ಮತ್ತು ಪ್ರಶ್ನಿಸಲ್ಪಡಲಾರವು. ಸಮಾಜದ ವಿರುದ್ಧ ಮಾಡುವ ಅಪರಾಧಗಳು ಸಂಶಯಾತೀತವಾಗಿ ಸಾಬೀತಾದರೆ ಮಾತ್ರ ಒಬ್ಬನು ಅಪರಾಧಿ ಎಂದು ನಿರ್ಧರಿಸಲ್ಪಡುತ್ತಾನೆ. ಇದರಿಂದ ಅನ್ಯಾಯ ಸಂಭವಿಸುವ ಸಾಧ್ಯತೆಗಳಿರುತ್ತವೆ. ಇಂತಹ ಸಮಾಜ ವ್ಯವಸ್ಥೆಯಲ್ಲಿ ನ್ಯಾಯಪಾಲನೆ ಮೇಲಿಂದ ಮೇಲಿರುತ್ತದೆ ಮತ್ತು ಸೀಮಿತವಾಗಿರುತ್ತದೆ. ಸಮಾಜ ವಿರುದ್ಧ ಅಪರಾಧ ಮಾಡಲು ಸಹಾಯಕವೂ ಆಗಿರುತ್ತವೆ. ಈ ಸಮಾಜ ಸ್ವಾರ್ಥ ಹಿತಾಸಕ್ತಿಗಳನ್ನು ಬೆಳೆಸುತ್ತದೆ ಮತ್ತು ವ್ಯಕ್ತಿಗಳು ಅತ್ಯಂತ ಹೆಚ್ಚು ಸ್ವಾರ್ಥಿಗಳಾಗಲು ಪ್ರೋತ್ಸಾಹಿಸುತ್ತದೆ.

ಗಮನಿಸಬೇಕಾದುದೇನೆಂದರೆ, ದೇವನ ಅಸ್ತಿತ್ವದ ಬಗ್ಗೆ ವಿಶ್ವಾಸವಿಲ್ಲದ ಸಮಾಜದಲ್ಲಿ ಅಥವಾ ಅರ್ಧ ವಿಶ್ವಾಸ ಹೊಂದಿರುವ ಸಮಾಜದಲ್ಲಿ ಮೃತನಾದ ನಂತರ ಪರಲೋಕದಲ್ಲಿ ಇಹಲೋಕದ ಕೃತ್ಯಗಳ ಬಗ್ಗೆ ಪ್ರಶ್ನಿಸಲ್ಪಡಬಹುದೆಂಬ ವಿಶ್ವಾಸವನ್ನು ಪೂರ್ಣವಾಗಿ ತಿರಸ್ಕರಿಸಲಾಗುತ್ತಿದೆ. ಅಥವಾ ಆ ವಿಶ್ವಾಸವನ್ನು ಹಗುರವಾಗಿ ಕಾಣಲಾಗುತ್ತಿದೆ ಮತ್ತು ಅದನ್ನು ಅರ್ಥಶೂನ್ಯವನ್ನಾಗಿ ಮಾಡಲಾಗುತ್ತದೆ. ಇಂತಹ ಸಮಾಜದಲ್ಲಿ ಅಪರಾಧ ಎಂದರೇನೆಂದು ವಿವರಣೆ ನೀಡುವುದು ಕಷ್ಟಕರವಾಗುತ್ತಿದೆ. ಆದರೆ ಸರಿಯಾದ ನೈತಿಕ ಸಿದ್ಧಾಂತವಿರುವ ಸಮಾಜದಲ್ಲಿ ಅದರ ವಿವರಣೆ ಸ್ಪಷ್ಟವಾಗಿರುತ್ತದೆ. ದೇವ ವಿಶ್ವಾಸವಿಲ್ಲದ ಸಮಾಜದಲ್ಲಿ ಜನರು ನಿಯಮವನ್ನು ಉಲ್ಲಂಘಿಸಿ ಅಪರಾಧ ಮಾಡಿದರೆ ಅವರು ಮಾಡಿದುದು ಅಪರಾಧ ಎಂದು ಅವರಿಗೆ ಮನವರಿಕೆ ಮಾಡಿಕೊಡುವುದು ಕಷ್ಟಕರವಾಗಿದೆ. ನಿಯಮವೆಂದರೇನು? ಅದು ನಿರಂಕುಶ ಪ್ರಭುವಿನ ಆಜ್ಞೆ, ಏಕಪಕ್ಷಾಧಿಷ್ಠಿತ ಸರಕಾರಗಳ ತೀರ್ಪು ಅಥವಾ ಪ್ರಜಾಪ್ರಭುತ್ವವಾದಿ ಬಹುಸಂಖ್ಯಾತರ ಆಜ್ಞೆ ಆಗಿರುತ್ತದೆ. ಸಾಮಾನ್ಯ ಮನುಷ್ಯನಿಗೆ ಮೇಲೆ ವಿವರಿಸಿದ ಆಜ್ಞೆಗಳಲ್ಲಿ ಯಾವುದು ನ್ಯಾಯಬದ್ಧವಾಗಿದೆ ಮತ್ತು ನೈತಿಕ ಸಿದ್ಧಾಂತದ ಮೇಲೆ ಇದೆ ಎಂದು ಕಾಣಿಸುತ್ತದೆ? ನೈತಿಕ ಸಿದ್ಧಾಂತ ಎಂದರೇನು?

ಒಬ್ಬನು ತನ್ನ ಅಸ್ತಿತ್ವವನ್ನು ದೇವನ ಮೂಲಕ ಪಡೆದುದು ಎಂದು ಯೋಚಿಸುವುದಿಲ್ಲವಾದರೆ, ಇಹಲೋಕದ ಕೃತ್ಯಗಳ ಬಗ್ಗೆ ಪರಲೋಕದಲ್ಲಿ ಪ್ರಶ್ನಿಸಲ್ಪಡುವ ಬಗ್ಗೆ ಭಯಪಡುವುದಿಲ್ಲವಾದರೆ ಅವನು ಪರಲೋಕದ ಬಗ್ಗೆ ವಿಶ್ವಾಸವಿಲ್ಲದವನಾಗಿರುತ್ತಾನೆ. ಆದುದರಿಂದ ಅವನು ನೀಡುವ ಉತ್ತರ ಬೇರೆಯೇ ರೀತಿ ಇರುತ್ತದೆ. ಆದರೆ ಅದು ಸಮಾಜಕ್ಕೆ ಜವಾಬ್ದಾರನಾಗಿರುವವನದಾಗಿರುವುದಿಲ್ಲ. ಅವನು ಕೇವಲ ಅಲ್ಪಕಾಲ ಇಹಲೋಕದಲ್ಲಿ ಜೀವಿಸುವವನಾಗಿರುತ್ತಾನೆ. ಅವನಿಗೆ ಸಮಾಜ ಬೇಕಾದುದು ಅವನ ಸ್ವಂತ ಲಾಭಕ್ಕೋಸ್ಕರವಾಗಿದೆ. ಅವನು ಸಮಾಜದ ಉನ್ನತ ಅಧಿಕಾರಿಗಳಿಗೆ ವಿಧೇಯನಾಗಿರುವುದು ಅದು ಆವಶ್ಯಕವಾದುದರಿಂದಾಗಿದೆ. ಅವನು ತಾನು ಪಡೆದುಕೊಂಡ ಪ್ರಯೋಜನಗಳೊಂದಿಗೆ ತಪ್ಪಿಸಿಕೊಂಡು ಕೆಲವು ಕ್ಷಣಗಳ ಸುಖ ಪಡೆಯಲು ಬಯಸುವಾಗ ಸಮಾಜದಿಂದ ಕಂಡು ಹಿಡಿಯಲ್ಪಡದಿರಲು ಜಾಗ್ರತೆ ವಹಿಸುವುದಾದರೆ ಏಕೆ ಹಾಗೆ ಮಾಡಬಾರದು? ತಥಾಕಥಿತ ನೈತಿಕ ತಡೆಗಳು ಅವನನ್ನು ಹೇಗೆ ತಡೆಗಟ್ಟಬಲ್ಲದು?

ಅಪರಾಧಗಳ ಬಗ್ಗೆ ಇಂತಹ ಮನೋಭಾವ ಕಾಲ ಕಳೆದ ಹಾಗೆ ಇಂತಹ ದೇವವಿಶ್ವಾಸ ರಹಿತ ಮತ್ತು ಲೌಕಿಕ ಸಮಾಜಗಳಲ್ಲಿ ಬೆಳವಣಿಗೆ ಪಡೆದು ಶಕ್ತಿಶಾಲಿಯಾಗುತ್ತದೆ.

ಲೌಕಿಕ ಸಮಾಜದ ಮುಖ್ಯ ಸ್ವರೂಪ ಹೀಗೆಯೇ ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ವಿವರಿಸಿದೆ: ಅವಿಶ್ವಾಸಿಗಳು ಹೇಳುತ್ತಾರೆ: "ನಮ್ಮ ಇಹಲೋಕ ಜೀವನದ ಹೊರತು ಬೇರೆ ಜೀವನವಿಲ್ಲ. ನಾವು (ಇಲ್ಲಿಯೇ) ಸಾಯುತ್ತೇವೆ. (ಇಲ್ಲಿಯೇ) ಬದುಕುತ್ತೇವೆ. ನಾವು ಪುನಃ ಜೀವಂತ ಗೊಳಿಸಲ್ಪಡಲಾರೆವು." (23:38). ಈ ವಚನದಲ್ಲಿ ಅವಿಶ್ವಾಸಿಗಳು ಹೇಳುತ್ತಾರೆ: ಮರಣಾನಂತರ ಜೀವಿತ ಅಥವಾ ಬೇರೆಲ್ಲಿಯಾದರೂ ಜೀವಿತದ ವಿಶ್ವಾಸವನ್ನು ನಾವು ತಿರಸ್ಕರಿಸುತ್ತೇವೆ.

ಅವಿಶ್ವಾಸಿಗಳು ಹಿಂದಿನ ಕಾಲದ ಪ್ರವಾದಿಗಳನ್ನು ಅಪಹಾಸ್ಯ ಮಾಡುತ್ತಾ ಹೇಳುತ್ತಾ ಇದ್ದರು: "ನಾವು ಎಲುಬುಗಳಾಗಿಯೂ ಚೂರು ಚೂರುಗಳಾಗಿಯೂ ಮಾರ್ಪಟ್ಟ ಬಳಿಕ ಪುನಃ ಒಂದು ಹೊಸ ಸೃಷ್ಟಿಯಾಗಿ ಎಬ್ಬಿಸಲ್ಪಡುವೆವೇ?' ಎಂದು ಅವರು ಕೇಳುತ್ತಾರೆ." (17:50)

"ಅವರು ಹೇಳುತ್ತಾರೆ: ಏನು ನಾವು ಮೃತಪಟ್ಟು ಮಣ್ಣು ಮತ್ತು ಅಸ್ಥಿಗಳಾಗಿ ಮಾರ್ಪಟ್ಟ ಬಳಿಕ ಪುನಃ ಎಬ್ಬಿಸಲ್ಪಡುವೆವೇ?" (23:83).

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಮರಣಾನಂತರ ಜೀವಿತದ ಬಗ್ಗೆ ವಿಶ್ವಾಸವಿಲ್ಲದಿರುವಿಕೆಯೇ ಲೌಕಿಕ ಸಮಾಜದ ಎಲ್ಲ ಕೆಟ್ಟ ಕೆಲಸಗಳಿಗೆ ಮೂಲ ಕಾರಣವಾಗಿದೆ. ಇದೇ ಕಾರಣದಿಂದ ಮರಣಾನಂತರದ ಜೀವಿತದ ಬಗ್ಗೆ ಮತ್ತು ನ್ಯಾಯ ತೀರ್ಮಾನದ ದಿನದ ಬಗ್ಗೆ ಇಸ್ಲಾಮಿನಲ್ಲಿ ಒತ್ತಿ ಹೇಳಲಾಗಿದೆ.

ಒಂದು ಹದೀಸಿನಲ್ಲಿ ಇಬ್ನು ಮಸ್‌ಊದ್ ಹೀಗೆ ವರದಿ ಮಾಡಿದ್ದಾರೆ: ಹಝ್ರತ್ ಪೈಗಂಬರರು(ಸ) ಒಂದು ಆಯತಾಕೃತಿಯನ್ನು ಚಿತ್ರಿಸಿದರು. ಅದರ ಮಧ್ಯದಲ್ಲಿ ಒಂದು ಗೆರೆಯನ್ನು ಉದ್ದವಾಗಿ ಎಳೆದು ಅದರ ತುದಿ ಆಯತಾಕೃತಿಯನ್ನು ದಾಟಿ ಹೋಗುವಂತೆ ಮಾಡಿದರು. ಈ ಮಧ್ಯ ರೇಖೆಯ ಅಡ್ಡವಾಗಿ ಹಝ್ರತ್ ಪೈಗಂಬರರು(ಸ) ಅನೇಕ ಚಿಕ್ಕ ಗೆರೆಗಳನ್ನು ಬರೆದರು. ಈ ಚಿತ್ರ ಮನುಷ್ಯನನ್ನು ಸೂಚಿಸುತ್ತದೆ ಎಂದೂ ಆಯತಾಕಾರ ಮೃತ್ಯುವನ್ನು ಸೂಚಿಸುತ್ತದೆ ಎಂದೂ ಮಧ್ಯದ ಗೆರೆ ಮನುಷ್ಯನ ಆಶಾಭಿಲಾಷೆಗಳನ್ನು ಸೂಚಿಸುತ್ತವೆ ಎಂದೂ ಚಿಕ್ಕಗೆರೆಗಳು ಜೀವನದಲ್ಲಿ ಮನುಷ್ಯನು ಎದುರಿಸಬೇಕಾದ ಪರೀಕ್ಷೆಗಳನ್ನು ಸೂಚಿಸುತ್ತವೆ ಎಂದೂ ಮನುಷ್ಯನು ಒಂದು ಪರೀಕ್ಷೆಗೆ ಗುರಿಯಾಗದಿದ್ದರೆ ಬೇರೆ ಪರೀಕ್ಷೆಗಳಿಗೆ ಗುರಿಯಾಗುತ್ತಾನೆಂದೂ ಹಝ್ರತ್ ಪೈಗಂಬರರು(ಸ) ಹೇಳಿದರು. (ಬುಖಾರಿ).

ಇನ್ನೊಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ – ಹಝ್ರತ್ ಪೈಗಂಬರರು(ಸ) ಹೇಳಿದರು: ಮೃತ್ಯು ಲೌಕಿಕ ಸುಖವನ್ನು ಮುಕ್ತಾಯಗೊಳಿಸುತ್ತದೆ. (ತಿರ್ಮಿಧೀ).

### ಲೌಕಿಕ ಸಮಾಜದ ನಾಲ್ಕು ವೈಶಿಷ್ಟ್ಯಗಳು

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: (ಅಪರಾಧಿಗಳೊಡನೆ ಅವರು ಕೇಳುವರು:) "ನೀವು ಸಖರ (ನರಕ)ಕ್ಕೆ ಗುರಿಯಾಗಲು ಕಾರಣವೇನು?" ಅವರು ಉತ್ತರಿಸುವರು: "ನಾವು ನಮಾಝ್ ಮಾಡುತ್ತಿರಲಿಲ್ಲ. ಬಡವರಿಗೆ ನಾವು ಆಹಾರ ನೀಡುತ್ತಿರಲಿಲ್ಲ. ವ್ಯರ್ಥವಾದ ಮಾತುಕತೆಗಳಲ್ಲಿ ಮುಳುಗಿದವರೊಡನೆ ನಾವು ಸಹ ಮುಳುಗಿದ್ದೆವು. ನ್ಯಾಯ ತೀರ್ಮಾನದ ದಿನವನ್ನು ನಾವು ಅಲ್ಲಗಳೆಯುತ್ತಿದ್ದೆವು." (ಪವಿತ್ರ ಖುರ್‌ಆನ್ 74: 43–47).

ದೇವನ ಬಗ್ಗೆ ನಂಬಿಕೆ ಇಲ್ಲದ ಮತ್ತು ಲೌಕಿಕ ಸಮಾಜದ ಬಗ್ಗೆ ಸ್ಪಷ್ಟವಾಗಿಯೂ ಸಮಗ್ರವಾಗಿಯೂ ಹೀಗೆ ಚೆನ್ನಾಗಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅದರ ಲಕ್ಷಣಗಳು ಹೀಗಿವೆ:

1. ಆರಾಧನೆ ಮಾಡದಿರುವುದು.

2. ಬಡವರಿಗೆ ಆಹಾರ ನೀಡದಿರುವುದು.

3. ನಿರರ್ಥಕ ಕೆಲಸಗಳಲ್ಲಿ ಮಗ್ನರಾಗಿರುವುದು.

4. ಅಂತಿಮ ನ್ಯಾಯ ವಿಚಾರಣೆ ದಿನದ ಬಗ್ಗೆ ನಿರಾಕರಣೆ.

ಈ ವಿಷಯದ ಬಗ್ಗೆ ಹೆಚ್ಚಿನ ವಿವರಣೆ ನೀಡುವ ಮೊದಲು ಒಂದು ಸಮಾಜವು ಹೇಗಿದೆ ಎಂದು ನಿರ್ಧರಿಸುವುದರ ಬಗ್ಗೆ ಇರುವ ಗೊಂದಲದ ಕುರಿತು ಪ್ರಸ್ತಾಪಿಸಲು ಬಯಸುತ್ತೇನೆ. ದೇವವಿಶ್ವಾಸವು ಬಲವತ್ತಾಗಿದೆ ಎಂದೂ ಪರಲೋಕ ವಿಶ್ವಾಸದ ಬಗ್ಗೆ ನಂಬಿಕೆಯು ಅವರ ಧರ್ಮದ ಒಂದು ಅವಿಭಾಜ್ಯ ಭಾಗವಾಗಿದೆ ಎಂದೂ ತೋರುವ ಸಮಾಜದಲ್ಲೂ ಕೆಡುಕುಗಳು ಇರುವುದು ಕಾಣಿಸುತ್ತವೆ. ದೇವನ ಬಗ್ಗೆ ಮತ್ತು ಪರಲೋಕ ಜೀವಿತದ ಬಗ್ಗೆ ವಿಶ್ವಾಸವಿರುವ ಸಮಾಜದಲ್ಲಿ ಇಂತಹ ಕೆಡುಕುಗಳಿರಬಹುದು ಎಂದು ತರ್ಕಬದ್ಧವಾಗಿ ಪರಿಗಣಿಸಲು ಸಾಧ್ಯವಿರುವುದಿಲ್ಲ.

ಆದರೆ ಒಂದು ಪ್ರಶ್ನೆ ಉದಿಸುತ್ತದೆ. ದೇವನ ಬಗ್ಗೆ ವಿಶ್ವಾಸ ಮತ್ತು ಪರಲೋಕದ ಜೀವಿತದ ಬಗ್ಗೆ ವಿಶ್ವಾಸ ಹೊಂದಿರುವ ಸಮಾಜವು ಇತರ ಎಲ್ಲ ವೈಶಿಷ್ಟ್ಯಗಳಲ್ಲಿ ಇತರ ಲೌಕಿಕ ಸಮಾಜದ ಹಾಗೆ ಇರಲು ಕಾರಣವೇನು? ಈ ಪ್ರಶ್ನೆಗೆ ಉತ್ತರವನ್ನು ನಾವು ಅಂತಹ ಸಮಾಜದ ವಿಶ್ವಾಸದ ಸ್ಥಿತಿಯನ್ನು ತಳಸ್ಪರ್ಶಿಯಾಗಿ ಪರೀಕ್ಷಿಸಿದರೆ ಕಂಡು ಹಿಡಿಯಲು ಕಷ್ಟವಾಗಲಾರದು. ವಾಸ್ತವಿಕವಾದುದೇನೆಂದರೆ, ಕೇವಲ ಸೈದ್ಧಾಂತಿಕವಾದ ದೇವವಿಶ್ವಾಸ ಅಂತಹ ವಿಶ್ವಾಸ ಹೊಂದಿದ ಜನರ ಸಾಮಾಜಿಕ ವರ್ತನೆಯನ್ನು ತನ್ನ ಪ್ರಭಾವಕ್ಕೊಳಪಡಿಸಲಾರದು. ಏಕೆಂದರೆ ಅಂತಹ ನಂಬಿಕೆ ಕೇವಲ ತಾತ್ವಿಕವಾಗಿದ್ದು ಅದು ನೈತಿಕ ಸ್ವಭಾವವಾಗಿ ಪರಿವರ್ತಿಸಲ್ಪಡುವುದೇ ಇಲ್ಲ. ದೇವನ ಬಗ್ಗೆ ನೈಜ ವಿಶ್ವಾಸದೊಂದಿಗೆ ಸುಳ್ಳುಗಳು, ಅವಾಸ್ತವಿಕ ಮಾತುಗಳು, ಅತಿರೇಖದ ಸ್ವಾರ್ಥ, ಅನ್ಯರ ಹಕ್ಕುಗಳ ಅಪಹರಣ, ಭ್ರಷ್ಟಾಚಾರ ಮತ್ತು ದೌರ್ಜನ್ಯ ಒಂದುಗೂಡುವುದಾದರೂ ಹೇಗೆ? ಇಂತಹ ಸಮಾಜಗಳಲ್ಲಿರುವ ದೇವನ ಬಗ್ಗೆ ವಿಶ್ವಾಸ ಕೇವಲ ಆಲಂಕಾರಿಕವಾಗಿರುತ್ತದೆ. ಅವಾಸ್ತವಿಕವಾಗಿದ್ದು ಮರಣಾನಂತರ ಜೀವಿತದ ಬಗ್ಗೆ ಕೇವಲ ಊಹಾಪೋಹಭರಿತವಾಗಿರುತ್ತದೆ. ಕೃತ್ಯಗಳ ಬಗ್ಗೆ ಲೆಕ್ಕ ನೀಡಬೇಕಾಗಬಹುದೆಂಬ ವಿಚಾರ ಕೇವಲ ದೂರದ ಒಂದು ಸಂಭಾವ್ಯವೆಂದು ಗಣಿಸಲ್ಪಡುತ್ತದೆ. ಒಳ್ಳೆಯದು ಮತ್ತು ಕೆಟ್ಟದನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಯಾವಾಗಲೂ ಸ್ವಾರ್ಥಲಾಭವು ಆದ್ಯತೆ ಪಡೆಯುತ್ತದೆ ಮತ್ತು ಮರಣಾನಂತರ ಜೀವಿತವು ಕಡೆಗಣಿಸಲ್ಪಡುತ್ತದೆ.

ನಾವು ಲೌಕಿಕ ಸಮಾಜ ಎಂದು ಹೇಳುವಾಗ ನಾವು ದೇವವಿಶ್ವಾಸ ಮತ್ತು ಪರಲೋಕ ಜೀವಿತದ ಬಗ್ಗೆ ನಂಬಿಕೆ ಹೊಂದಿರದ ಸಮಾಜವನ್ನು ಮಾತ್ರ ಉದ್ದೇಶಿಸುವುದಿಲ್ಲ. ದೇವ ವಿಶ್ವಾಸವಿರುವ ಮತ್ತು ನಾಸ್ತಿಕ ಸಮಾಜಗಳು ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಹೊಂದಿದ್ದರೂ ಅವುಗಳು ಪ್ರಾಯೋಗಿಕವಾಗಿ ಬಹಳ ಸಮೀಪದ ಹೋಲಿಕೆಗಳನ್ನು ಹೊಂದಿರುತ್ತವೆ. ♦

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ಇಸ್ಲಾಮಿನ ಸತ್ಯಸಾಕ್ಷ್ಯ – 4

**ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ದ್ವಿತೀಯ ಖಲೀಫ)ರವರ ಭಾಷಣ**

## ಹುಚ್ಚುನಾಯಿ ಕಚ್ಚಿದ ಹುಡುಗ ರಕ್ಷಿಸಲ್ಪಟ್ಟನು

ಹಝ್ರತ್ ವಾಗ್ದತ್ತ ಮಸೀಹರಿಂದ ಇಸ್ಲಾಮಿನ ವೈಭವ ಮತ್ತು ಸತ್ಯ ಪ್ರಕಟವಾದ ಬೇರೆ ಕೆಲವು ವಿಷಯಗಳನ್ನು ವಿವರಿಸುತ್ತೇನೆ.

ಒಬ್ಬ ಹುಡುಗನನ್ನು ಹುಚ್ಚುನಾಯಿ ಕಚ್ಚಿತು. ಕಸೌಲಿಗೆ ಕಳುಹಿಸಿ ಚಿಕಿತ್ಸೆ ನಡೆಸಲಾಯಿತು. ಅವನು ಮರಳಿ ಬಂದ ನಂತರ ಸ್ವಲ್ಪ ಸಮಯದೊಳಗೆ ರೋಗಪೀಡಿತನಾದನು. ಈ ರೋಗದ ಬಗ್ಗೆ ಎಲ್ಲ ವೈದ್ಯಕೀಯ ಗ್ರಂಥಗಳು ಹೇಳುವುದು ಮತ್ತು ಡಾಕ್ಟರ್‌ಗಳು ಸಹ ಒಮ್ಮತ ಹೊಂದಿರುವ ಅಭಿಪ್ರಾಯವೇನೆಂದರೆ, ಹುಚ್ಚುನಾಯಿ ಕಚ್ಚಿದ ನಂತರ ಉಂಟಾಗುವ ಭ್ರಾಂತಿಗೆ ಮದ್ದಿಲ್ಲ. ಈ ಹುಡುಗನ ರೋಗದ ಬಗ್ಗೆ ಕಸೌಲಿಗೆ ತಿಳಿಸಿದಾಗ ಅಲ್ಲಿಂದ ತಂತಿ ಸಂದೇಶ ಹೀಗೆ ಬಂತು: SORRY NOTHING CAN BE DONG FOR ABDUL KARIM. "ಅಬ್ದುಲ್ ಕರೀಮನಿಗೆ ಯಾವ ಚಿಕಿತ್ಸೆ ಕೂಡ ಇಲ್ಲ ಎಂದು ತಿಳಿಸಲು ವಿಷಾದಿಸುತ್ತೇವೆ."

ಆ ಹುಡುಗ ದೂರ ಪ್ರದೇಶದಿಂದ ಧಾರ್ಮಿಕ ಶಿಕ್ಷಣ ಪಡೆಯಲು ಆಗಮಿಸಿದವನಾಗಿದ್ದನು. ಅವನ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹ್ ಯೋಚಿಸಿದರು. ಇದು ತನ್ನ ವಾದದ ಆರಂಭದ ಕಾಲವಾಗಿದೆ. ನಾಲ್ಕು ದಿಕ್ಕುಗಳಲ್ಲಿಯೂ ವಿರೋಧ ಜಾರಿಯಲ್ಲಿದೆ. ಈ ಹುಡುಗ ಮೃತನಾದರೆ ದೂರ ಪ್ರದೇಶದಿಂದ ಅವನನ್ನು ವಿದ್ಯಾಭ್ಯಾಸ ಮಾಡಲು ಇಲ್ಲಿಗೆ ಕಳುಹಿಸಿದ ತಂದೆ ತಾಯಂದಿರಿಗೆ ಬಹಳ ದುಃಖವಾಗುವುದು. ಶತ್ರುಗಳು ಸಹ ಬೊಬ್ಬೆ ಹಾಕುವರು. ಆ ಕಾಲದಲ್ಲಿ ಆ ರೋಗಕ್ಕೆ ಮದ್ದೇನೂ ಇರಲಿಲ್ಲ. ಆ ಹುಡುಗನಿಗೋಸ್ಕರ ಹಝ್ರತ್ ವಾಗ್ದತ್ತ ಮಸೀಹರು ಪ್ರಾರ್ಥಿಸಿದರು. ಆ ಹುಡುಗ ರಕ್ಷಿಸಲ್ಪಟ್ಟನು. ಹುಚ್ಚು ನಾಯಿ ಕಚ್ಚಿದ ರೋಗ ಬಾಧಿಸಿದ ನಂತರ ಉಪಶಮನ ಗಳಿಸಿದ ಯಾವ ಉದಾಹರಣೆ ಕೂಡ ಸಾವಿರಾರು ವರ್ಷಗಳಿಂದ ಲಭಿಸಿಲ್ಲ. ಆ ಹುಡುಗ ಹಝ್ರತ್ ವಾಗ್ದತ್ತ ಮಸೀಹರ ಪ್ರಾರ್ಥನೆಯಿಂದ ರಕ್ಷಿಸಲ್ಪಟ್ಟನು. ಇದು ವಾಗ್ದತ್ತ ಮಸೀಹರ ಮೂಲಕ ಪ್ರಕಟವಾದ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಹಳ ದೊಡ್ಡ ಚಿಹ್ನೆಯಾಗಿದೆ.

## ರೋಗೋಪಶಮನದ ಬಗ್ಗೆ ನಿರಾಶೆ ಹೊಂದಿದ ರೋಗಿಗೆ ಸುಖವಾದುದು

ಇದೇ ರೀತಿ ಸಾವಿರಾರು ದೃಷ್ಟಾಂತಗಳು ಪ್ರಕಟವಾಗಿವೆ. ಉದಾಹರಣೆಗೆ ಇನ್ನೊಂದು ದೃಷ್ಟಾಂತ ವಿವರಿಸುತ್ತೇನೆ. ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೇಬರು ಮಾಲೇರ್ ಕೋಟ್ಲಾದ ಇಂದಿನ ನವಾಬರ ಸೋದರ ಮಾವನಾಗಿದ್ದಾರೆ. ಅವರು ಈಗ ಇಲ್ಲಿಗೆ ಬಂದಿದ್ದಾರೆಂದು ತಿಳಿದಿದ್ದೇನೆ. ಅವರ ಒಬ್ಬ ಪುತ್ರನಿಗೆ ಟಾಯಿಫೈಡ್ ಜ್ವರ ಬಂತು. ಜಮ್ಮು ಮಹಾರಾಜರ ಖಾಸಗಿ ವೈದ್ಯರಾಗಿದ್ದ ಯುನಾನಿ ಹಕೀಮ್ ಮೌಲವಿ ನೂರುದ್ದೀನ್ ಮತ್ತು ಇಬ್ಬರು ಡಾಕ್ಟರ್‌ಗಳು ಆ ಹುಡುಗನಿಗೆ ಚಿಕಿತ್ಸೆ ನೀಡುತ್ತಿದ್ದರು. ಒಮ್ಮೆ ಎಂತಹ ಸ್ಥಿತಿ ಉಂಟಾಯಿತೆಂದರೆ ಚಿಕಿತ್ಸಕರು ಗಾಬರಿಗೊಂಡರು ಮತ್ತು ಹುಡುಗ ರಕ್ಷಿಸಲ್ಪಡಲಾರ ಎಂದು ಹೇಳಿದರು. ಇದರ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹರಿಗೆ ತಿಳಿಸಿದಾಗ ಅವರು ಹೇಳಿದರು– ನಾನು ಹುಡುಗನ ಪರವಾಗಿ ಪ್ರಾರ್ಥಿಸುವೆನು. ಅವರು ಪ್ರಾರ್ಥಿಸಿದಾಗ ಅವರಿಗೆ ತಿಳಿಸಲಾಯಿತು – ಹುಡುಗ ರಕ್ಷಿಸಲ್ಪಡಲಾರ ಎಂದು. ಆಗ ವಾಗ್ದತ್ತ ಮಸೀಹರು ಹೇಳಿದರು: ನಾನು ಅವನ ಬಗ್ಗೆ ಶಿಫಾರಸು ಮಾಡುತ್ತೇನೆ. ಆಗ ಅವರಿಗೆ ದಿವ್ಯವಾಣಿ ಮೂಲಕ ತಿಳಿಸಲಾಯಿತು: ಅನುಮತಿ ಇಲ್ಲದೆ ಶಿಫಾರಸು ಮಾಡುವವನು ನೀನು ಯಾರು?

ಆ ಸಮಯದ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹ್ ಹೇಳುತ್ತಾರೆ: ನಾನು ಪ್ರಜ್ಞಾಶೂನ್ಯನಾಗಿ ಬಿದ್ದು ಬಿಟ್ಟೆನು. ಆಗ ಒಂದು ಶಬ್ದ ಕೇಳಿಸಿತು: ನಿನಗೆ ಅನುಮತಿ ನೀಡಲಾಗಿದೆ. ನೀನು ಈಗ ಶಿಫಾರಸು ಮಾಡಬಹುದು. ಅನಂತರ ಹಝ್ರತ್ ವಾಗ್ದತ್ತ ಮಸೀಹರು ಪ್ರಾರ್ಥಿಸಿದರು. ಆಗ ಅವರಿಗೆ ತಿಳಿಸಲಾಯಿತು: ಈ ಹುಡುಗ ಈಗ ರಕ್ಷಿಸಲ್ಪಡುವನು. ಅರ್ಧ ಗಂಟೆಯೊಳಗೆ ಪ್ರಜ್ಞೆ ಕಳೆದ ಆ ಹುಡುಗ ಎಚ್ಚರಗೊಂಡನು. ಅವನು ರಕ್ಷಿಸಲ್ಪಟ್ಟನು. ಈಗ ಅವನು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ.

## ಒಂದು ಪ್ರಶ್ನೆ ಮತ್ತು ಅದರ ಉತ್ತರ

(ಈ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಹೀಗೆ ಪ್ರಶ್ನೆ ಬರೆದುಕೊಟ್ಟರು: ನಿಮ್ಮ ಭಾಷಣದ ಶೀರ್ಷಿಕೆ "ಇಸ್ಲಾಮಿನ ಸತ್ಯಸಾಕ್ಷ್ಯದ ಹೊಸ ದೃಷ್ಟಾಂತಗಳು" ಎಂದಾಗಿತ್ತು. ನೀವು ಮಹ್‌ದೀ ಮಸೀಹ್ ವಾದಿಯ ದೃಷ್ಟಾಂತಗಳನ್ನು ವಿವರಿಸುತ್ತಿರುವಿರಿ. ಇದರ ಬಗ್ಗೆ ಹುಝೂರ್ ಹೇಳಿದರು:) ನನ್ನ ಭಾಷಣದ ಮೊದಲಿನ ಭಾಗ ಇಸ್ಲಾಮಿನ ಸತ್ಯದ ಬಗ್ಗೆ ಸಾಕ್ಷ್ಯಾಧಾರಗಳು ಎಂದಾಗಿತ್ತು. ಅವುಗಳನ್ನು ನಾನು ವಿವರಿಸಿದೆ. ಎರಡನೆಯ ಭಾಗ ಇಸ್ಲಾಮಿನ ಸತ್ಯತೆ ಬಗ್ಗೆ ದೃಷ್ಟಾಂತಗಳ ಕುರಿತು ಆಗಿದೆ. ಅದಕ್ಕೋಸ್ಕರ ನಾನು ವಾಗ್ದತ್ತ ಮಸೀಹರ ದೃಷ್ಟಾಂತಗಳನ್ನು ವಿವರಿಸುತ್ತಿದ್ದೇನೆ. ನಾವು ವಾಗ್ದತ್ತ ಮಸೀಹರನ್ನು ನಂಬುವುದು ಅವರ ಮೂಲಕ ಇಸ್ಲಾಮಿನ ಸತ್ಯತೆ ಸಾಬೀತಾಗುವುದರಿಂದ ಆಗಿದೆ. ಅವರ ಸತ್ಯದ ಸಾಕ್ಷ್ಯಗಳು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯದ ಸಾಕ್ಷ್ಯಗಳಾಗಿವೆ. ಏಕೆಂದರೆ ವಾಗ್ದತ್ತ ಮಸೀಹರು ತನ್ನನ್ನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನೆಂದು ಹೇಳಿರುವರು.

## ಇಸ್ಲಾಮಿನ ಸತ್ಯಸಾಕ್ಷ್ಯದ ಬಗ್ಗೆ ಪಾದರಿ ಲೆಫ್‌ರಾಯಿಗೆ ಪಂಥಾಹ್ವಾನ

ಪ್ರಾರ್ಥನೆ ಮೂಲಕ ಇಸ್ಲಾಮಿನ ಸತ್ಯದ ಬಗ್ಗೆ ತೀರ್ಮಾನಿಸಲು ಹಝ್ರತ್ ವಾಗ್ದತ್ತ ಮಸೀಹರು ಪಾದರಿ ಲೆಫ್‌ರಾಯಿಗೆ ಪಂಥಾಹ್ವಾನ ನೀಡಿದರು. ಅವರು ಪಾದರಿಯೊಂದಿಗೆ ಹೇಳಿದರು: ನೀವು ಕ್ರೈಸ್ತ ಧರ್ಮದ ಪರವಾಗಿ ನಿಲ್ಲಿರಿ. ನಾನು ಇಸ್ಲಾಮಿನ ಪರವಾಗಿ ನಿಲ್ಲುವೆನು. ಯಾವ ಧರ್ಮ ಸತ್ಯವಾದುದಾಗಿದೆಯೋ ಅದರ ಪರವಾಗಿ ಅಲ್ಲಾಹನು

ದೃಷ್ಟಾಂತ ಪ್ರಕಟಿಸಲಿ ಎಂದು ಪ್ರಾರ್ಥಿಸೋಣ. ಎರಡು ಪಕ್ಷದವರು ಕೆಲವು ರೋಗಿಗಳನ್ನು ಆಯ್ಕೆ ಮಾಡೋಣ. ಅವರ ಪರವಾಗಿ ಪ್ರಾರ್ಥಿಸೋಣ. ಯಾರ ಪಕ್ಷದವರ ಹೆಚ್ಚು ರೋಗಿಗಳು ಗುಣಮುಖರಾಗುತ್ತಾರೋ ಆ ಪಕ್ಷದವರ ಧರ್ಮ ಸತ್ಯವೆಂದು ತಿಳಿಯೋಣ.

ಇದರ ಬಗ್ಗೆ ದೊಡ್ಡ ಇಂಗ್ಲಿಷ್ ಪತ್ರಿಕೆಗಳು ಲೇಖನ ಬರೆದುವು. ದೊಡ್ಡ ಸಂಖ್ಯೆಯ ಸಂಬಳ ಪಡೆಯುತ್ತಿರುವ ನಮ್ಮ ಪಾದರಿಗಳು ಈ ಪಂಥಾಹ್ವಾನವನ್ನು ಎದುರಿಸಲು ಏಕೆ ಮುಂದಾಗುವುದಿಲ್ಲ ಎಂದು ಪ್ರಶ್ನಿಸಲಾಗಿತ್ತು. ಇದು ಕ್ರೈಸ್ತ ಧರ್ಮ ಸತ್ಯವೆಂದು ಸಾಬೀತು ಗೊಳಿಸುವ ಸಮಯ ಎಂದು ಪತ್ರಿಕೆಗಳು ಹೇಳಿದುವು. ಆದರೆ ಯಾರೂ ಮುಂದೆ ಬರಲಿಲ್ಲ. ಇದು ಸತ್ಯದ ಬಗ್ಗೆ ತೀರ್ಮಾನಿಸಲು ಅತ್ಯಂತ ಸುಲಭ ಮತ್ತು ಉತ್ತಮ ರೀತಿಯಾಗಿತ್ತು. ಆದರೆ ಯಾರೂ ಈ ಪಂಥಾಹ್ವಾನ ಸ್ವೀಕರಿಸಲಿಲ್ಲ.

## ವಾಗ್ದತ್ತ ಮಸೀಹರ ಜ್ಞಾನ ವೈಭವ

ಹಝ್ರತ್ ವಾಗ್ದತ್ತ ಮಸೀಹರು ಎಂತಹ ಪ್ರಬಂಧ ಬರೆದರೆಂದರೆ ವಿರೋಧಿಗಳು ಸಹ ಅದು ಸರ್ವಶ್ರೇಷ್ಠ ಎಂದು ಒಪ್ಪಿಕೊಳ್ಳಲು ನಿರ್ಬಂಧಿತರಾದರು. ಲಾಹೋರಿನಲ್ಲಿ ಮಹೋತ್ಸವ ಎಂದು ಹೆಸರಿಸಿ ಒಂದು ಸರ್ವಧರ್ಮ ಸಮ್ಮೇಳನ ಜರಗಿತು. ಅದರಲ್ಲಿ ಭಾಷಣಕಾರರಿಗೆ ಹೀಗೆ ಶರತ್ತು ವಿಧಿಸಲಾಗಿತ್ತು: ಪ್ರತಿಯೊಂದು ಧರ್ಮದ ಪ್ರತಿನಿಧಿ ತನ್ನ ಧರ್ಮದ ಒಳಿತುಗಳನ್ನು ವಿವರಿಸಬೇಕು. ಅನ್ಯ ಧರ್ಮವನ್ನು ದೂಷಿಸಬಾರದು. ವಾಗ್ದತ್ತ ಮಸೀಹರು ಈ ಸಮ್ಮೇಳನದಲ್ಲಿ ಓದಿ ಹೇಳಲು ಪ್ರಬಂಧ ಬರೆದರು. ಸಮ್ಮೇಳನ ಜರಗುವ ಮೊದಲು ಕರಪತ್ರ ಮುದ್ರಿಸಿ ಪ್ರಕಟಿಸಿದರು: "ಅಲ್ಲಾಹನು ನನಗೆ ತಿಳಿಸಿದ್ದಾನೆ: ಈ ಸಮ್ಮೇಳನದಲ್ಲಿ ನಿನ್ನ ಪ್ರಬಂಧ ಶ್ರೇಷ್ಠವೆಂದು ಗಣಿಸಲ್ಪಡುವುದು." ಈ ಪ್ರಬಂಧ ಸಮ್ಮೇಳನದಲ್ಲಿ ಓದಿದಾಗ ಅದಕ್ಕೆ ನಿಗದಿಪಡಿಸಲಾದ ಸಮಯ ಓದಿ ಮುಗಿಸುವ ಮೊದಲೇ ಮುಗಿಯಿತು. ಆಗ ವಿವಿಧ ಧರ್ಮಗಳಿಗೆ ಸೇರಿದ ಶ್ರೋತೃಗಳು, ಇನ್ನಷ್ಟು ಸಮಯ ಕೊಡಬೇಕೆಂದು ಹೇಳಿದರು. ಒಬ್ಬ ಭಾಷಣಕಾರ ತನಗೆ ನಿಗದಿ ಪಡಿಸಲಾದ ಸಮಯವನ್ನು ಬಿಟ್ಟುಕೊಟ್ಟರು. ಆ ಸಮಯ ಸಹ ಸಾಕಾಗಲಿಲ್ಲ. ಪುನಃ ಸಮಯ ನೀಡಲಾಯಿತು. ಆ ದಿನ ಓದಿ ಮುಗಿಸಲು ಸಾಧ್ಯವಾಗಲಿಲ್ಲ. ಸಮ್ಮೇಳನ ಒಂದು ದಿನ ಹೆಚ್ಚಿಗೆ ನಡೆಸಬೇಕೆಂದು ಜನರು ಆವಶ್ಯಪಟ್ಟರು. ಆದುದರಿಂದ ಮರುದಿನ ಪ್ರಬಂಧ ಓದಿ ಮುಗಿಸಲಾಯಿತು. ಈ ಪ್ರಬಂಧ ಎಲ್ಲವುಗಳಿಗಿಂತ ಶ್ರೇಷ್ಠ ಎಂದು ಜನರು ಹೇಳಿದರು. ಸಿವಿಲ್ ಆ್ಯಂಡ್ ಮಿಲಿಟರಿ ಗಝೆಟ್ ಎಂಬ ಇಂಗ್ಲಿಷ್ ಭಾಷೆಯ ಪತ್ರಿಕೆ ಈ ಪ್ರಬಂಧದ ಬಗ್ಗೆ ಲೇಖನ ಪ್ರಕಟಿಸಿತು.

## ವಾಗ್ದತ್ತ ಮಸೀಹರ ಬಗ್ಗೆ ಒಂದು ವಿರೋಧಿ ಪತ್ರದ ಸಾಕ್ಷ್ಯ

ಹಝ್ರತ್ ವಾಗ್ದತ್ತ ಮಸೀಹರು ಇಸ್ಲಾಮಿನ ಸತ್ಯಸಾಕ್ಷ್ಯವಾಗಿ ಕೃತಿರೂಪದಲ್ಲಿ ಮಾಡಿದಂತಹ ಕೆಲಸವನ್ನು ಈ ಕಾಲಘಟ್ಟದಲ್ಲಿ ಬೇರೆ ಯಾರೂ ಮಾಡಿಲ್ಲ. ಅವರ ವಿರೋಧಿಗಳು ಸಹ ಅದನ್ನು ಒಪ್ಪಿಕೊಂಡಿದ್ದಾರೆ. ಅವರು ಮೃತರಾದಾಗ ಈ ನಗರದ (ಅಮೃತಸರದ) "ವಕೀಲ್" ಪತ್ರಿಕೆ (ಅದು ನಮ್ಮ ಜಮಾಅತಿನ ಪತ್ರಿಕೆ ಅಲ್ಲ) ಒಂದು ಶಕ್ತಿಶಾಲಿ ಶ್ರದ್ಧಾಂಜಲಿ ಪ್ರಕಟಿಸಿತು. ಅದರಲ್ಲಿ ಹಝ್ರತ್ ವಾಗ್ದತ್ತ ಮಸೀಹರು ಇಸ್ಲಾಮಿಗೋಸ್ಕರ ವೈಭವಶಾಲಿ ಸೇವೆ ಮಾಡಿದರೆಂದೂ ಅವರು ಇಸ್ಲಾಮಿನ ಸತ್ಯವನ್ನು ಪ್ರಕಟಿಸಿದರೆಂದೂ ಬರೆಯಲಾಗಿತ್ತು. ಇದು ಹಝ್ರತ್ ವಾಗ್ದತ್ತ ಮಸೀಹರ ಬಗ್ಗೆ ಅವರ ವಿರೋಧಿಗಳ ಸಾಕ್ಷ್ಯವಾಗಿದೆ. ಬೇರೆ ಪತ್ರಿಕೆಗಳು ಸಹ ಅವರು ಮಾಡಿದ ಸೇವೆಯನ್ನು ವಿವರಿಸಿದುವು. ಆದರೆ "ವಕೀಲ್" ಪತ್ರಿಕೆಯ ಲೇಖನ ಬಹಳ ಪ್ರಭಾವಶಾಲಿಯಾಗಿತ್ತು.* ಅದು ಹೀಗೆ ಹೇಳಿತು: ಮಿರ್ಝಾ ಸಾಹೇಬರ ಲೇಖನಿ ಮಾಂತ್ರಿಕವೂ ಅವರ ಮಾತು ಜಾದೂ ಆಗಿತ್ತು. ಅವರ ಎರಡು ಮುಷ್ಟಿಗಳು ವಿದ್ಯುತ್ತಿನ ಎರಡು ಬ್ಯಾಟರಿಗಳಾಗಿದ್ದುವು.

ಇದು ಹಝ್ರತ್ ವಾಗ್ದತ್ತ ಮಸೀಹರ ಜ್ಞಾನ ಸಂಬಂಧವಾದ ಪವಾಡದ ಬಗ್ಗೆ ಹೇಳಿದುದಾಗಿತ್ತು. ಅವರು ಇಸ್ಲಾಮಿನ ಸತ್ಯವನ್ನು ಸ್ಥಾಪಿಸಲು ಪವಾಡವನ್ನು ಪ್ರಕಟಿಸಿದರು. ನೀವು ನೋಡಿರಿ, ಎರಡು ವಿಧಗಳ ಜನರಿದ್ದಾರೆ. ಕೆಲವರು ಹೇಳುತ್ತಾರೆ – ಮಿರ್ಝಾ ಸಾಹೇಬರು ಇಸ್ಲಾಮಿಗೆ ಸೇವೆ ಸಲ್ಲಿಸಿಲ್ಲ, ಅದನ್ನು ಹರಡಲಿಲ್ಲ ಎಂದು. ಆದರೆ ಕೆಲವು ಶತ್ರುಗಳು ಸಹ ಹೇಳುತ್ತಾರೆ – ಮಿರ್ಝಾ ಸಾಹೇಬ್ ಇಸ್ಲಾಮಿನ ಬಗ್ಗೆ ನೀಡಿದ ವಿವರಣೆ ಉನ್ನತ ಮಟ್ಟದ್ದೆಂದು. ಇತ್ತೀಚೆಗೆ ಯುರೋಪಿನಿಂದ ಒಬ್ಬ ಆಂಗ್ಲೇಯನ ಪತ್ರ ನನಗೆ ಬಂದಿದೆ. ಅವರು ಹೇಳುತ್ತಾರೆ – ನಾನು ಒಂದು ಪುಸ್ತಕ ಓದಿದೆ. ಹಝ್ರತ್ ವಾಗ್ದತ್ತ ಮಸೀಹರು ವಿವರಿಸಿದ ಇಸ್ಲಾಮಿನ ವಿಶ್ವಾಸ ಬಹಳ ಉತ್ತಮವಾಗಿದೆ. ಅವುಗಳನ್ನು ಅನುಷ್ಠಾನಕ್ಕೆ ತರುವುದು ಹೇಗೆ ಎಂದು ನಾನು ಆತಂಕಗೊಂಡಿದ್ದೇನೆ. ನೀವು ನೋಡಿರಿ, ಇಸ್ಲಾಮಿನ ಉಪದೇಶಗಳು ಕೆಟ್ಟದ್ದೆಂದು ಅವರು ಹೇಳುವುದಿಲ್ಲ. ಈ ವ್ಯಕ್ತಿ ಹೇಳುತ್ತಾರೆ, ಇಸ್ಲಾಮಿನ ಉಪದೇಶಗಳು ಅತ್ಯಂತ ಉನ್ನತ ಮಟ್ಟದವು ಆಗಿವೆ. ಆದರೆ ಅವುಗಳನ್ನು ಅನುಷ್ಠಾನಕ್ಕೆ ತರುವುದು ಕಷ್ಟಕರವಾಗಿದೆ.

ನಾನು ನೀಡಿದ ಸಾಕ್ಷ್ಯಾಧಾರಗಳಿಂದಲೂ ವಿವರಿಸಿದ ಘಟನೆಗಳಿಂದಲೂ ಸಾಬೀತಾಗುವುದೇನೆಂದರೆ, ಇಸ್ಲಾಮ್ ಸತ್ಯ ಧರ್ಮವಾಗಿದೆ. ಅದು ತನ್ನ ಸತ್ಯದ ಸಾಕ್ಷ್ಯಾಧಾರಗಳ ಮೂಲಕ ಎಲ್ಲವುಗಳ ಮೇಲೆ ಜಯ ಗಳಿಸಿದೆ. ಅನುಭವ ಜ್ಞಾನದಿಂದ ತಿಳಿದು ಬರುವುದೇನೆಂದರೆ, ಅಲ್ಲಾಹನ ಸಾಮೀಪ್ಯ ಗಳಿಸುವಂತೆ ಮಾಡುವ ಧರ್ಮ ಈ ಕಾಲಘಟ್ಟದಲ್ಲಿ ಇಸ್ಲಾಮ್ ಮಾತ್ರವಾಗಿದೆ. ♦

**(ಭಾಷಾಂತರ: ಎಮ್. ಉಬೈದುಲ್ಲಾ)**

---

* ವಕೀಲ್ ಪತ್ರಿಕೆ ಹೀಗೆ ಬರೆಯಿತು: "ಆ ವ್ಯಕ್ತಿ ಬಹಳ ದೊಡ್ಡ ವ್ಯಕ್ತಿಯಾಗಿದ್ದರು. ಅವರ ಲೇಖನಿ ಮಾಂತ್ರಿಕವಾಗಿತ್ತು. ಅವರ ಮಾತು ಜಾದೂ ಆಗಿತ್ತು. ಅವರು ಮೆದುಳಿನ ಅದ್ಭುತಗಳ ಸಾಕಾರವಾಗಿದ್ದರು. ಅವರ ದೃಷ್ಟಿ ಮೋಹಕ, ಶಬ್ದ ಪ್ರಳಯ್ರ ಆಗಿತ್ತು. ಅವರ ಬೆರಳುಗಳಲ್ಲಿ ಕ್ರಾಂತಿಯ ತಂತಿಗಳು ಸುರುಳಿ ಸುತ್ತಿದ್ದುವು. ಅವರ ಎರಡು ಮುಷ್ಟಿಗಳು ವಿದ್ಯುತ್ತಿನ ಎರಡು ಬ್ಯಾಟರಿಗಳಾಗಿದ್ದುವು. ಅವರು ಧಾರ್ಮಿಕ ಲೋಕಕ್ಕೆ ಮೂವತ್ತು ವರ್ಷಗಳ ಕಾಲ ಭೂಕಂಪವೂ ತೂಫಾನೂ ಆಗಿದ್ದರು. ಅವರು ಖಿಯಾಮತ್ ಬೊಬ್ಬೆಯ ರೂಪದಲ್ಲಿ ನಿದ್ರಿಸುವವರನ್ನು ಎಬ್ಬಿಸುತ್ತಿದ್ದರು. ಅವರು ಬರಿಗೈಯಲ್ಲಿ ಲೋಕ ಬಿಟ್ಟು ಹೋದರು.... ಅವರ ನಿಧನದಿಂದ ಪಾಠ ಕಲಿಯಬೇಕಾದುದಾಗಿದೆ. ಅದು ಮರೆತುಬಿಡುವಂತಹದು ಅಲ್ಲ. ಧಾರ್ಮಿಕ ಮತ್ತು ಬೌದ್ಧಿಕ ಲೋಕದಲ್ಲಿ ಕ್ರಾಂತಿ ಉಂಟುಮಾಡುವ ಇಂತಹ ಜನರು ಯಾವಾಗಲೂ ಲೋಕಕ್ಕೆ ಆಗಮಿಸುವುದಿಲ್ಲ. ಇಂತಹ ಜನರು ಬಹಳ ಅಪರೂಪವಾಗಿ ಆಗಮಿಸುತ್ತಾರೆ. ಅವರು ಆಗಮಿಸಿದಾಗ ಲೋಕದಲ್ಲಿ ಕ್ರಾಂತಿ ಉಂಟುಮಾಡಿ ಹೋಗುತ್ತಾರೆ.

ಮಿರ್ಝಾ ಸಾಹೇಬರ ಕೆಲವು ವಾದಗಳ ಮತ್ತು ನಂಬಿಕೆಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದ್ದರೂ ವಿದ್ಯಾವಂತರಾದ ಮುಸ್ಲಿಮರಲ್ಲಿ ಒಂದು ಭಾವನೆಯನ್ನುಂಟುಮಾಡಿದೆ – ಅವರ ಒಬ್ಬ ದೊಡ್ಡ ವ್ಯಕ್ತಿ ಅಗಲಿ ಹೋಗಿರುವರು

# ವಾಗ್ದತ್ತ ಮಸೀಹರ ಭವ್ಯ ಮರಣ

**ಲೇಖಕ : ರಝಿಯುಲ್ಲಾ ನುಅ್‌ಮಾನ್, ಕೆನಡಾ**

ಅಹ್ಮದಿಯಾ ಜಮಾಅತಿನ ವಿರೋಧಿಗಳು ಜಮಾಅತಿನ ವಿರುದ್ಧ ಮತ್ತು ಅದರ ಸ್ಥಾಪಕರ ವಿರುದ್ಧ ಆಪಾದನೆಗಳನ್ನು ಮಾಡಲು ತಮ್ಮ ಶಕ್ತಿಯನ್ನು ಧಾರಾಳವಾಗಿ ಬಳಸುತ್ತಾರೆ. ಅವರು ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ವಿರುದ್ಧ ಸಾಮಾನ್ಯವಾಗಿ ಮಾಡುವ ಒಂದು ಸುಳ್ಳು ಆರೋಪ ಅವರು ಶೌಚಾಲಯದಲ್ಲಿ ಮೃತರಾದರೆಂಬ ಕಟ್ಟುಕಥೆಯಾಗಿದೆ. ನಮ್ಮ ಸಾಹಿತ್ಯದಲ್ಲಿ ಪ್ರಕಟಿಸಲಾದ ವಿವರಣೆಗಳು ಅವರ ಈ ಆಪಾದನೆಯನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತವೆ. ನಮ್ಮ ಮತ್ತು ನಮ್ಮ ವಿರೋಧಿಗಳ ಮಧ್ಯೆ ಇರುವ ಧಾರ್ಮಿಕ ನಂಬಿಕೆಗಳ ವಿಭಿನ್ನತೆಗಳನ್ನು ಮರೆಮಾಚಲು ಮತ್ತು ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಶತ್ರುಗಳು ಮಾಡುವ ಕುತಂತ್ರ ಈ ಆಪಾದನೆಯಾಗಿದೆ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಮೂಲಕ ನಮ್ಮ ವಾದಗಳನ್ನು ಖಂಡಿಸಲು ಸಾಧ್ಯವಿಲ್ಲವೆಂದು ಮನವರಿಕೆ ಮಾಡಿದ ನಮ್ಮ ಶತ್ರುಗಳು ಸುಳ್ಳುಗಳನ್ನು ಸೃಷ್ಟಿಸಿ ಅವುಗಳನ್ನು ಪ್ರಚಾರ ಮಾಡುತ್ತಿದ್ದಾರೆ. ಅವರ ಆಪಾದನೆಗಳು ನಿರಾಧಾರವಾಗಿವೆ.

ವಾಸ್ತವಿಕವಾಗಿ ವಾಗ್ದತ್ತ ಮಸೀಹರು ಹಾಸಿಗೆಯಲ್ಲಿ ಮಲಗಿ, "ಅಲ್ಲಾಹ್, ಮೇರೇ ಪ್ಯಾರೇ ಅಲ್ಲಾಹ್" (ಅಲ್ಲಾಹ್, ನನ್ನ ಪ್ರಿಯ ಅಲ್ಲಾಹ್) ಎಂದು ಉಚ್ಚರಿಸುತ್ತಾ ಭವ್ಯವಾಗಿ ಮೃತರಾದರು. (ತಾರೀಖೆ ಅಹ್ಮದಿಯ್ಯತ್ ಸಂಪುಟ 2 ಪುಟ 538 – 543).

ವಾಸ್ತವಿಕವೇನೆಂದರೆ ಪರಿಶುದ್ಧ ಮಹಾನುಭಾವರನ್ನು ಅಪಮಾನಿಸುವುದು ಶತ್ರುಗಳ ಹೊಸದಾದ ಅಭಿಯಾನವೇನೂ ಅಲ್ಲ. ನಾವು ಧರ್ಮಗಳ ಚರಿತ್ರೆಯನ್ನು ಅಧ್ಯಯನ ಮಾಡುವಾಗ ನಮಗೆ ಹೀಗೆ ತಿಳಿದು ಬರುತ್ತದೆ – ಸರ್ವಶಕ್ತನಾದ ಅಲ್ಲಾಹನಿಂದ ನಿಯೋಜಿತರಾದ ಪ್ರತಿಯೊಬ್ಬ ಪ್ರವಾದಿಯನ್ನು ಪರಿಹಾಸ ಮಾಡಲಾಗಿತ್ತು. ಇದರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ : **ಯಾ ಹಸರತನ್ ಅಲಲ್ ಇಬಾದಿ ಮಾ ಯಅ್‌ತೀಹಿಮ್ ಮ್ಮಿನ್ ರ್ರಸೂಲಿನ್ ಇಲ್ಲಾ ಕಾನೂ ಬಿಹೀ ಯಸ್ತ್‌ಹ್‌ಝಿಊನ್**. – "ಹಾ! ಮನುಷ್ಯರ ದುರದೃಷ್ಟವೇ, ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ." (36:31).

## ಆಲಿಸಿದುದನ್ನೆಲ್ಲ ಪ್ರಚಾರ ಮಾಡಬೇಡಿರಿ

ಅಹ್ಮದಿಯಾ ಜಮಾಅತಿನ ಶತ್ರುಗಳು ವಾಸ್ತವಿಕಾಂಶವೇನೆಂದು ತಿಳಿದುಕೊಳ್ಳದೆ ಸುಳ್ಳು ಆಪಾದನೆಗಳನ್ನು ಪುನರಾವರ್ತಿಸುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು : **ಕಫಾ ಬಿಲ್ ಮರ್‌ಇ ಕಧಿಬನ್ ಅನ್ ಯುಹದ್ದಿಸ ಬಿ ಕುಲ್ಲಿ ಮಾ ಸಮಿಅ** – "ಒಬ್ಬನು ಆಲಿಸಿದುದನ್ನೆಲ್ಲ ಪುನರಾವರ್ತಿಸುತ್ತಾನಾದರೆ ಅವನು ಸುಳ್ಳು ಹೇಳುವವನಾಗಿರುತ್ತಾನೆ." (ಮುಸ್ಲಿಮ್).

ಎಂದು. ಇಸ್ಲಾಮಿನ ವಿರೋಧಿಗಳ ಎದುರಿಗೆ ಇಸ್ಲಾಮಿನ ಪರವಾಗಿ ಪ್ರತಿರೋಧಿಸುವ ವೈಭವಶಾಲಿ ವ್ಯಕ್ತಿ ಅಗಲಿ ಹೋಗಿರುವರು.

ಅವರ ವೈಶಿಷ್ಟ್ಯವೇನೆಂದರೆ, ಅವರು ಇಸ್ಲಾಮಿನ ವಿರೋಧಿಗಳ ಎದುರಿಗೆ ಒಬ್ಬ ಜಯಶಾಲಿ ಸೇನಾಧಿಪತಿಯ ಹೊಣೆಗಾರಿಕೆ ಈಡೇರಿಸುತ್ತಾ ಇದ್ದರು. ನಾವು ಈ ಭಾವನೆಯನ್ನು ಬಹಿರಂಗವಾಗಿ ಪ್ರಕಟಿಸಲು ನಿರ್ಬಂಧಿತರಾಗಿದ್ದೇವೆ. ಅವರು ಪ್ರಾರಂಭಿಸಿದ ವೈಭವಶಾಲಿ ಕಾರ್ಯಯೋಜನೆ ನಮ್ಮ ವಿರೋಧಿಗಳನ್ನು ದೀರ್ಘಕಾಲ ಸೋಲಿಸುತ್ತಾ ಇತ್ತು. ಅದು ಮುಂದೆ ಸಹ ಜಾರಿಯಲ್ಲಿರಲಿ.

ಕ್ರೈಸ್ತರ ಮತ್ತು ಆರ್ಯಾಸಮಾಜಿಗಳ ವಿರುದ್ಧ ಅವರು ಬರೆದ ಗ್ರಂಥಗಳು ಜನರ ಮನ್ನಣೆ ಗಳಿಸಿದೆ. ಅವುಗಳ ವೈಶಿಷ್ಟ್ಯಗಳ ಬಗ್ಗೆ ವಿವರಿಸಬೇಕಾಗಿಲ್ಲ. ಈ ಗ್ರಂಥಗಳ ಮಹತ್ವವನ್ನು ಅವರು ತಮ್ಮ ಕೆಲಸ ಮುಗಿಸಿರುವಾಗ ನಾವು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ನಾವು ಆ ಕಾಲವನ್ನು ಮರೆತುಬಿಡಲಾರೆವು. ಆ ಸಮಯದಲ್ಲಿ ಇಸ್ಲಾಮ್ ವಿರೋಧಿಗಳ ಆಕ್ರಮಣಗಳಿಂದ ಸುತ್ತುವರಿಯಲ್ಪಟ್ಟಿತ್ತು. ಅಲ್ಲಾಹನಿಂದ ಅದರ ಸಂರಕ್ಷಣೆಗೋಸ್ಕರ ನಿಯೋಜಿಸಲ್ಪಟ್ಟ ಮುಸ್ಲಿಮರು ತಮ್ಮ ತಪ್ಪುಗಳಲ್ಲಿ ಬಿದ್ದುಕೊಂಡು ಏರುಸಿರು ಬಿಡುತ್ತಿದ್ದರು. ಅವರು ಇಸ್ಲಾಮಿಗೋಸ್ಕರ ಏನನ್ನೂ ಮಾಡುತ್ತಿರಲಿಲ್ಲ ಮತ್ತು ಮಾಡಲು ಅವರಿಗೆ ಸಾಧ್ಯವೂ ಇರಲಿಲ್ಲ. ಆಕ್ರಮಣಗಳ ಸ್ಥಿತಿ ಹೇಗಿತ್ತೆಂದರೆ ಕ್ರೈಸ್ತ ಲೋಕ ಇಸ್ಲಾಮನ್ನು ಅಳಿಸಿಬಿಡಲು ಬಯಸುತ್ತಿತ್ತು. ಅವರನ್ನು ಎದುರಿಸುವವರ ಶಕ್ತಿಹೀನತೆ ಹೇಗಿತ್ತೆಂದರೆ ತುಪಾಕಿಗಳ ಎದುರಿಗೆ ಈಟಿಗಳು ಕೂಡ ಇರಲಿಲ್ಲ. ಅಲ್ಲಿ ಎದುರಿಸುವಿಕೆಯೇ ಇರಲಿಲ್ಲ..... ಮುಸ್ಲಿಮರಿಂದ ಪ್ರತಿರೋಧ ಪ್ರಾರಂಭವಾದಾಗ ಅದರ ಒಂದು ಭಾಗ ಮಿರ್ಝಾ ಸಾಹೇಬರು ವಹಿಸಿದರು. ಕ್ರೈಸ್ತ ಧರ್ಮ ಸರಕಾರದ ನೆರಳಿನ ಆಶ್ರಯದಲ್ಲಿದ್ದುದರಿಂದ ಅದರ ಜೀವ ಸರಕಾರವೇ ಆಗಿತ್ತು. ಅದರ ಪ್ರಭಾವವನ್ನು ಧ್ವಂಸಗೊಳಿಸಲಾಯಿತು. ಸಾವಿರಾರು ಲಕ್ಷಗಟ್ಟಲೆ ಮುಸ್ಲಿಮರು ರಕ್ಷಿಸಲ್ಪಟ್ಟರು. ಮಾತ್ರವಲ್ಲ ಕ್ರೈಸ್ತ ಧರ್ಮದ ಪ್ರಭಾವ ಹೊಗೆಯ ಹಾಗೆ ಹಾರಿ ಹೋಯಿತು..... ಮಿರ್ಝಾ ಸಾಹೇಬರು ಮಾಡಿದ ಸೇವೆ ಮುಂದಿನ ಪೀಳಿಗೆಗೆ ಬಹಳ ಔದಾರ್ಯಪೂರ್ಣವಾಗುವುದು. ಅವರು ಲೇಖನಿ ಮೂಲಕ ಜಿಹಾದ್ ಮಾಡುವವರಲ್ಲಿ ಪ್ರಥಮ ಸಾಲಿನಲ್ಲಿ ನಿಂತು ಇಸ್ಲಾಮಿಗೋಸ್ಕರ ಪ್ರತಿರೋಧದ ಕರ್ತವ್ಯ ನಿರ್ವಹಿಸಿದರು. ಅವರು ಎಂತಹ ಸಾಹಿತ್ಯ ತಮ್ಮ ಸ್ಮಾರಕವಾಗಿ ಬಿಟ್ಟುಹೋದರೆಂದರೆ ಮುಸ್ಲಿಮರ ರಕ್ತನಾಳಗಳಲ್ಲಿ ಜೀವಂತ ರಕ್ತವಿರುವ ತನಕ ಇಸ್ಲಾಮಿಗೆ ಬೆಂಬಲ ನೀಡುವ ಭಾವನೆ ಅವರ ಜನಾಂಗೀಯ ಚಿಹ್ನೆಯಾಗಿ ನೆಲೆನಿಲ್ಲುವುದು.

ಇದಲ್ಲದೆ ಆರ್ಯಾ ಸಮಾಜದ ವಿಷಮಯ ಪ್ರಭಾವವನ್ನು ನಿವಾರಿಸುವುದರಲ್ಲಿ ಇಸ್ಲಾಮಿಗೆ ಬಹಳ ಸೇವೆ ಮಿರ್ಝಾ ಸಾಹೇಬರು ಮಾಡಿದ್ದಾರೆ. ಮಿರ್ಝಾ ಸಾಹೇಬರು ಮತ್ತು ಮೌಲವಿ ಮುಹಮ್ಮದ್ ಖಾಸಿಮ್ ಸಾಹೇಬರು ದಯಾನಂದ ಸರಸ್ವತಿಯನ್ನು ಆರಂಭದಿಂದಲೇ ಎದುರಿಸಲು ಪ್ರಾರಂಭಿಸಿದ್ದರು. ಇವರಿಬ್ಬರು ಸ್ವಾಮೀಜಿಗೆ ಉತ್ತರ ನೀಡುತ್ತಿದ್ದರು. ಅಜ್‌ಮೀರ್‌ನಲ್ಲಿ ಸ್ವಾಮಿಯ ಅಂತ್ಯ ಸಂಸ್ಕಾರದ ನಂತರ ತನ್ನ ಜೀವಿತಾದ್ಯಂತ ಮಿರ್ಝಾ ಸಾಹೇಬರು ಆರ್ಯಾ ಸಮಾಜದ ವದನದಿಂದ ಹತ್ತೊಂಬತ್ತನೆಯ ಶತಮಾನದ ಹಿಂದೂ ಸುಧಾರಕನ ಲಾಂಛನವನ್ನು ಇಳಿಸಲು ಪ್ರಯತ್ನಿಸುತ್ತಿದ್ದರು. ಅವರು ಆರ್ಯಾ ಸಮಾಜದ ವಿರುದ್ಧ ಬರೆದ ಲೇಖನಗಳನ್ನು ಕಡೆಗಣಿಸಲು ಸಾಧ್ಯವಾಗದು – ನಮ್ಮ ಪ್ರತಿರೋಧ ಎಷ್ಟು ವಿಶಾಲವಾದರೂ ಸಹ.

ಸಹಜ ಬುದ್ಧಿಶಕ್ತಿ ಮತ್ತು ಅಭ್ಯಾಸ, ನೈಪುಣ್ಯ, ನಿರಂತರ ವಾದ ಪ್ರತಿವಾದಗಳು ಮಿರ್ಝಾ ಸಾಹೇಬರಲ್ಲಿ ಒಂದು ವಿಶಿಷ್ಟ ವೈಭವವನ್ನು ಸೃಷ್ಟಿಸಿತ್ತು. ತನ್ನ ಧರ್ಮದ ಬಗ್ಗೆ ಅಲ್ಲದೆ ಅನ್ಯ ಧರ್ಮಗಳ ಬಗ್ಗೆ ಅವರ ದೃಷ್ಟಿ ಬಹಳ ವಿಶಾಲವಾಗಿತ್ತು. ಅವರು ತಮ್ಮ ಈ ಜ್ಞಾನವನ್ನು ಬಹಳ ಉತ್ತಮ ರೀತಿಯಲ್ಲಿ ಬಳಸುತ್ತಿದ್ದರು. ತಬ್ಲೀಗ್ ಮತ್ತು ಉಪದೇಶದ ಬಗ್ಗೆ ಅವರಿಗಿದ್ದ ಸಾಮರ್ಥ್ಯ ಹೇಗಿತ್ತೆಂದರೆ, ಅವರೆದುರಿಗೆ ಎಷ್ಟು ಸಮರ್ಥನಾಗಿದ್ದವನು ಬಂದರೂ ಅವರ ಉತ್ತರದಿಂದ ಗಾಢವಾಗಿ ಚಿಂತಿಸಲು ನಿರ್ಬಂಧಿತನಾಗುತ್ತಿದ್ದನು. ಹಿಂದೂಸ್ಥಾನ ಧರ್ಮಗಳ ಮ್ಯೂಸಿಯಮ್ ಆಗಿದೆ. ಇಲ್ಲಿ ಅನೇಕ ಚಿಕ್ಕ, ದೊಡ್ಡ ಧರ್ಮಗಳಿವೆ. ಅವರು ಪರಸ್ಪರ ಸಂಘರ್ಷದಿಂದ ತಮ್ಮ ಅಸ್ತಿತ್ವ ಪ್ರಕಟಿಸುತ್ತಿದ್ದಾರೆ. ಲೋಕದಲ್ಲಿ ಬೇರೆಲ್ಲೂ ಇಂತಹ ಉದಾಹರಣೆ ಸಿಗಲಾರದು. ಮಿರ್ಝಾ ಸಾಹೇಬರ ವಾದ ತಾನು ಅವರೆಲ್ಲರಿಗೂ ಹಕಮ್ ಅದಲ್ (ನೀತಿವಂತ ತೀರ್ಪುಗಾರ) ಎಂದು. ಈ ವಿವಿಧ ಧರ್ಮಗಳ ಎದುರಿಗೆ ಇಸ್ಲಾಮನ್ನು ಶ್ರೇಷ್ಠವೆಂದು ಪ್ರಕಟಿಸುವ ಬಹಳ ಸಾಮರ್ಥ್ಯ ಅವರಿಗೆ ಇತ್ತು ಎನ್ನುವುದರ ಬಗ್ಗೆ ಸಂಶಯವಿಲ್ಲ. ಇದು ಅವರ ಅಧ್ಯಯನ ಮತ್ತು ಅಭ್ಯಾಸದ ಕಾರಣದಿಂದಾಗಿತ್ತು.ಇಷ್ಟು ವೈಭವಶಾಲಿಯಾದ ವ್ಯಕ್ತಿ ಹಿಂದೂಸ್ಥಾನದ ಧಾರ್ಮಿಕ ಲೋಕದಲ್ಲಿ ಭವಿಷ್ಯತ್ಕಾಲದಲ್ಲಿ ಜನಿಸುವರೆಂಬ ಪ್ರತೀಕ್ಷೆ ಇಲ್ಲ. ಅವರು ತಮ್ಮ ಅಭಿಲಾಷೆಗಳನ್ನು ಧರ್ಮಗಳನ್ನು ಅಧ್ಯಯನ ಮಾಡುವ ಮೂಲಕ ಈಡೇರಿಸಿದ್ದರು. (ತಾರೀಖೆ ಅಹ್ಮದಿಯ್ಯತ್ ಭಾಗ 3 ಪುಟ 571–573).

ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ಹೀಗೆ ಶುಭವಾರ್ತೆ ನೀಡಿದ್ದರು: ಬನೀ ಇಸ್ರಾಈಲ್‌ರಿಗೆ ನಿಯೋಜಿಸಲ್ಪಟ್ಟ ಮಸೀಹರನ್ನು ಹೋಲುವಂತಹ ಒಬ್ಬ ಮಸೀಹರನ್ನು ಮುಸ್ಲಿಮ್ ಸಮುದಾಯಕ್ಕೆ ಅಲ್ಲಾಹನು ನಿಯೋಜಿಸಿ ಈ ಸಮುದಾಯವನ್ನು ಅನುಗ್ರಹಿಸುವನು. ಈ ಇಬ್ಬರು ಮಸೀಹರನ್ನು ವಿರೋಧಿಸುವವರು ಸಹ ಪರಸ್ಪರ ಸರಿಹೋಲುವವರಾಗಿರುವರು.

ಆದುದರಿಂದ ವಾಗ್ದತ್ತ ಮಸೀಹ್‌ರನ್ನು[ಅ] ಪರಿಹಾಸ ಮಾಡುವವರು ವಾಸ್ತವಿಕವಾಗಿ ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ನುಡಿದ ಈ ಕೆಳಗಿನ ಭವಿಷ್ಯವಾಣಿಯನ್ನು ಈಡೇರಿಸುವವರಾಗಿರುತ್ತಾರೆ. ಹಝ್‌ರತ್ ಪೈಗಂಬರ್[ಸ] ಈ ಕೆಳಗಿನಂತೆ ಹೇಳಿದರೆಂದು ಅಬ್ದುಲ್ಲಾ ಬಿನ್ ಅಮ್ರ್ ವರದಿ ಮಾಡುತ್ತಾರೆ: "ಬನೀ ಇಸ್ರಾಈಲ್ ಜನಾಂಗದಲ್ಲಿ ಸಂಭವಿಸಿದ ಹಾಗೆಯೇ ನನ್ನ ಸಮುದಾಯದಲ್ಲೂ ಒಂದು ಚಪ್ಪಲಿ ಅದರ ಜೋಡಿ ಚಪ್ಪಲಿಯನ್ನು ಹೋಲುವಂತೆ ಸಂಭವಿಸುವುದು. ಅವರಲ್ಲಿ ಯಾರಾದರೂ ತನ್ನ ಮಾತೆಯನ್ನು ಲೈಂಗಿಕವಾಗಿ ಸಂಪರ್ಕಿಸಿದ್ದರೆ ನನ್ನ ಸಮುದಾಯದಲ್ಲೂ ಹಾಗೆ ಸಂಭವಿಸುವುದು. ಬನೀ ಇಸ್ರಾಈಲ್ ಜನಾಂಗದವರು 72 ಪಂಗಡಗಳಾಗಿ ವಿಭಜಿಸಲ್ಪಟ್ಟಿದ್ದಾರೆ. ನನ್ನ ಸಮುದಾಯ 73 ಪಂಗಡಗಳಾಗಿ ವಿಭಜಿಸಲ್ಪಡುವುದು. ಒಂದು ಪಂಗಡದ ಹೊರತು ಉಳಿದೆಲ್ಲವೂ ನರಕವಾಸಿಗಳಾಗುವುವು. 'ಆ ಪಂಗಡ ಯಾವುದು?' ಎಂದು ಕೇಳಿದಾಗ ಹಝ್‌ರತ್ ಪೈಗಂಬರ್[ಸ] ಹೇಳಿದರು: **'ಮಾ ಅನ ಅಲೈಹಿ ವ ಅಸ್‌ಹಾಬೀ'** – 'ನಾನು ಮತ್ತು ನನ್ನ ಸಹಾಬರು ಅನುಸರಿಸುವುದನ್ನು ಅನುಸರಿಸುವವರು ಅವರಾಗಿರುವರು'." (ತಿರ್ಮಿಧೀ).

ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿರುವರು, ಮುಸ್ಲಿಮರು ಯಹೂದಿಯರ ಹಾಗೆ ಆಗುವರೆಂದು. ಈಗ ಸಹ ಯಹೂದಿಯರು ಪರಿಹಾಸ ಮಾಡುತ್ತಾ ಹೇಳುತ್ತಿದ್ದಾರೆ – ಈಸಾ ಮಸೀಹರು ಶಿಲುಬೆಗೇರಿಸಲ್ಪಟ್ಟು ಕೊಲ್ಲಲ್ಪಟ್ಟುದರಿಂದ ಶಾಪಗ್ರಸ್ತ ಮರಣವನ್ನು ಹೊಂದಿರುವರೆಂದು. ಅಹ್ಮದಿಯ್ಯತಿನ ಶತ್ರುಗಳು ಯಹೂದಿಯರ ಹೆಜ್ಜೆ ಗುರುತುಗಳಲ್ಲಿ ಚಲಿಸಿ ತಮ್ಮ ಬಳಿಗೆ ಅಲ್ಲಾಹನಿಂದ ಕಳುಹಿಸಲ್ಪಟ್ಟ ಮುಹಮ್ಮದೀ ಮಸೀಹರನ್ನು ಪರಿಹಾಸ ಮಾಡುತ್ತಿದ್ದಾರೆ. ಹೀಗೆಯೇ ಸಂಭವಿಸಬೇಕಾದುದೇ ಆಗಿತ್ತು. ಅಜ್ಞಾನಿಗಳಾದ ಶತ್ರುಗಳು ಸತ್ಯವಿಶ್ವಾಸಿಗಳ ಹೃದಯಗಳಿಗೆ ನೋವನ್ನುಂಟುಮಾಡಲು ಇಂತಹ ಸುಳ್ಳು ಆಪಾದನೆಗಳನ್ನು ಮಾಡುತ್ತಿದ್ದಾರೆ.

ಹಝ್‌ರತ್ ವಾಗ್ದತ್ತ ಮಸೀಹರು[ಅ] ತನ್ನ ಜೀವಿತದ ಕೊನೆಯ ಭಾಗದಲ್ಲಿ ಖಾದಿಯಾನ್‌ನಿಂದ ಲಾಹೋರಿಗೆ ಪ್ರಯಾಣ ಮಾಡಿ ಅಲ್ಲಿಗೆ 1908 ಏಪ್ರಿಲ್ ದಿನಾಂಕ 29ರಂದು ತಲಪಿದ್ದರು. ಅವರು 1908 ಮೇ ದಿನಾಂಕ 26ರಂದು ಲಾಹೋರಿನಲ್ಲಿ ನಿಧನ ಹೊಂದಿದರು. ಅವರ ಮೃತದೇಹವನ್ನು ಖಾದಿಯಾನಿನಲ್ಲಿ ದಫನು ಮಾಡಲಾಯಿತು.

ಹಝ್‌ರತ್ ವಾಗ್ದತ್ತ ಮಸೀಹರು[ಅ] ಲಾಹೋರಿಗೆ ಹೋದುದು ತನ್ನ ಪತ್ನಿಯ ರೋಗ ಚಿಕಿತ್ಸೆಗೋಸ್ಕರವಾಗಿತ್ತು. ವಾಗ್ದತ್ತ ಮಸೀಹರು ದೀರ್ಘಕಾಲದಿಂದ ಮೈಗ್ರೈನ್ (Migrain) ಮತ್ತು ಭೇದಿ ರೋಗ ಬಾಧಿತರಾಗಿದ್ದರು. ಇಸ್ಲಾಮಿನ ವಿರುದ್ಧ ಶತ್ರುಗಳು ಮಾಡುತ್ತಿದ್ದ ಆಕ್ಷೇಪಗಳಿಗೆ ಉತ್ತರ ನೀಡುವುದರಲ್ಲಿ ಸದಾ ನಿರತರಾಗಿದ್ದ ಅವರು ಗ್ರಂಥಗಳನ್ನು ಬರೆಯುತ್ತಾ ಭಾಷಣಗಳನ್ನು ಮಾಡುತ್ತಾ ತನ್ನ ಅನುಯಾಯಿಗಳನ್ನು ಭೇಟಿಯಾಗುತ್ತಾ ಅವಿಶ್ರಾಂತವಾಗಿ ದುಡಿಯುತ್ತಿದ್ದುದರಿಂದ ಅವರ ಆರೋಗ್ಯ ಕೆಟ್ಟು ಹೋಯಿತು. 1908 ಮೇ ದಿನಾಂಕ 26ರಂದು ಬೆಳಗ್ಗೆ 10:30ರ ಸಮಯದಲ್ಲಿ ಅವರು ಹಾಸಿಗೆಯಲ್ಲಿ ಮಲಗಿರುವಾಗ ನಿಧನ ಹೊಂದಿದಾಗ ಅವರ ಸುತ್ತು ಮುತ್ತಲೂ ಅವರ ಕುಟುಂಬದವರು ಮತ್ತು ಅವರ ಅನುಯಾಯಿಗಳು ಹಾಜರಿದ್ದರು. (ತಾರೀಖೆ ಅಹ್ಮದಿಯ್ಯತ್ ಸಂಪುಟ–2 ಪುಟ 538–543).

## ವಾಗ್ದತ್ತ ಮಸೀಹರ ಮರಣದ ಬಗ್ಗೆ ಭವಿಷ್ಯವಾಣಿಗಳು

ವಾಗ್ದತ್ತ ಮಸೀಹರು ನಿಧನ ಹೊಂದುವುದಕ್ಕೆ ಮೂರು ವರ್ಷ ಮೊದಲು 1905ರಲ್ಲಿ ಅಲ್ಲಾಹನು ಅವರ ಮೃತ್ಯು ಬಗ್ಗೆ ಮುನ್ಸೂಚನೆ ನೀಡಲು ತೊಡಗಿದ್ದನು.

1905 ಎಪ್ರಿಲ್ ದಿನಾಂಕ 9ರಂದು ಸರ್ವಶಕ್ತನಾದ ಅಲ್ಲಾಹನು ಹಝ್‌ರತ್ ವಾಗ್ದತ್ತ ಮಸೀಹರಿಗೆ ಹೀಗೆ ಸಂದೇಶವಾಣಿ ಅವತೀರ್ಣ ಗೊಳಿಸಿದ್ದನು: **ಖುರುಬ ಅಜಲುಕಲ್ ಮುಖದ್ದರು** – "ನಿನಗೆ ವಿಧಿಸಲ್ಪಟ್ಟ ಜೀವಿತ ಕಾಲಾವಧಿ ಕೊನೆಗೊಳ್ಳಲಿದೆ."

1905 ಎಪ್ರಿಲ್ ದಿನಾಂಕ 24ರಂದು ಹೀಗೆ ಅಲ್ಲಾಹನಿಂದ ಸಂದೇಶವಾಣಿ ಲಭಿಸಿತು: **ತಸೂಮ್ ಹವಾದಿಸ್ ಔರ್ ಅಜಾಯಿಬಾತ್ ಖುದ್‌ರತ್ ದಿಖ್‌ಲಾನೆ ಕೆ ಬಅ್‌ದ್ ತೇರಾ ಹಾದಿಸ ಹೋಗ** – "ಎಲ್ಲ ಘಟನೆಗಳು ಮತ್ತು ನೈಸರ್ಗಿಕ ಅದ್ಭುತಗಳು ಸಂಭವಿಸಿದ ನಂತರ ನಿನಗೆ ಸಂಬಂಧಿಸಿದ ಘಟನೆ ಸಂಭವಿಸುವುದು."

(ಬರಾಹೀನೆ ಅಹ್ಮದಿಯಾ ಸಂಪುಟ–5 ಪುಟ 115).

ಸರ್ವಶಕ್ತನಾದ ಅಲ್ಲಾಹನು ಹಝ್‌ರತ್ ವಾಗ್ದತ್ತ ಮಸೀಹ್‌ರಿಗೆ[ಅ] ಅವರಿಗೆ ಸಂಭವಿಸುವ ಮೃತ್ಯು ಬಗ್ಗೆ ತಿಳಿಸುವುದನ್ನು ಅಲ್ಲಾಹನು ಮುಂದುವರಿಸಿದ್ದನು ಮತ್ತು ಅವರಿಗೆ ತನ್ನ ಮರಣ ಶಾಸನವನ್ನು "ಅಲ್ ವಸಿಯ್ಯತ್" ಎಂಬ ಹೆಸರಲ್ಲಿ ಕಿರು ಪುಸ್ತಕದ ರೂಪದಲ್ಲಿ ಬರೆಯುವ ಶಕ್ತಿ ನೀಡಿದನು. ಅವರು "ಅಲ್ ವಸಿಯ್ಯತ್"ನಲ್ಲಿ ಹೀಗೆ ಬರೆದರು:

"ಪ್ರತಾಪಶಾಲಿಯೂ ಪ್ರಭಾಮಯನೂ ಆಗಿರುವ ಅಲ್ಲಾಹನು ನಿರಂತರವಾದ ದಿವ್ಯ ಸಂದೇಶಗಳ ಮೂಲಕ ನಾನು ನಿಧನ ಹೊಂದುವ ಕಾಲವು ಸಮೀಪವಾಗಿದೆ ಎಂದು ನನಗೆ ತಿಳಿಸಿರುವನು. ಈ ಬಗ್ಗೆ ಅಲ್ಲಾಹನು ನೀಡಿದ ಸಂದೇಶವಾಣಿಗಳು ಎಷ್ಟು ನಿರಂತರವಾಗಿ ನನಗೆ ತಲುಪಿದುವು ಎಂದರೆ ನನ್ನ ಅಸ್ತಿತ್ವವನ್ನು ಅದರ ತಳಹದಿಯಿಂದಲೇ ಅಲುಗಾಡಿಸಿದುವು ಮತ್ತು ಈ ಜೀವಿತವನ್ನು ನನ್ನ ಮೇಲೆ ತಣ್ಣಗಾಗುವಂತೆ ಮಾಡಿದುವು. ಆದುದರಿಂದ ನನ್ನ ಸ್ನೇಹಿತರಿಗಾಗಿ ಮತ್ತು ನನ್ನ ಮಾತುಗಳಿಂದ ಲಾಭವನ್ನು ಹೊಂದಲು ಬಯಸುವವರಿಗಾಗಿ ಉಪದೇಶ ರೂಪದಲ್ಲಿ ಬರೆಯುವುದು ಯೋಗ್ಯವಾಗಿದೆ ಎಂದು ನಾನು ಗ್ರಹಿಸಿದೆನು. ಮೊದಲನೆಯದಾಗಿ ನನಗೆ ಲಭಿಸಿದ ದಿವ್ಯ ಸಂದೇಶವಾಣಿಗಳನ್ನು ಉಲ್ಲೇಖಿಸುತ್ತೇನೆ. ಈ ಸಂದೇಶವಾಣಿಗಳು ನನ್ನ ಮರಣದ ಮುಂಚಿತವಾಗಿಯೇ

ತಿಳಿಸಿದುದರಿಂದ ಈ ಉಪದೇಶವನ್ನು ಬರೆಯಲು ನನ್ನನ್ನು ಪ್ರೇರೇಪಿಸಿದುವು. (ಅಲ್ ವಸಿಯ್ಯತ್ ಪುಟ–1).

1908 ಮೇ ದಿನಾಂಕ 20ರಂದು ಹಝ್ರತ್ ವಾಗ್ದತ್ತ ಮಸೀಹ್(ಅ) ನಿಧನ ಹೊಂದುವುದಕ್ಕೆ ಕೆಲವೇ ದಿನಗಳ ಮೊದಲು ಸರ್ವಶಕ್ತನಾದ ಅಲ್ಲಾಹನು ಹೀಗೆ ಸಂದೇಶವಾಣಿ ಅವತೀರ್ಣಗೊಳಿಸಿದನು: **ಅರ್ರಾಹೀಲು ಸುಮ್ಮರ್ರಾಹೀಲು ವಲ್‌ಮೌತು ಖರೀಬುನ್** – "ನಿರ್ಗಮನದ ಸಮಯವಾಗಿದೆ. ಪುನಃ ನಿರ್ಗಮನದ ಸಮಯವಾಗಿದೆ ಮತ್ತು ಮೃತ್ಯು ಸಮೀಪವಾಗಿದೆ." (ಅಲ್‌ಬದ್ರ್ ಪತ್ರಿಕೆ ಸಂಪುಟ 7 ಸಂಚಿಕೆ 22 1908 ಜೂನ್ ದಿನಾಂಕ 2 ಪುಟ 3).

ಮೇಲೆ ಉಲ್ಲೇಖಿಸಿದ ಸರ್ವಶಕ್ತನಾದ ಅಲ್ಲಾಹನ ಸಂದೇಶವಾಣಿಗಳು ಹಝ್ರತ್ ವಾಗ್ದತ್ತ ಮಸೀಹರ(ಅ) ಬಗ್ಗೆ ಸರ್ವಶಕ್ತನಾದ ಅಲ್ಲಾಹನಿಗಿದ್ದ ಪ್ರೀತಿಯನ್ನು ಸೂಚಿಸುತ್ತವೆ.

## ದೃಕ್ಸಾಕ್ಷಿಗಳ ಹೇಳಿಕೆಗಳು :

ಹಝ್ರತ್ ವಾಗ್ದತ್ತ ಮಸೀಹ್(ಅ)ರು ನಿಧನ ಹೊಂದುವಾಗ ಅವರ ಸಮೀಪ ಹಾಜರಿದ್ದ ಅವರ ಪುತ್ರರಾದ ಮತ್ತು ದ್ವಿತೀಯ ಖಲೀಫರಾಗಿ ಅನಂತರ ಚುನಾಯಿತರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ತನ್ನ ಪುಸ್ತಕ "ಹಝ್ರತ್ ಅಹ್ಮದ್"ನಲ್ಲಿ ಹೀಗೆ ಬರೆಯುತ್ತಾರೆ :

"ಹಝ್ರತ್ ವಾಗ್ದತ್ತ ಮಸೀಹ್(ಅ) ತೀವ್ರವಾಗಿ ಭೇದಿ ರೋಗದಿಂದ ಬಾಧಿತರಾಗಿದ್ದರು. ಅವರು ಲಾಹೋರಿಗೆ ಆಗಮಿಸಿದಾಗ ಅವರ ರೋಗಬಾಧೆ ವರ್ಧಿಸಿತು. ನಿರಂತರವಾಗಿ ಸಂದರ್ಶಕರು ಆಗಮಿಸುತ್ತಿದ್ದುದರಿಂದ ಅವರಿಗೆ ವಿಶ್ರಾಂತಿ ದೊರಕಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಅವರಿಗೆ ಸರ್ವಶಕ್ತನಾದ ಅಲ್ಲಾಹನ ಸಂದೇಶವಾಣಿ ಲಭಿಸಿತು: 'ನಿರ್ಗಮನದ ಸಮಯವಾಗಿದೆ. ಪುನಃ ನಿರ್ಗಮನದ ಸಮಯವಾಗಿದೆ.'

"ಈ ಸಂದೇಶವಾಣಿಯ ಕಾರಣದಿಂದ ಹಝ್ರತ್ ವಾಗ್ದತ್ತ ಮಸೀಹರ(ಅ) ಅನುಯಾಯಿಗಳಲ್ಲಿ ಮತ್ತು ಸಂಬಂಧಿಕರಲ್ಲಿ ಬಹಳ ಆತಂಕ ತಲೆದೋರಿತು. ಆದರೆ ಖಾದಿಯಾನ್‌ನಲ್ಲಿ ಒಬ್ಬ ಸ್ನೇಹಿತರು ನಿಧನ ಹೊಂದಿದ ಸಮಾಚಾರ ಆಗ ದೊರೆತುದರಿಂದ ಆ ಸಂದೇಶವಾಣಿ ಆ ಘಟನೆಗೆ ಸಂಬಂಧಿಸಿದುದು ಎಂದು ಅವರು ಸಮಾಧಾನ ಹೊಂದಿದರು. ಹಝ್ರತ್ ವಾಗ್ದತ್ತ ಮಸೀಹ್‌ರೊಂದಿಗೆ(ಅ) ಆ ಸಂದೇಶವಾಣಿ ಬಗ್ಗೆ ವಿಚಾರಿಸಿದಾಗ ಅವರು ಹೇಳಿದರು: 'ಸಂದೇಶವಾಣಿ ಖಾದಿಯಾನ್‌ನಲ್ಲಿ ಮೃತರಾದವರಿಗೆ ಸಂಬಂಧಿಸಿದುದಲ್ಲ. ಅದು ಹೆಚ್ಚು ಮಹತ್ವಪೂರ್ಣರಾದ ವ್ಯಕ್ತಿಗೆ ಸಂಬಂಧಿಸಿದೆ.'

"ಭವಿಷ್ಯವಾಣಿಯಿಂದ ಆತಂಕಗೊಂಡಿದ್ದ ನನ್ನ ಮಾತೆಯವರು ಹೇಳಿದರು: ಎಲ್ಲರೂ ಖಾದಿಯಾನಿಗೆ ಮರಳಿ ಹೋಗಬೇಕೆಂಬುದು ನನ್ನ ಆಶೆಯಾಗಿದೆ. ಆಗ ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದರು: 'ಖಾದಿಯಾನಿಗೆ ಈಗ ಮರಳಿ ಹೋಗುವುದು ನನ್ನ ಅಧಿಕಾರಕ್ಕೊಳಪಟ್ಟಿಲ್ಲ. ಈ ಸರ್ವಶಕ್ತನಾದ ಅಲ್ಲಾಹನು ಮಾತ್ರ ನನ್ನನ್ನು ಮರಳಿಸಬಲ್ಲನು.'

"ವಾಗ್ದತ್ತ ಮಸೀಹ್(ಅ)ರು ರೋಗ ಬಾಧಿತರಾಗಿದ್ದರೂ ಅವರಿಗೆ ಮೃತ್ಯು ಬಗ್ಗೆ ಮುನ್ಸೂಚನೆ ನೀಡುವ ಸಂದೇಶವಾಣಿ ಲಭಿಸಿದ್ದರೂ ಅವರು ತನ್ನ ಕೆಲಸದಲ್ಲಿ ನಿರತರಾಗಿದ್ದರು.

"ಇಂತಹ ಸ್ಥಿತಿಯಲ್ಲಿಯೂ ಹಝ್ರತ್ ವಾಗ್ದತ್ತ ಮಸೀಹರು ಹಿಂದು ಮತ್ತು ಮುಸ್ಲಿಮರ ಮಧ್ಯೆ ಸೌಹಾರ್ದ ಮೂಡಿಸುವ ಬಗ್ಗೆ ಒಂದು ಭಾಷಣ ಮಾಡಲು ನಿರ್ಧರಿಸಿದರು. ಅವರು ಬರಹ ರೂಪದಲ್ಲಿ ಭಾಷಣವನ್ನು ಬರೆದು ಅದಕ್ಕೆ ಪೈಗಾಮೆ ಸುಲ್‌ಹ್ (ಮೈತ್ರಿ ಸಂದೇಶ) ಎಂಬ ಶೀರ್ಷಿಕೆ ನೀಡಿದರು. ಈ ಭಾಷಣವನ್ನು ಬರೆಯಲು ಪರಿಶ್ರಮಿಸಿದ ಕಾರಣ ಅವರ ಆರೋಗ್ಯ ಇನ್ನಷ್ಟು ಕೆಟ್ಟು ಹೋಯಿತು. ಅವರ ಭೇದಿ ರೋಗ ವರ್ಧಿಸಿತು. ಭಾಷಣವನ್ನು ಬರೆದು ಮುಕ್ತಾಯ ಗೊಳಿಸಿದ ದಿನದ ಹಿಂದಿನ ರಾತ್ರಿ ಹೀಗೆ ಸಂದೇಶವಾಣಿ ಲಭಿಸಿತು : 'ನಶ್ವರವಾದ ಜೀವಿತದ ಬಗ್ಗೆ ಭರವಸೆ ಹೊಂದಬೇಡ.'

"ಹಝ್ರತ್ ವಾಗ್ದತ್ತ ಮಸೀಹರು ಈ ಸಂದೇಶವಾಣಿ ತನಗೆಯೇ ಸಂಬಂಧಿಸಿದೆ ಎಂದು ತನ್ನ ಆಪ್ತರೊಂದಿಗೆ ಹೇಳಿದರು. ಮರುದಿನ ಭಾಷಣ ಬರೆದು ಮುಕ್ತಾಯಗೊಳಿಸಿ ಮುದ್ರಿಸಲು ಕಳುಹಿಸಲಾಯಿತು. ಹಗಲು ಕಳೆದ ನಂತರ ರಾತ್ರಿ ಭೇದಿ ರೋಗ ವರ್ಧಿಸಿದುದರಿಂದ ಹಝ್ರತ್ ವಾಗ್ದತ್ತ ಮಸೀಹರು(ಅ) ಬಹಳ ಬಲಹೀನತೆಗೊಳಗಾದರು. ಅವರು ನನ್ನ ಮಾತೆಯನ್ನು ಎಬ್ಬಿಸಿದರು. ನನ್ನ ಮಾತೆ ಆಗಮಿಸಿದಾಗ ನನ್ನ ಪಿತ ಬಹಳ ನಿತ್ರಾಣ ಅವಸ್ಥೆಯಲ್ಲಿದ್ದರು. ನನ್ನ ಮಾತೆ ಆತಂಕಗೊಂಡು ವಿಚಾರಿಸಿದಾಗ ಅವರು ಹೇಳಿದರು: 'ಇದು ನಾನು ನಿನ್ನೊಂದಿಗೆ ಹೇಳಿದುದೇ ಆಗಿದೆ.' (ಅದರ ಉದ್ದೇಶ ಮೃತ್ಯು ಆಗಿತ್ತು). ಅನಂತರ ಅವರಿಗೆ ಇನ್ನೊಂದು ಭೇದಿಯಾದಾಗ ಅವರು ಹೆಚ್ಚು ನಿತ್ರಾಣರಾದರು. ಅವರು ಹೇಳಿದರು: 'ಮೌಲವಿ ನೂರುದ್ದೀನ್‌ರನ್ನು ಕರೆಸು. ಮಹ್‌ಮೂದನನ್ನು ಎಬ್ಬಿಸು (ಎಂದರೆ ಈ ಪುಸ್ತಕದ ಲೇಖಕನನ್ನು) ಮತ್ತು ಮೀರ್ ಸಾಹಿಬ (ಅವರ ಪತ್ನಿಯ ಪಿತ)ರನ್ನು ಕರೆ.'

"ನಾನು ಕಟ್ಟಡದ ಕೆಳಗಿನ ಅಂತಸ್ತಿನಲ್ಲಿ ನಿದ್ರಿಸುತ್ತಿದ್ದೆ. ನನ್ನನ್ನು ಕರೆಯಲಾಯಿತು. ನಾನು ಅವರನ್ನು ಅಸ್ವಸ್ಥರಾಗಿ ಕಂಡೆನು. ಡಾಕ್ಟರ್ ಆಗಮಿಸಿ ತನಗೆ ಸಾಧ್ಯವಿರುವ ರೋಗೋಪಚಾರ ನಡೆಸಿದ್ದರು. ಆದರೆ ಅವರಿಗೆ ಸುಖವಾಗಲಿಲ್ಲ. ಕೊನೆಗೆ ಒಂದು ಇಂಜೆಕ್ಷನ್ ನೀಡಿದಾಗ ಅವರು ನಿದ್ರಿಸಲು ತೊಡಗಿದರು. ಅವರು ಮುಂಜಾನೆ ನಿದ್ರೆಯಿಂದ ಎದ್ದು ಸುಬ್‌ಹ್ ನಮಾಝ್ ಅನುಷ್ಠಿಸಿದರು. ಅವರ ಕಂಠ ಗೊಗ್ಗರು ಧ್ವನಿ ಹೊಂದಿತ್ತು. ಅವರು ಮಾತನಾಡಲು ಪ್ರಯತ್ನಿಸಿದಾಗ ಸಾಧ್ಯವಾಗಲಿಲ್ಲ. ಅವರು ಲೇಖನಿ ಮತ್ತು ಶಾಯಿ ತರಲು ಹೇಳಿದರು. ಅವರಿಗೆ ಬರೆಯಲಾಗಲಿಲ್ಲ. ಅನಂತರ ಅವರು ಮಲಗಿದಾಗ ಅವರು ಪ್ರಜ್ಞಾಶೂನ್ಯರಾದರು. ಬೆಳಗ್ಗೆ ಅಂದಾಜು 10:30 ಗಂಟೆಗೆ ಅವರ ಪರಿಶುದ್ಧ ಆತ್ಮ ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಗೆ ತೆರಳಿತು. ಅವರು ಸರ್ವಶಕ್ತನಾದ ಅಲ್ಲಾಹನ ಧರ್ಮದ ಸೇವೆಗೋಸ್ಕರ ತನ್ನ ಇಡೀ ಜೀವಿತವನ್ನು ಅರ್ಪಿಸಿದ್ದರು. ನಾವೆಲ್ಲರೂ ಅಲ್ಲಾಹನಿಗೆ ಸೇರಿದವರು. ನಾವೆಲ್ಲರೂ ನಿಶ್ಚಯವಾಗಿಯೂ ಅವನ ಕಡೆಗೆಯೇ ಮರಳುವವರಾಗಿರುವೆವು. ಹಝ್ರತ್ ವಾಗ್ದತ್ತ ಮಸೀಹರ ಬಾಯಿಯಿಂದ ಅಲ್ಲಾಹ್ ಎಂಬ ಶಬ್ದ ಆವಾಗಲೆಲ್ಲ ಅವರ

ಬಾಯಿಯಿಂದ ಆಲಿಸಬಹುದಾಗಿತ್ತು." (ಹಝ್ರತ್ ಅಹ್ಮದ್, ಲೇಖಕ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್. ಪುಟ 58–59).

"ಸಿಲ್‌ಸಿಲ ಅಹ್ಮದಿಯಾ" ಸಂಪುಟ 1ರಲ್ಲಿ ಹಝ್ರತ್ ಮಸೀಹರ(ಅ) ಪುತ್ರ ಮಿರ್ಝಾ ಬಶೀರ್ ಅಹ್ಮದ್ ಹೀಗೆ ವಿವರಿಸುತ್ತಾರೆ: "1908 ಮೇ ದಿನಾಂಕ 25ರಂದು ಮಗ್‌ರಿಬ್, ಇಶಾ ನಮಾಝ್ ಅನುಷ್ಠಿಸಿದ ನಂತರ ಆಹಾರ ಸೇವಿಸಿ ನನ್ನ ಪಿತ ಮಲಗಿದರು. ರಾತ್ರಿ ಅಂದಾಜು 11 ಗಂಟೆಯ ಸಮಯ ನನ್ನ ಪಿತ ಶೌಚಾಲಯಕ್ಕೆ ಹೋದರು. ಅವರಿಗೆ ಭೇದಿ ರೋಗದ ಬಾಧೆ ಬಹಳ ಕಾಲದಿಂದ ಇತ್ತು. ಅವರು ಶೌಚಾಲಯದಿಂದ ಮರಳಿ ಬಂದಾಗ ಬಹಳ ನಿತ್ರಾಣ ಅವಸ್ಥೆಯಲ್ಲಿದ್ದರು. ಅವರು ನನ್ನ ಮಾತೆಯನ್ನು ಎಬ್ಬಿಸಿದರು. ನನ್ನ ಮಾತೆ ಅವರ ಕಾಲುಗಳನ್ನು ಒತ್ತಲು ಪ್ರಾರಂಭಿಸಿದರು. ಅವರು ಪುನಃ ಶೌಚಾಲಯಕ್ಕೆ ಹೋದರು ಮತ್ತು ಮರಳಿ ಬಂದಾಗ ಬಹಳ ನಿತ್ರಾಣ ಸ್ಥಿತಿಯಲ್ಲಿದ್ದರು. ಅವರ ಹಿರಿಯ ಪುತ್ರರನ್ನು ಮತ್ತು ಇಬ್ಬರು ಡಾಕ್ಟರ್‌ಗಳನ್ನು ಕರೆಸಲಾಯಿತು. ಅವರಿಗೆ ಹೆಚ್ಚಿಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಅವರ ಬಾಯಿಯಿಂದ ಅಲ್ಲಾಹ್, ನನ್ನ ಪ್ರಿಯ ಅಲ್ಲಾಹ್ ಎಂಬ ಶಬ್ದಗಳು ಮಾತ್ರ ಕೇಳಿಸುತ್ತಿದ್ದುವು. ಅಲ್ಲಿ ಹಾಜರಿದ್ದ ನನ್ನೊಂದಿಗೆ ಸುಬ್‌ಹ್ ಸಮಯದಲ್ಲಿ ನನ್ನ ಪಿತ ಕೇಳಿದರು: ಸುಬ್‌ಹ್ ನಮಾಝ್ ಸಮಯ ಆಯಿತೇ? ಎಂದು. ಅವರಿಗೆ ನಮಾಝ್ ಪೂರ್ಣಗೊಳಿಸಲಾಗಲಿಲ್ಲ. ಅವರು ಪ್ರಜ್ಞಾಶೂನ್ಯರಾದರು. ಅವರಿಗೆ ಪ್ರಜ್ಞೆ ಮರುಕಳಿಸಿದಾಗ ಅವರು ಸುಬ್‌ಹ್ ನಮಾಝ್ ಬಗ್ಗೆ ವಿಚಾರಿಸಿ ಹಾಸಿಗೆಯಲ್ಲಿಯೇ ನಮಾಝ್ ಅನುಷ್ಠಿಸಿದರು. ಅವರು ಬಹಳ ನಿತ್ರಾಣ ಸ್ಥಿತಿಯಲ್ಲಿದ್ದರು. ಅವರ ಬಾಯಿಂದ ಅಲ್ಲಾಹ್, ನನ್ನ ಪ್ರಿಯ ಅಲ್ಲಾಹ್ ಎಂಬ ಶಬ್ದ ಹೊರಡುತ್ತಿದ್ದುವು. ಬೆಳಗ್ಗೆ 10:30ಕ್ಕೆ ತನ್ನ ಕುಟುಂಬದವರು ತನ್ನ ಸುತ್ತು ಮುತ್ತಲಿರುವಾಗ ಅವರು ನಿಧನ ಹೊಂದಿದರು – ಇನ್ನಾಲಿಲ್ಲಾಹಿ ಇನ್ನಾ ಇಲೈಹಿ ರಾಜಿಊನ್."
(ಸಿಲ್‌ಸಿಲ ಅಹ್ಮದಿಯಾ ಸಂಪುಟ 1).

ಈ ಸಂಭವದ ಬಗ್ಗೆ "ಸೀರತುಲ್ ಮಹ್‌ದಿ"ಯಲ್ಲಿ ಹೀಗೆ ವಿವರಿಸಲಾಗಿದೆ : 1908 ಮೇ ದಿನಾಂಕ 25ರಂದು ತನ್ನ ಕೊನೆಯ ಪುಸ್ತಕ **ಪೈಗಾಮೆ ಸುಲ್‌ಹ್** ಅವರು (ಎಂದರೆ ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮ್) ಬರೆದು ಮುಗಿಸಿದರು. ಆ ದಿನ ರಾತ್ರಿ ಇಶಾ ನಮಾಝಿನ ನಂತರ ಅವರು ರಾತ್ರಿಯ ಊಟ ಮಾಡಿದರು. ಅನಂತರ ಅವರಿಗೆ ಭೇದಿ ರೋಗ ಬಾಧಿಸಿತು. ಅದು ಅವರಿಗೆ ಸಾಮಾನ್ಯವಾಗಿ ಬಾಧಿಸುವ ಕಾಯಿಲೆ ಆಗಿತ್ತು. ಅವರು ಅನಂತರ ಮಲಗಿದಾಗ ಅವರ ಕಾಲುಗಳನ್ನು ಅವರ ಕುಟುಂಬದ ಕೆಲವರು ಒತ್ತುತ್ತಿದ್ದರು. ಅವರು ನಿದ್ರಿಸಿದ ನಂತರ ಪುನಃ ಶೌಚಾಲಯಕ್ಕೆ ಹೋಗಲಿಕ್ಕೆ ಎದ್ದರು. ಮರಳಿ ಬಂದಾಗ ಅವರು ಬಹಳ ನಿತ್ರಾಣ ಸ್ಥಿತಿಯಲ್ಲಿದ್ದರು. ಅವರು ತನ್ನ ಪತ್ನಿಯನ್ನು ಎಬ್ಬಿಸಿದರು. ಆಕೆ ಅವರ ಕಾಲೊತ್ತಲು ಪ್ರಾರಂಭಿಸಿದರು. ಆದರೆ ಅವರ ಸ್ಥಿತಿ ಉಲ್ಬಣಗೊಂಡಿತು. ಆಕೆ ಹೇಳುತ್ತಾರೆ: ಅವರು ಶೌಚಾಲಯಕ್ಕೆ ಹೋಗುವ ಆವಶ್ಯಕತೆ ಇದೆ ಎಂದು ಹೇಳಿದಾಗ ಅಲ್ಲಿಯೇ ವ್ಯವಸ್ಥೆ ಮಾಡಲಾಯಿತು. ಅನಂತರ ಅವರಿಗೆ ವಾಂತಿಯಾಯಿತು. ಅವರ ಪತ್ನಿ ಆತಂಕಗೊಂಡಾಗ ಅವರು ಹೇಳಿದರು: ಏನು ವಿಧಿಸಲ್ಪಟ್ಟಿದೆಯೋ ಅದು ಸಂಭವಿಸಲಿದೆ. (ಇದು ಅವರ ಮೃತ್ಯು ಬಗ್ಗೆ ಹೇಳಿದುದಾಗಿತ್ತು). (ಸೀರತುಲ್ ಮಹ್‌ದಿ ಸಂಪುಟ 1 ಪುಟ 10–11).

ವಾಗ್ದತ್ತ ಮಸೀಹ್(ಅ) ಪ್ರಾರ್ಥನೆಯ ಸ್ಥಿತಿಯಲ್ಲಿ ನಿಧನರಾದರು. ಅದು ಯಾವ ರೀತಿಯಲ್ಲೂ ಆಕ್ಷೇಪಾರ್ಹವಲ್ಲ.

## ಶತ್ರುಗಳು ಮೃತ್ಯು ಸಮಯದಲ್ಲಿ ಹಾಜರಿರಲಿಲ್ಲ

ಹಝ್ರತ್ ವಾಗ್ದತ್ತ ಮಸೀಹರ(ಅ) ಮರಣದ ಬಗ್ಗೆ ಪರಿಹಾಸ ಮಾಡುವವರು ಆ ಸಮಯದಲ್ಲಿ ಹಾಜರಿರಲಿಲ್ಲ. ಹಝ್ರತ್ ವಾಗ್ದತ್ತ ಮಸೀಹ್(ಅ) ಸ್ವಾಭಾವಿಕವಾಗಿ ಹಾಸಿಗೆಯ ಮೇಲೆ ಮೃತರಾರೆಂದು ಎಲ್ಲ ವರದಿಗಳೂ ಹೇಳುತ್ತವೆ. ಅವರ ಕುಟುಂಬದ ಸದಸ್ಯರು ಮತ್ತು ಅನುಯಾಯಿಗಳು ಆಗ ಉಪಸ್ಥಿತರಿದ್ದರು. ಶತ್ರುಗಳು ಹೇಳುವ ಹಾಗೆ ವಾಗ್ದತ್ತ ಮಸೀಹ್(ಅ) ಮೃತರಾಗಿದ್ದರೆ ಅವರ ಅನುಯಾಯಿಗಳು ಅವರನ್ನು ಅನುಸರಿಸಿ ಅವರಿಗೋಸ್ಕರ ಜೀವ ಬಲಿದಾನ ನೀಡಲು ಸಿದ್ಧರಾಗುತ್ತಿದ್ದರೇ? ಶತ್ರುಗಳು ಹೇಳಿದ ತಥಾಕಥಿತ ಸಂಭವ ನಡೆದಿದ್ದರೆ ಹಝ್ರತ್ ವಾಗ್ದತ್ತ ಮಸೀಹರ(ಅ) ಅನುಯಾಯಿಗಳು ಯಾರೊಬ್ಬನೂ ಏಕೆ ಅವರನ್ನು ತಿರಸ್ಕರಿಸಿ ಅವರ ಜಮಾಅತನ್ನು ಬಿಟ್ಟು ಹೋಗಲಿಲ್ಲ?

## ಶಹೀದರ ಮೃತ್ಯುವಿಗೆ ಸಮಾನವಾದ ಮೃತ್ಯು

ಉದರ ರೋಗದಿಂದ ಬಾಧಿತನಾಗಿ ಮೃತನಾಗುವವನು ಶಹೀದ್ ಪದವಿಯವನು ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದು ಶತ್ರುಗಳು ಮರೆತು ಬಿಡುತ್ತಾರೆ.

ಮೇಲೆ ಉಲ್ಲೇಖಿಸಿದ ವರದಿಗಳಿಂದ ಸ್ಪಷ್ಟವಾಗುವುದೇನೆಂದರೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಶಹೀದ್ ಆಗಿ ಮೃತರಾದರು.

ಹದೀಸು ಹೀಗಿದೆ: ಅಬೂ ಹುರೈರ(ರ) ವರದಿ ಮಾಡುತ್ತಾರೆ : ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಉದರ ರೋಗ ಬಾಧಿತನಾಗಿ ಮೃತನಾಗುವವನು ಶಹೀದ್. ಪ್ಲೇಗ್ ರೋಗ ಬಾಧಿತನಾಗಿ ಮೃತನಾಗುವವನೂ ಶಹೀದ್. (ಸಹೀಹ್ ಬುಖಾರಿ).

ಹಝ್ರತ್ ವಾಗ್ದತ್ತ ಮಸೀಹರು ಪ್ರಕೃತಿ ಸಹಜವಾದ ರೀತಿಯಲ್ಲಿ ಮೃತರಾದರಲ್ಲದೆ ಶಹೀದ್ ಹಾಗೆ ಸಹ ಮೃತರಾದರು. ಇಮಾಮ್ ನವವಿ (ರಹ್ಮತುಲ್ಲಾಹಿ ಅಲೈಹಿ) ಶರ್‌ಹ್ ಮುಸ್ಲಿಮ್ ಎಂಬ ಗ್ರಂಥದಲ್ಲಿ ಬರೆಯುತ್ತಾರೆ: "ಉದರ ರೋಗ ಎಂದು ಹದೀಸಿನಲ್ಲಿ ಹೇಳಿದುದು ಭೇದಿ ರೋಗದ ಬಗ್ಗೆಯಾಗಿದೆ." (ಶರಹುಲ್ ನವವಿ ಸಹೀಹ್ ಮುಸ್ಲಿಮ್ ಭಾಗ 13 ಪುಟ 62).

ಹಝ್ರತ್ ಇಮಾಮ್ ಇಬ್ನು ಅಬ್ದುಲ್ ಬರ್ರ್(ರಹ್ಮತುಲ್ಲಾಹಿ ಅಲೈಹಿ) ಹೀಗೆ ಹೇಳುತ್ತಾರೆ: "ಉದರ ರೋಗ ಎಂದು ಹೇಳಿದುದು ಭೇದಿ ಬಗ್ಗೆ." (ಅಲ್ ಇಸ್‌ತಿಧ್‌ಕಾರ್).

ಅಹ್ಮದಿಯಾ ಜಮಾಅತಿನ ಶತ್ರುಗಳು ಆದರ ಭಾವದಿಂದ ಕಾಣುವ ಅತ್ಯಂತ ಶ್ರೇಷ್ಠ ವಿದ್ವಾಂಸರು ಸಹ ಭೇದಿ ರೋಗದಿಂದ ಮೃತರಾಗುವವರು ಶಹೀದ್ ಆಗಿರುತ್ತಾರೆಂದು ಹೇಳಿದ್ದಾರೆ.

ಆದುದರಿಂದ ಹಝ್ರತ್ ವಾಗ್ದತ್ತ ಮಸೀಹ್(ಅ) ಭವ್ಯವಾಗಿಯೇ ನಿಧನ ಹೊಂದಿದರೆಂಬುದು ಸ್ಪಷ್ಟವಾಗುತ್ತವೆ. ಅದು ಆಕ್ಷೇಪಾರ್ಹವೇನೂ ಅಲ್ಲ.

## ಪ್ರವಾದಿಗಳು ರೋಗ ಬಾಧಿತರಾಗುವುದಿಲ್ಲವೇ?

ಅಜ್ಞಾನಿಗಳಾದ ಕೆಲವು ಶತ್ರುಗಳು ಹೇಳುತ್ತಾರೆ: "ನಿಮ್ಮ ಮಸೀಹ್ ರೋಗ ಬಾಧಿತನಾದುದು ಏಕೆ? ಪ್ರವಾದಿಗಳು ರೋಗಿಗಳಾಗುವುದಿಲ್ಲ". ಇದು ಈ ಜನರು ಸ್ವತಃ ರೂಪಿಸಿದ ಮಾನದಂಡವಾಗಿದೆ. ಪವಿತ್ರ ಖುರ್‌ಆನ್, ಹದೀಸು ಮತ್ತು ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥಗಳು ಈ ಮಾನದಂಡವನ್ನು ನಿರಾಕರಿಸುತ್ತವೆ.

ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: **ವ ಮನ್ ನ್ನುಅಮ್ಮಿರುಹು ನುನಕ್ಕಿಸ್‌ಹು ಫಿಲ್ ಖಲ್‌ಖಿ ಅಫಲಾ ಯಅ್‌ಖಿಲೂನ್** – **"**ಯಾವನಿಗೆ ನಾವು ದೀರ್ಘಾಯುಷ್ಯ ನೀಡುತ್ತೇವೋ, ಅವನ ಪ್ರಕೃತಿಯಲ್ಲಿ ದೌರ್ಬಲ್ಯ ಉಂಟಾಗುವಂತೆ ಮಾಡುತ್ತೇವೆ. ಅವರೇನು ಮನವರಿಕೆ ಮಾಡುವುದಿಲ್ಲವೇ?**"** (36:69).

ಇದು ಎಲ್ಲರಿಗೂ ಪ್ರವಾದಿಗಳ ಸಮೇತ ಎಲ್ಲ ಮನುಷ್ಯರಿಗೂ ಅನ್ವಯಿಸುವ ನಿಯಮವಾಗಿದೆ. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ) ಹೇಳಿದನು: **ಖುಲ್ ಇನ್ನಮಾ ಅನ ಬಶರುನ್ ಮಿಸ್‌ಲುಕುಮ್ – "**ಹೇಳು: ನಾನು ಕೇವಲ ನಿಮ್ಮಂಥ ಒಬ್ಬ ಮನುಷ್ಯನಾಗಿದ್ದೇನೆ.**"** (ಪವಿತ್ರ ಖುರ್‌ಆನ್ 41:7).

ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಹೇಳಿದ ಮಾತುಗಳು ಪವಿತ್ರ ಖುರ್‌ಆನ್‌ನಲ್ಲಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: ಹಝ್ರತ್ ಇಬ್ರಾಹೀಮ್(ಅ) ಹೀಗೆ ಹೇಳಿದರೆಂದು: **ವ ಇದಾ ಮರಿಝ್‌ತು ಫಹುವ ಯಶ್‌ಫೀನಿ** – "ನಾನು ರೋಗಪೀಡಿತನಾದರೆ ಅವನು ನನ್ನನ್ನು ಗುಣಪಡಿಸುತ್ತಾನೆ.**"** (26:81).

ಅಹ್ಮದಿಯಾ ಜಮಾಅತಿನ ಶತ್ರುಗಳು ಹಝ್ರತ್ ಅಯ್ಯೂಬ್ ಅಲೈಹಿಸ್ಸಲಾಮರನ್ನೂ ಅವರಿಗೆ ಬಾಧಿಸಿದ ರೋಗವನ್ನೂ ಅದರ ಬಗ್ಗೆ ಅವರ ವಿದ್ವಾಂಸರು ಬರೆದುದನ್ನೂ ಮರೆತು ಬಿಟ್ಟಿದ್ದಾರೆಂದು ತೋರುತ್ತದೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ವ ಅಯ್ಯೂಬ ಇದ್‌ನಾದಾ ರಬ್ಬಹೂ ಅನ್ನೀ ಮಸ್ಸನೀ ಝ್ಝುರ್ರು ವ ಅನ್‌ತ ಅರ್‌ಹಮುರ್ರಾಹಿಮೀನ್ – "**ಇನ್ನು ಅಯ್ಯೂಬರ ಕುರಿತು: ಅವರು ತನ್ನ ಪ್ರಭುವನ್ನು ಕರೆದು ಹೀಗೆ ಪ್ರಾರ್ಥಿಸಿದರು – ನಾನು ಸಂಕಷ್ಟಕ್ಕೀಡಾಗಿದ್ದೇನೆ. ನೀನಾದರೋ ಕರುಣೆ ತೋರಿಸುವವರ ಪೈಕಿ ಅತ್ಯಂತ ಕಾರುಣ್ಯವಂತನಾಗಿರುವೆ.**"** (21:84).

**ವದ್‌ಕುರ್ ಅಬ್ದನಾ ಅಯ್ಯೂಬ. ಇದ್‌ ನಾದಾ ರಬ್ಬಹೂ ಅನ್ನೀ ಮಸ್ಸನಿಯ ಶೈತಾನು ಬಿನುಸ್‌ಬಿನ್ ವ ಅದ್ಹಾಬಿನ್ – "**ನಮ್ಮ ಭಕ್ತದಾಸ ಅಯ್ಯೂಬರನ್ನು ಸಹ ಜ್ಞಾಪಿಸು. 'ಶೈತಾನ್ ನನ್ನನ್ನು ಕಷ್ಟ ಮತ್ತು ಹಿಂಸೆಗೆ ಗುರಿಪಡಿಸಿದ್ದಾನೆ' ಎಂದು. ಅವರು ತನ್ನ ಪ್ರಭುವನ್ನು ಕರೆದು ಪ್ರಾರ್ಥಿಸಿದಾಗ.**"** (38:42).

ಪವಿತ್ರ ಖುರ್‌ಆನಿನ ಪ್ರಸಿದ್ಧ ವ್ಯಾಖ್ಯಾನಗಾರ ಇಬ್ನು ಕಸೀರ್ ತನ್ನ ವ್ಯಾಖ್ಯಾನ ಗ್ರಂಥದಲ್ಲಿ ಪವಿತ್ರ ಖುರ್‌ಆನಿನ ಅಧ್ಯಾಯ 38 ವಚನ 42ರ ಬಗ್ಗೆ ಹೀಗೆ ವಿವರಿಸುತ್ತಾರೆ: **"**ಅಲ್ಲಾಹನು ತನ್ನ ದಾಸನೂ ಸಂದೇಶವಾಹಕನೂ ಆಗಿದ್ದ ಹಝ್ರತ್ ಅಯ್ಯೂಬರನ್ನು(ಅ) ಪರೀಕ್ಷಿಸಿದ ಬಗ್ಗೆ ಈ ವಚನದಲ್ಲಿ ವಿವರಿಸಿದ್ದಾನೆ. ಆ ಪ್ರವಾದಿಯ ಶರೀರ ಮತ್ತು ಸಂಪತ್ತು ಅಲ್ಲಾಹನ ಪರೀಕ್ಷೆಗೆ ಗುರಿಯಾದುವು. ಅವರ ಹೃದಯದ ಹೊರತು ಶರೀರದ ಯಾವ ಅಂಗವೂ ರೋಗ ಬಾಧೆಯಿಂದ ಮುಕ್ತವಾಗಿರಲಿಲ್ಲ. ಅವರ ಬಳಿ ರೋಗ ಚಿಕಿತ್ಸೆಗೆ ಯಾವ ಅನುಕೂಲತೆಯೂ ಇರಲಿಲ್ಲ. ಅವರ ಪತ್ನಿ ಮಾತ್ರ ಅಲ್ಲಾಹನ ಮೇಲೆಯೂ ಅವನ ಸಂದೇಶವಾಹಕರಾದ ಹಝ್ರತ್ ಅಯ್ಯೂಬ್ ಬಗ್ಗೆಯೂ ನಿಷ್ಠೆ ಮತ್ತು ವಿಶ್ವಾಸ ಹೊಂದಿದ್ದರು. ಆಕೆ ಮನೆಗೆಲಸಮಾಡಿ ಪರಿಪಾಲಿಸಿ ತನ್ನ ಪತಿಗೆ ಹದಿನೆಂಟು ವರ್ಷಗಳಲ್ಲಿ ಸೇವೆ ಮಾಡಿದರು. ಹಿಂದೆ ಹಝ್ರತ್ ಅಯೂಬ್(ಅ) ಐಶ್ವರ್ಯವಂತರೂ ಅನೇಕ ಮಕ್ಕಳನ್ನು ಹೊಂದಿದವರೂ ಆಗಿದ್ದರು. ಅವರಿಗೆ ಎಲ್ಲವೂ ನಷ್ಟವಾದುವು. ಅವರನ್ನು ನಗರದ ಹೊರಗಡೆ ಹಾಕಲಾಯಿತು. ಅವರ ಪತ್ನಿಯ ಹೊರತು ಅವರ ಸಂಬಂಧಿಕರೆಲ್ಲರೂ ಅವರನ್ನು ತಿರಸ್ಕರಿಸಿದರು (ಅಲ್ಲಾಹನು ಆಕೆಯ ವರ್ತನೆ ಬಗ್ಗೆ ಸಂತೃಪ್ತನಾಗಲಿ). ಆಕೆ ಅನ್ಯರ ಮನೆಕೆಲಸ ಮುಗಿಸಿದ ಕೂಡಲೆ ತನ್ನ ಪತಿಯ ಬಳಿಗೆ ಬರುತ್ತಿದ್ದರು. ಹೀಗೆ ದೀರ್ಘಕಾಲ ಮುಂದುವರಿಯಿತು. ಕೊನೆಗೆ ಅಲ್ಲಾಹುವಿನ ಪರೀಕ್ಷೆ ಕೊನೆಗೊಂಡಿತು. ಹಝ್ರತ್ ಅಯ್ಯೂಬ್(ಅ) ಹೀಗೆ ಪ್ರಾರ್ಥಿಸಿದರು: **ಅನ್ನೀ ಮಸ್ಸನಿಯ ಝ್ಝುರ್ರು ವ ಅನ್‌ತ ಅರ್‌ಹಮುರ್ರಾಹಿಮೀನ್** – "ನಾನು ಸಂಕಷ್ಟಕ್ಕೀಡಾಗಿದ್ದೇನೆ. ನೀನಾದರೋ ಕರುಣೆದೋರುವವರ ಪೈಕಿ ಅತ್ಯಂತ ಕಾರುಣ್ಯವಂತನಾಗಿರುವೆ.**"** (ಪವಿತ್ರ ಖುರ್‌ಆನ್ 21:84). ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ವದ್‌ಕುರ್ ಅಬ್ದನಾ ಅಯ್ಯೂಬ ಇದ್‌ನಾದಾ ರಬ್ಬಹೂ ಅನ್ನೀ ಮಸ್ಸನಿಯ ಶೈತಾನು ಬಿನುಸ್‌ಬಿನ್ ವ ಅದ್ಹಾಬಿನ್ – "**ನನ್ನ ಭಕ್ತ ಅಯ್ಯೂಬರನ್ನು ಜ್ಞಾಪಿಸು. ಶೈತಾನ್ ನನ್ನನ್ನು ಕಷ್ಟ ಮತ್ತು ಹಿಂಸೆಗೆ ಗುರಿಪಡಿಸಿದ್ದಾನೆ ಎಂದು ಅವರು ತನ್ನ ಪ್ರಭುವನ್ನು ಕರೆದು ಪ್ರಾರ್ಥಿಸಿದಾಗ.**"** (ಪವಿತ್ರ ಖುರ್‌ಆನ್ 38:42).

**"**ಈ ವಚನದಲ್ಲಿ ಬಳಸಲಾದ ನುಸ್‌ಬ್ ಎಂಬ ಪದ ಶಾರೀರಿಕ ರೋಗಗಳ ಬಗ್ಗೆ ಮತ್ತು ಅದ್ಹಾಬ್ ಎಂಬ ಶಬ್ದ ಸಂಪತ್ತು ಮತ್ತು ಸಂತಾನದ ನಷ್ಟವನ್ನು ಸೂಚಿಸುತ್ತದೆ.**"** (ತಫ್‌ಸೀರ್ ಇಬ್ನು ಕಸೀರ್)

ಪವಿತ್ರ ಖುರ್‌ಆನಿನ ಇತರ ವ್ಯಾಖ್ಯಾನಗಾರರು ಮೇಲೆ ವಿವರಿಸಿದ ಹಾಗೆಯೇ ತಮ್ಮ ತಫ್‌ಸೀರ್ ಗ್ರಂಥಗಳಲ್ಲಿ ಬರೆದಿದ್ದಾರೆ. ಇಮಾಮ್ ಅಬೂ ಜಅಫರ್ ಮುಹಮ್ಮದ್ ಇಬ್ನು ಜರೀರ್ ಇಬ್ನು ಯಝೀದ್ ಅಲ್ ತ್ತಬರಿ ತನ್ನ ತಫ್‌ಸೀರ್ ಗ್ರಂಥವಾದ ಜಾಮಿಉಲ್ ಬಯಾನ್‌ನಲ್ಲಿ ಮೇಲಿನಂತೆಯೇ ವಿವರಿಸಿದ್ದಾರೆ.

## ಪ್ರವಾದಿಗಳು ಮರಣಾಸನ್ನರಾಗಿರುವಾಗ ರೋಗ ಬಾಧಿತರಾಗುವುದಿಲ್ಲವೇ?

ವಿರೋಧಿಗಳು ಹೇಳುವ ಇನ್ನೊಂದು ಆಕ್ಷೇಪವೇನೆಂದರೆ, ಪ್ರವಾದಿಗಳು ತಮ್ಮ ಕೊನೆಗಾಲದಲ್ಲಿ ರೋಗಬಾಧಿತರಾಗುವುದಿಲ್ಲ. ಆದರೆ ವಾದವನ್ನು ಸಮರ್ಥಿಸುವ ಯಾವ ಪುರಾವೆಯೂ

ಹದೀಸುಗಳಿಂದಾಗಲೀ ಪವಿತ್ರ ಖುರ್‌ಆನ್‌ನಿಂದಾಗಲೀ ದೊರಕುವುದಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮರಣ ಕಾಲದಲ್ಲಿ ರೋಗ ಬಾಧಿತರಾಗಿದ್ದರೆಂಬುದನ್ನು ಅಹ್ಮದಿಯಾ ಜಮಾಅತಿನ ವಿರೋಧಿಗಳು ಮರೆತುಬಿಡುತ್ತಾರೆ.

ಹಝ್ರತ್ ಆಯಿಶ[ರ] ಹೇಳುತ್ತಾರೆ: **ಮಾ ರಐತು ಅಹದನ್ ಅಶದ್ದ ಅಲೈಹಿಲ್ ವಜಉ ಮಿನ್ ರಸೂಲಿಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್** – **"**ಅಲ್ಲಾಹನ ಸಂದೇಶವಾಹಕರಿಗಿಂತ ಮಿಗಿಲಾಗಿ ರೋಗಬಾಧಿತರಾಗಿ ನಾನು ಬೇರೆ ಯಾರನ್ನೂ ಕಾಣಲಿಲ್ಲ." (ಸಹೀಹ್ ಬುಖಾರಿ ಸಂಪುಟ 7, ಪುಸ್ತಕ 70, ಹದೀಸ್ 549).

ಅಬ್ದುಲ್ಲಾ[ರ] ವರದಿ ಮಾಡುತ್ತಾರೆ: **ಅತಯ್‌ತುನ್ನಬಿಯ್ಯ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಫೀ ಮರಝಿಹಿ ವ ಹುವ ಯೂಅಕು ವಅ್‌ಕನ್ ಶದೀದನ್ ವ ಖುಲ್‌ತು ಇನ್ನಕ ಲತೂಅಕು ವಅ್‌ಕನ್ ಶದೀದ. ಖುಲ್‌ತು ಇನ್ನ ಧಾಕ ಬಿಅನ್ನ ಲಕ ಅಜ್‌ರೈನಿ. ಖಾಲ ಅಜಲ್ ಮೂಮಿನ್ ಮುಸ್‌ಲಿಮಿನ್ ಯುಸೀಬುಹು ಅಧನ್ ಇಲ್ಲಾ ಹಾತ್ತಲ್ಲಾಹು ಅನ್‌ಹು ಖತಾಯಾಹು ಕಮಾ ತಹಾತ್ತು ವರಖು ಶ್ಶಜರ್.**

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗಬಾಧಿತರಾಗಿದ್ದಾಗ ನಾನು ಅವರನ್ನು ಸಂದರ್ಶಿಸಿದೆ. ಆಗ ಅವರು ಕಠಿಣವಾದ ಜ್ವರದಿಂದ ಬಾಧಿತರಾಗಿದ್ದರು. ನಾನು ಹೇಳಿದೆ: ತಮಗೆ ಕಠಿಣ ಜ್ವರವಿದೆ. ತಮಗೆ ದುಪ್ಪಟ್ಟು ಪ್ರತಿಫಲ ಸಿಗುವ ಕಾರಣದಿಂದ ಹೀಗಾಗಿದೆಯೇ? ಹಝ್ರತ್ ಪೈಗಂಬರ್[ಸ] ಹೇಳಿದರು: ಮುಸ್ಲಿಮನಿಗೆ ಯಾವುದೇ ಹಾನಿ ಸಂಭವಿಸುವಾಗ ಮರದಿಂದ ಎಲೆಗಳು ಉದುರಿ ಬೀಳುವ ರೀತಿಯಲ್ಲಿ ಅಲ್ಲಾಹನು ಅವನ ಪಾಪಗಳನ್ನು ದೂರೀಕರಿಸುತ್ತಾನೆ." (ಸಹೀಹ್ ಬುಖಾರಿ ಸಂಪುಟ 7, ಪುಸ್ತಕ 70, ಹದೀಸ್ 550).

ನಮ್ಮ ಪ್ರಿಯ ಪೈಗಂಬರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕೊನೆಯ ದಿನಗಳು ರೋಗಬಾಧಿತರಾಗಿದ್ದರು. ಇದು ಅವರು ಸತ್ಯಸಂಧರಾದ ಪೈಗಂಬರ್ ಆಗಿದ್ದಾರೆಂಬುದಕ್ಕೆ ವಿರುದ್ಧವಾದುದೇನೂ ಅಲ್ಲ. ಅವರು ಸಕಲ ಪ್ರವಾದಿಗಳಲ್ಲಿ ಅಗ್ರಗಣ್ಯರಾಗಿದ್ದರು. ಎಲ್ಲ ಪ್ರವಾದಿಗಳು ಅಲ್ಲಾಹನ ನಿಯಮಕ್ಕೆ ಒಳಗಾದವರಾಗಿದ್ದಾರೆ. ಮುದಿಪ್ರಾಯದಲ್ಲಿ ರೋಗಪೀಡಿತರಾಗುವುದು ಸಾಮಾನ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಸಿಗೆಯಲ್ಲಿ ಮಲಗಿರುವಾಗ ಮೃತರಾದರು. ಅವರಿಗೆ ಮಧ್ಯ ರಾತ್ರಿ ಕಳೆದ ನಂತರ 1:00 ಗಂಟೆಗೆ ಕೊನೆಯ ಸಾರಿ ಭೇದಿ ಆಯಿತು. ಅವರು ಸುಬ್‌ಹ್ ನಮಾಝ್ ಸಮಯದಲ್ಲಿ ಎಚ್ಚರಗೊಂಡು ತಯಮ್ಮುಮ್ ಮಾಡಿ ಸುಬ್‌ಹ್ ನಮಾಝ್ ಮಾಡಲು ಪ್ರಯತ್ನಿಸಿದರು. ಅನಂತರ ಪ್ರಜ್ಞಾಶೂನ್ಯರಾದ ಅವರು ಬೆಳಗ್ಗೆ 10:30ರ ಸಮಯದಲ್ಲಿ ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

♦

**ಕವನ**

## ಖುರ್‌ಆನಿನ ಮಹತ್ವ

*** ಕೆ.ಎಂ. ಉಮರ್ ಮಡಿಕೇರಿ**

ಮಾನವ ವಂಶಕೆ ಮಾನವೀಯತೆಯನು ತೋರಿಸಿಕೊಟ್ಟಿದೆ ಈ ಖುರ್‌ಆನ್
ಮಾನವರೆಲ್ಲರೂ ಸಮಾನರೆಂಬ ಮಾರ್ಗವ ತೋರಿದೆ ಈ ಖುರ್‌ಆನ್.

ದೇವನ ಸಂದೇಶವಾಹಕರನ್ನು ನಂಬಿರಿ ಎಂದಿದೆ ಈ ಖುರ್‌ಆನ್
ಖಾತಮುನ್ನಬಿಯರ ಶ್ರೇಷ್ಠತೆಯನ್ನು ತೋರಿಸಿಕೊಟ್ಟಿದೆ ಈ ಖುರ್‌ಆನ್.

ನಬಿಯರು ಬಾರದ ಜನಾಂಗವಿಲ್ಲ ಸತ್ಯವ ಸಾರಿದೆ ಈ ಖುರ್‌ಆನ್
ನಬಿ ನಾಯಕರಿಗೆ ಅವತೀರ್ಣವಾಯಿತು ದೇವನ ಭಾಗದಿಂದೀ ಖುರ್‌ಆನ್.

ಪವಿತ್ರ ಖುರ್‌ಆನ್ ತೋರಿದೆ ನಮಗೆ ಬುವಿಯಲಿ ಬಾಳುವ ರೀತಿಯನು
ಪಠಿಸಿರಿ ನಿತ್ಯವು ಅರ್ಥವನರಿತು ಪವಿತ್ರ ಖುರ್‌ಆನ್ ಜ್ಞಾನವನು.

ಇಖ್‌ರಾಅ್ ಬಿಸ್ಮಿ ಎಂಬ ವಚನದಿ ಪ್ರಾರಂಭಗೊಂಡಿರೊ ಈ ಖುರ್‌ಆನ್
ಬಖರಃ ಸೂರ ವತ್ತಖು ಎಂಬ ವಚನದಿ ಕೊನೆಯ ಕಾಣುತಿದೆ.

ಧಾಲಿಕಲ್ ಕಿತಾಬಿದು ಎಂದು ಸಾರಿದೆ ಗ್ರಂಥದ ಮೊದಲ ನುಡಿ
ದಾನವ ಮಾಡಿದೆ ಮಾನವ ಕುಲಕ್ಕೆ ಒಳಿತಿನ ಮರದ ನೆರಳಿನಡಿ.

ಹೀರಾ, ಮುತ್ತು ರತ್ನವ ತುಂಬಿಸಿ ಕೊನೆಗೊಂಡಿದೆ, ವನ್ನಾಸಿನಲಿ
ಹಿತಕರ ಗ್ರಂಥದಿ ಆರಿಸಿಕೊಳ್ಳಿರಿ ಮಾನವರೆಲ್ಲರೂ ಬೇಗದಲಿ.

ದೇವನು ನುಡಿದನು ನಾನೆ ನಿಮಗೀ ಗ್ರಂಥವ ದಾನ ಮಾಡಿದೆನು
ದೇವನು ಇದರ ಸಂರಕ್ಷಣೆಯನು ಶಾಶ್ವತ ಸ್ವತವೆ ವಹಿಸಿದನು.

ಅಲ್ಲಾಹು ನುಡಿದನು ಖುರ್‌ಆನ್ ಗ್ರಂಥವ ವಿರೋಧಿಸುತ್ತಿರುವ ಜನರಲ್ಲಿ
ಆರಿಸಿ ತನ್ನಿರಿ ಖುರ್‌ಆನಿನಂತಹ ಸೂಕ್ತವನೊಂದು ಬೇಗದಲಿ.

ಸತ್ಯವಿಶ್ವಾಸಿಗೆ ಖಿಲಾಫತೆಂಬ ಅನುಗ್ರಹ ಜಾರಿ ಮಾಡುತಲಿ
ಸಾರಿದೆ ಖುರ್‌ಆನ್ ಸೂರತುನ್ನೂರಿನ ವಅದಲ್ಲಾಹು ಸೂಕ್ತದಲಿ.

# ಧರ್ಮದ ಪುನಶ್ಚೇತನ ಸಿದ್ಧಾಂತ

**ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫರ ಭಾಷಣ.**

ಧರ್ಮಗಳ ಪುನಶ್ಚೇತನದ ಇಸ್ಲಾಮಿಕ ಸಿದ್ಧಾಂತದ ಬಗ್ಗೆ ನಿಮ್ಮೊಂದಿಗೆ ನಾನು ಮಾತನಾಡಲು ಬಯಸುತ್ತೇನೆ. ಧರ್ಮಗಳು ಪುನಶ್ಚೇತನಗೊಳ್ಳುತ್ತಾ ಇದ್ದುದು ದೇವನಿಂದ ನೇಮಿಸಲ್ಪಟ್ಟವರ ಮೂಲಕವಾಗಿದೆ. ಸರ್ವಶಕ್ತನಾದ ಅಲ್ಲಾಹನು ಸುಧಾರಕರನ್ನು ಕಳುಹಿಸಿ ಜನರನ್ನು ಲೌಕಿಕ ಅಭಿಲಾಷೆಗಳಿಂದ ತಿರುಗಿಸಿ ಅವರನ್ನು ತಮ್ಮ ಸೃಷ್ಟಿಕರ್ತನ ಕಡೆಗೆ ಮರಳುವಂತೆ ಮಾಡುತ್ತಾನೆ. ಹಾಗೆ ಆಗಮಿಸಿದ ಸುಧಾರಕರು ಅನಿವಾರ್ಯವಾಗಿ ಧಾರಾಳ ತ್ಯಾಗ ಬಲಿದಾನಗಳನ್ನು ಮಾಡಲು ದೇವನಾಮದಲ್ಲಿ ಜನರಿಗೆ ಕರೆ ನೀಡುತ್ತಾರೆ. ದುಡಿಯಲು, ಬೆವರು ಸುರಿಸಲು, ಸಹನೆದೋರಲು. ನಿಷ್ಠೆಯಿಂದ ಕಾರ್ಯ ಪ್ರವೃತ್ತರಾಗಲು ಕರೆ ನೀಡಿ, ಜೀವಿಸಲು ಬಯಸುವವರು ಜೀವತ್ಯಾಗ ಮಾಡಲು ಸಹ ಸಿದ್ಧರಾಗಬೇಕೆಂದು ಸುಧಾರಕರು ಜನರಿಗೆ ಆಮಂತ್ರಣ ನೀಡುತ್ತಾರೆ. ಯಾರನ್ನು ಪ್ರೀತಿಸಲಾಗುತ್ತದೆಯೋ ಮತ್ತು ಯಾರನ್ನು ರಕ್ಷಿಸಲು ಪ್ರಯತ್ನಮಾಡಲಾಗುತ್ತಿದೆಯೋ ಅಂತಹ ಜನರ ಅಂಧ ವಿರೋಧ ಮತ್ತು ಹಿಂಸಾಚಾರವನ್ನು ಎದುರಿಸಿ ದೀರ್ಘ ಮತ್ತು ನೋವು ಭರಿತ ಹೋರಾಟ ನಡೆಸಲು ತನ್ನ ಅನುಯಾಯಿಗಳನ್ನು ಸುಧಾರಕರು ಸಿದ್ಧರನ್ನಾಗಿ ಮಾಡುತ್ತಾರೆ. ಧಾರ್ಮಿಕ ಪುನಶ್ಚೇತನದ ಶಾಶ್ವತ ಸಿದ್ಧಾಂತ ಇದು ಮಾತ್ರವಾಗಿದೆ. ಇದಕ್ಕೆ ವಿರುದ್ಧವಾದ ಸಿದ್ಧಾಂತಗಳು ಕೇವಲ ವಿಚಿತ್ರ ಕಲ್ಪನೆಗಳು ಮಾತ್ರವಾಗಿವೆ.

ಈ ವಿಷಯಕ್ಕೆ ಸಂಬಂಧಿಸಿ ಮುಸ್ಲಿಮರ ಎಲ್ಲ ಪಂಗಡಗಳು ಒಮ್ಮತಾಭಿಪ್ರಾಯವನ್ನು ಹೊಂದಿಲ್ಲ ಎಂದು ನಾನು ಹೇಳಲು ಬಯಸುತ್ತೇನೆ. ಧಾರ್ಮಿಕ ಪುನಶ್ಚೇತನದ ಪ್ರಕ್ರಿಯೆಯಲ್ಲಿ ಮೂಲಭೂತ ಬದಲಾವಣೆ ಸಂಭವಿಸಿದೆ ಎಂದು ಬಹುಸಂಖ್ಯಾತರಾದ ಮುಸ್ಲಿಮರು ನಂಬುತ್ತಾರೆ. ಆದರೆ ಈ ಚಾರಿತ್ರಿಕ ಪ್ರಕ್ರಿಯೆ ಜಾರಿಯಲ್ಲಿದೆಯೆಂದೂ ಬದಲಾವಣೆ ಹೊಂದಿಲ್ಲವೆಂದೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಂಬುತ್ತದೆ. ಮುಸ್ಲಿಮ್ ಪಂಗಡಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳಿಂದ ತಪ್ಪು ಗ್ರಹಿಕೆಗಳು ಉಂಟಾಗದಿರಲಿಕ್ಕೋಸ್ಕರವಾಗಿ ಎಲ್ಲ ಮುಸ್ಲಿಮ್ ಪಂಗಡಗಳು ಒಮ್ಮತ ಹೊಂದಿರುವ ಮೂಲಭೂತ ಇಸ್ಲಾಮೀ ವಿಶ್ವಾಸಗಳು ಯಾವುವು ಎಂದು ವಿವರಿಸುವುದು ಅವಶ್ಯಕವೆಂದು ಗಣಿಸುತ್ತೇನೆ. ಮುಸ್ಲಿಮರು ಯಾವ ಪಂಗಡಕ್ಕೆ ಸೇರಿದವರಾಗಿದ್ದರೂ ಈ ವಿಶ್ವಾಸಗಳು ಅವರನ್ನು ಒಗ್ಗೂಡಿಸುತ್ತವೆ.

ಯಾವ ಪಂಗಡಕ್ಕೆ ಸೇರಿದವನಾಗಿದ್ದರೂ ಪ್ರತಿಯೊಬ್ಬ ಮುಸ್ಲಿಮನು ದೇವನ ಏಕತ್ವ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರವಾದಿತ್ವವನ್ನು ನಂಬುತ್ತಾನೆ. ಇಸ್ಲಾಮ್ ಮಾನವರ ಮೋಕ್ಷಕ್ಕೋಸ್ಕರ ಅವತೀರ್ಣವಾದ ಅಂತಿಮ ಧರ್ಮವೆಂದು ಪ್ರತಿಯೊಬ್ಬ ಮುಸ್ಲಿಮನು ನಂಬುತ್ತಾನೆ. ಇಸ್ಲಾಮ್ ಮಾನವರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ನ್ಯಾಯ ವಿಚಾರಣೆಯ ದಿನದ ತನಕ ಈಡೇರಿಸುವುದೆಂದು ಪ್ರತಿಯೊಬ್ಬ ಮುಸ್ಲಿಮನು ನಂಬುತ್ತಾನೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣವಾದ ನಿಯಮ ಸಂಹಿತೆ (ಶರೀಅತ್) ಬದಲಾವಣೆಗೊಳಿಸಲು ಸಾಧ್ಯವಿಲ್ಲದುದೂ ಪವಿತ್ರ ಖುರ್‌ಆನ್ ಒಂದಿಷ್ಟು ಬದಲಾವಣೆಗೆ ಪಾತ್ರವಾಗದುದೂ ಒಂದಿಷ್ಟು ಬದಲಾವಣೆ ಹೊಂದಲು ಸಾಧ್ಯವಿಲ್ಲದುದೂ ಆಗಿದೆ ಎಂದು ಪ್ರತಿಯೊಬ್ಬ ಮುಸ್ಲಿಮನು ನಂಬುತ್ತಾನೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆದೇಶಗಳು ಲೋಕಾಂತ್ಯದ ತನಕ ಅಧಿಕೃತವಾಗಿ ಅಂಗೀಕರಿಸಲ್ಪಡುವುದೆಂದು ಮುಸ್ಲಿಮರ ಎಲ್ಲ ವಿಭಾಗದವರು ನಂಬುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ ಸಂಬಂಧ ಸ್ಥಾಪಿಸುವ ಮೂಲಕವೇ ಶಾಶ್ವತ ಸತ್ಯದ ಪ್ರಕಾಶವು ಗೋಚರವಾಗುವುದೆಂದು ಎಲ್ಲ ಪಂಗಡಗಳ ಮುಸ್ಲಿಮರು ನಂಬುತ್ತಾರೆ. ಎಲ್ಲ ಮುಸ್ಲಿಮರು ಯಾವುದೇ ಅಪವಾದವಿಲ್ಲದೆ ಈ ಎಲ್ಲ ಮೂಲಭೂತ ವಿಶ್ವಾಸಗಳನ್ನು ಅಂಗೀಕರಿಸುತ್ತಾರೆ.

ಮೇಲೆ ವಿವರಿಸಿದ ವಿಶ್ವಾಸಗಳನ್ನು ಎಲ್ಲ ಪಂಗಡಗಳು ಸಮಾನವಾಗಿ ಹೊಂದಿರುವರಾದರೂ ಒಂದು ಮೂಲಭೂತ ವಿಶ್ವಾಸದ ಬಗ್ಗೆ ವ್ಯತ್ಯಾಸವು ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಅನ್ಯ ಮುಸ್ಲಿಮರಿಂದ ಬೇರೆಯಾಗಿ ಇರಿಸುತ್ತದೆ. ಅದು ಇಸ್ಲಾಮ್ ಧರ್ಮದ ಪುನಶ್ಚೇತನದ ವಿಶ್ವಾಸದ ಬಗ್ಗೆ ಇರುವ ಭಿನ್ನಾಭಿಪ್ರಾಯವಾಗಿದೆ. ಇತರ ಎಲ್ಲ ಭಿನ್ನಾಭಿಪ್ರಾಯಗಳು ಈ ಮುಖ್ಯ ವಿಷಯದಿಂದ ಹೊರಹೊಮ್ಮುತ್ತವೆ.

ಇಸ್ಲಾಮ್ ಪುನಶ್ಚೇತನಗೊಳ್ಳುವುದು ಹೇಗೆ? ಹೊಸ ಶಕ್ತಿಯನ್ನು ಅದರೊಳಗೆ ತುಂಬುವುದು ಹೇಗೆ? ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಹಾಗೆಯೇ ಇತರ ಎಲ್ಲ ಮುಸ್ಲಿಮರು ಇದಕ್ಕೆ ಉತ್ತರ ವಾಗ್ದತ್ತ ಇಮಾಮ್ ಮಹ್‌ದಿ (ಅಲ್ಲಾಹನಿಂದ ಮಾರ್ಗದರ್ಶನ ಪಡೆಯುವ ಸುಧಾರಕ)ಯವರ ಆಗಮನದಲ್ಲಿದೆ ಎಂದು ನಂಬುತ್ತಾರೆ. ಮೇಲಿಂದ ಮೇಲೆ ಕಾಣುವ ಈ ಏಕಾಭಿಪ್ರಾಯವನ್ನು ವ್ಯಾಖ್ಯಾನಿಸುವಾಗ ಪೂರ್ಣವಾಗಿ ವಿರುದ್ಧವಾಗಿರುವ ಎರಡು ಅಭಿಪ್ರಾಯಗಳನ್ನು ಉಂಟುಮಾಡುತ್ತವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ವಾಗ್ದತ್ತ ಮರ್‌ಯಮ್ ಪುತ್ರ ಈಸಾರ ಆಗಮನ ಒಂದು ಉಪಮೆ ಎಂದು ನಂಬುತ್ತದೆ. ಅದೇ ರೀತಿ ಇಮಾಮ್ ಮಹ್‌ದಿಯ ಆಗಮನದ ಬಗ್ಗೆ ಭವಿಷ್ಯವಾಣಿಯು ಆಲಂಕಾರಿಕವಾಗಿದೆ ಎಂದು ನಂಬುತ್ತದೆ. ಈ ಭವಿಷ್ಯವಾಣಿಗಳ ವೈಭವಶಾಲಿ ಮಹತ್ವ ಅಕ್ಷರಾರ್ಥದಲ್ಲಿ ತೆಗೆದುಕೊಂಡರೆ ಮನವರಿಕೆಯಾಗದು ಎಂದು ನಾವು ನಂಬುತ್ತೇವೆ. ಇದಕ್ಕೆದುರಾಗಿ ಅನ್ಯ ಮುಸ್ಲಿಮ್ ಪಂಗಡಗಳು ಈ ಭವಿಷ್ಯವಾಣಿ ಅಕ್ಷರಾರ್ಥದಲ್ಲಿ ಈಡೇರಬೇಕೆಂದು ಆಗ್ರಹಪಡಿಸುತ್ತವೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಇತರ ಮುಸ್ಲಿಮರ ಮಧ್ಯೆ ಇರುವ ವ್ಯತ್ಯಾಸವು ಇದೇ ವಿಶ್ವಾಸದ ಬಗ್ಗೆಯಾಗಿದೆ.

## ಭವಿಷ್ಯವಾಣಿಗಳ ಹಿನ್ನೆಲೆ

ಈಗಿನ ಕಾಲದ ಮುಸ್ಲಿಮರ ಅವನತಿ ಮತ್ತು ಮುಸ್ಲಿಮ್ ಪಂಗಡಗಳ ಪರಸ್ಪರ ವಿನಾಶಕರ ಸಂಘರ್ಷಗಳ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅಲ್ಲಾಹನು ಮೊದಲೇ ತಿಳಿಸದೆ

ಇರಲಿಲ್ಲ. ಹದಿನಾಲ್ಕು ನೂರು ವರ್ಷಗಳ ಹಿಂದೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅಲ್ಲಾಹನಿಂದ ಪಡೆದ ಸಂದೇಶವಾಣಿಯ ಪ್ರಕಾರ ಮುಸ್ಲಿಮರು ಎಪ್ಪತ್ತೆರಡು ಪಂಗಡಗಳಾಗಿ ವಿಭಜಿಸಲ್ಪಡುವರೆಂದು ಭವಿಷ್ಯ ನುಡಿದಿದ್ದರು. ಅವರು ಮುಸ್ಲಿಮರ ಈಗಿನ ದಯನೀಯ ಸ್ಥಿತಿಯನ್ನು ಹೇಗೆ ವಿವರಿಸಿರುವರೆಂದರೆ, ಈ ಕಾಲದ ದೃಶ್ಯವು ಅವರಿಗೆ ತೋರಿಸಲ್ಪಟ್ಟಂತೆ ತೋಚುತ್ತದೆ. ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದ್ದರು:

"ಇಸ್ಲಾಮಿನ ಹೆಸರಿನ ಹೊರತು ಇನ್ನೇನೂ ಬಾಕಿಯಾಗಿ ಉಳಿಯದು. ಮಸ್‌ಜಿದ್‌ಗಳು ಜನರಿಂದ ತುಂಬಿದ್ದರೂ ಮಾರ್ಗದರ್ಶನರಹಿತವಾಗಿರುವುವು. ಅವರ ಧಾರ್ಮಿಕ ಪಂಡಿತರು ಆಕಾಶದ ಕೆಳಗೆ ಅತ್ಯಂತ ನೀಚರಾಗುವರು."

ಈ ಮುನ್ನೆಚ್ಚರಿಕೆಗಳೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಶುಭವಾರ್ತೆಗಳನ್ನು ನೀಡಿದ್ದರು. ಮುಸ್ಲಿಮ್ ಸಮುದಾಯ ನಾಶವಾಗಲಾರದೆಂದು ಅವರು ಹೇಳಿದರು.

**ಕೈಫ ತಹ್‌ಲಕು ಉಮ್ಮತುನ್ ಅನ ಅವ್ವಲುಹಾ ವ ಈಸಬ್ನುಮರ್‌ಯಮ ಆಖಿರುಹಾ.**

''ನಾನು ಆದಿಯಲ್ಲಿಯೂ ಈಸಬ್ನು ಮರ್‌ಯಮ್ ಅಂತ್ಯದಲ್ಲಿಯೂ ಇರುವ ಸಮುದಾಯ ಹೇಗೆ ತಾನೆ ನಾಶವಾಗಬಲ್ಲುದು?" (ಮುಸ್‌ನದ್ ಅಹ್ಮದ್, ಕನ್‌ಝುಲ್ ಉಮ್ಮಾಲ್ ಸಂಪುಟ 7 ಪುಟ 203)

ಇನ್ನೊಂದು ಹದೀಸ್ ಹೀಗಿದೆ:

**ಕೈಫ ಅನ್‌ತುಮ್ ಇಧಾ ನಝುಲಬ್ನುಮರ್‌ಯಮ ಫೀಕುಮ್ ವ ಇಮಾಮುಕುಮ್ ಮಿನ್‌ಕುಮ್.**

"(ಎಲೈ ಮುಸ್ಲಿಮರೇ,) ಇಬ್ನು ಮರ್‌ಯಮ್ ನಿಮ್ಮ ಪೈಕಿ ನಿಮಗೆ ಇಮಾಮ್ ಆಗಿ ನಿಮ್ಮ ಮಧ್ಯೆ ಅವತರಿಸುವಾಗ ನಿಮ್ಮ ಸ್ಥಿತಿ ಹೇಗಿರುವುದು?" (ಬುಖಾರಿ)

ಹಝ್ರತ್ ಪೈಗಂಬರರು(ಸ) ಪುನರಾವರ್ತಿಸಿ ಹೀಗೆ ಹೇಳಿದರು: **ವಲ್ಲಧೀ ನಫ್‌ಸೀ ಬಿಯದಿಹೀ ಲಯೂಶಿಕುನ್ನ ಅನ್ ಯುನಝ್ಝಿಲ ಫೀಕುಮ್ ಇಬ್ನು ಮರ್‌ಯಮ ಹಕಮನ್ ಅದಲನ್.**

"ಯಾರ ಕೈಯಲ್ಲಿ ನನ್ನ ಪ್ರಾಣ ಇದೆಯೋ, ಅವನ ಪ್ರಮಾಣ ಮಾಡಿ ಹೇಳುತ್ತೇನೆ: ನಿಶ್ಚಯವಾಗಿಯೂ ನಿಮ್ಮಲ್ಲಿ ಇಬ್ನು ಮರ್‌ಯಮ್ ಅವತರಿಸುವರು. ಅವರು ಹಕಮ್ ಮತ್ತು ಅದ್‌ಲ್ (ನೀತಿಪಾಲಕನಾದ ನ್ಯಾಯಾಧೀಶ) ಆಗಿ ನಿಮ್ಮ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಗೊಳಿಸುವರು." (ಬುಖಾರಿ)

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಇಮಾಮ್ ಮಹ್‌ದಿ ಆಗಮಿಸುವರೆಂದು ಸಹ ಭವಿಷ್ಯ ನುಡಿದಿರುವರು.

ಇಸ್ಲಾಮಿನ ಪುನಶ್ಚೇತನ ಮತ್ತು ಅದರ ಜಾಗತಿಕ ವಿಜಯವು ಈಸಬ್ನು ಮರ್‌ಯಮರ ಮತ್ತು ಇಮಾಮ್ ಮಹ್‌ದಿಯ ಆಗಮನದೊಂದಿಗೆ ಜೋಡಿಸಲ್ಪಟ್ಟಿದೆ ಎಂದು ಇತರ ಮುಸ್ಲಿಮ್ ಪಂಗಡಗಳ ಹಾಗೆ ಅಹ್ಮದಿಯಾ ಜಮಾಅತ್ ಸಹ ನಂಬುತ್ತದೆ. ಆದರೆ ಈ ಭವಿಷ್ಯವಾಣಿಗಳನ್ನು ವ್ಯಾಖ್ಯಾನಿಸುವುದರಲ್ಲಿ ಅಹ್ಮದಿಯಾ ಜಮಾಅತ್ ಇತರ ಮುಸ್ಲಿಮ್ ಪಂಗಡಗಳೊಂದಿಗೆ ಭಿನ್ನಾಭಿಪ್ರಾಯವನ್ನು ಹೊಂದಿದೆ. ಈ ಭವಿಷ್ಯವಾಣಿಗಳನ್ನು ಹಿಂದಿನ ಕಾಲದ ಪ್ರವಾದಿಗಳ ಕಾಲದಲ್ಲಿ ಕಾರ್ಯಪ್ರವೃತ್ತವಾದ ದೇವನಿಯಮಗಳಿಗೆ ಅನುಸಾರವಾಗಿ ವ್ಯಾಖ್ಯಾನಿಸಬೇಕೆಂದು ಅಹ್ಮದಿಯಾ ಜಮಾಅತ್ ಆಗ್ರಹಪಡಿಸುತ್ತದೆ. ಇತರ ಮುಸ್ಲಿಮ್ ಪಂಗಡಗಳು ಈ ಭವಿಷ್ಯವಾಣಿಗಳಲ್ಲಿ ಯಾವುದೇ ಆಂತರಿಕ ಅರ್ಥಗಳಿಲ್ಲ, ಸಂದೇಶಗಳಿಲ್ಲವೆಂದೂ ಅವುಗಳನ್ನು ಅಕ್ಷರಾರ್ಥದಲ್ಲೇ ಪರಿಗಣಿಸಬೇಕೆಂದೂ ಒತ್ತಿ ಹೇಳುತ್ತದೆ.

## ಅಹ್ಮದಿಯೇತರ ಮುಸ್ಲಿಮರ ನಂಬಿಕೆ

ನಮ್ಮ ವಿರೋಧಿಗಳ ವಿಚಾರಗಳನ್ನು ಸತ್ಯನಿಷ್ಠವಾಗಿ ನಾನು ವಿವರಿಸುವೆನು. ಇಸ್ಲಾಮಿನ ಪುನಶ್ಚೇತನ ಎಂದರೆ ಆರ್ಥಿಕ ಮತ್ತು ರಾಜಕೀಯ ಅಧಿಕಾರ ಶಕ್ತಿ ಗಳಿಸುವಿಕೆ ಎಂದು ಅವರು ಭಾವಿಸುತ್ತಾರೆ. ಇದಕ್ಕೆ ಕಾರಣವೂ ಇದೆ. ಅಧಿಕಾರಕ್ಕೋಸ್ಕರ ವಿಪರೀತ ಹಂಬಲ ಮತ್ತು ಸಂಪತ್ತಿಗೋಸ್ಕರ ದುರಾಶೆ ಮನುಷ್ಯನ ಸಂಘರ್ಷಗಳನ್ನು ಪ್ರಭಾವಿಸಿವೆ. ಆದುದರಿಂದ ಜನಾಂಗೀಯ ಪುನಶ್ಚೇತನದ ಪರಾಕಾಷ್ಠೆ ಎಂದರೆ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯವಾಗಿದೆ. ಈ ಪರಿಣಾಮ ಉಂಟುಮಾಡಲು ದೇವನ ಅನುಗ್ರಹವು ಅನುಯೋಜ್ಯವಾಗಿ ಪ್ರಕಟವಾಗುವುದು. ಇಸ್ಲಾಮಿನ ಪುನಶ್ಚೇತನದ ಬಗ್ಗೆ ಅನೇಕರು ಹೊಂದಿರುವ ಅಭಿಪ್ರಾಯ ಆ ರೀತಿ ಇದೆ. ಈ ನಂಬಿಕೆಯ ಪ್ರಕಾರ ವಾಗ್ದತ್ತ ಮಸೀಹರ ಮೂಲಕ ರಾಜಕೀಯ ಜಯಗಳೂ ಮಹ್‌ದಿಯ ಮೂಲಕ ಆರ್ಥಿಕ ಶಕ್ತಿಯ ಮೇಧಾವಿತ್ವವೂ ಲಭಿಸುವುದು.

ಅಹ್ಮದಿಯೇತರ ಮುಸ್ಲಿಮರು ಈಸಾ ಮಸೀಹರ ಆಗಮನದ ಬಗ್ಗೆ ಹೊಂದಿರುವ ಕಲ್ಪನೆಯನ್ನು ನಾನು ಮೊದಲು ವಿವರಿಸುವೆನು. ಪವಿತ್ರ ಖುರ್‌ಆನ್ ಇಸ್ರಾಈಲ್ ಸಂತತಿಗೋಸ್ಕರ ನೇಮಿಸಲ್ಪಟ್ಟವರೆಂದು ಪ್ರಸ್ತಾಪಿಸಿದ ಮರ್‌ಯಮ್ ಪುತ್ರ ಈಸಾ ಆಕಾಶದಿಂದ ಇಳಿದುಬರುವರು; ಅವರು ಕೂಡಲೇ ಖಡ್ಗ ಹಿಡಿದು ಇಸ್ಲಾಮಿನ ಶತ್ರುಗಳನ್ನು ಕೊಂದುಹಾಕುವರು; ಅವರು ಲೋಕದಾದ್ಯಂತ ಸಂಚರಿಸಿ ಮೂರು ಕೆಲಸಗಳನ್ನು ಮಾಡುವರು. ಒಂದನೆಯದು, ಅವರು ಎಲ್ಲ ಶಿಲುಬೆಗಳನ್ನು ಮುರಿದು ಹಾಕುವರು. ಅವರು ಕ್ರೈಸ್ತ ಧರ್ಮದ ಈ ಚಿಹ್ನೆಯನ್ನು ಎಷ್ಟು ಶಕ್ತಿಯುತವಾಗಿ ನಾಶಮಾಡುವರೆಂದರೆ ಅದರ ಒಂದಿಷ್ಟು ಅಂಶ ಕೂಡ ಬಾಕಿಯಾಗಿ ಉಳಿಯದು. ಚರ್ಚ್‌ಗಳಲ್ಲಾಗಲಿ, ಮನೆಗಳಲ್ಲಾಗಲಿ ಯಾರದಾದರೂ ಕೊರಳುಗಳಲ್ಲಾಗಲಿ ಒಂದೇ ಒಂದು ಶಿಲುಬೆ ಬಾಕಿಯಾಗಿ ಉಳಿಯಲಾರದು.

ಅವರ ಅಭಿಪ್ರಾಯ ಪ್ರಕಾರ ಈಸಾ ಮಸೀಹರ ಎರಡನೆಯ ಕೆಲಸ ಹಂದಿಗಳನ್ನು ಕೊಲ್ಲುವುದಾಗಿದೆ. ನಾಡು ಹಂದಿಗಳು ಮತ್ತು ಕಾಡು ಹಂದಿಗಳು ನಾಶಗೊಳಿಸಲ್ಪಡುವುವು. ಹೀಗೆ ಕ್ರೈಸ್ತರಿಗೆ ಪ್ರಾರ್ಥನೆಗೆ ಶಿಲುಬೆಯಾಗಲಿ ತಿನ್ನಲು ಹಂದಿ ಮಾಂಸವಾಗಲಿ ದೊರಕದೆ ಹೋಗುವುದು. ಹೀಗೆ ಈಸಾ ಮಸೀಹರು ಕ್ರೈಸ್ತರನ್ನು ಆಧ್ಯಾತ್ಮಿಕ ಚಿಹ್ನೆಯಿಂದ ಮಾತ್ರವಲ್ಲ ಅವರ ಆಹಾರ ಪದಾರ್ಥದಿಂದಲೂ ವಂಚಿತರನ್ನಾಗಿ ಮಾಡುವರು.

ಈಸಾ ಮಸೀಹರ ಮೂರನೆಯ ಕೆಲಸ ದಜ್ಜಾಲನನ್ನು

ಕೊಲ್ಲುವುದಾಗಿದೆ. ದಜ್ಜಾಲನೆಂದರೆ ಯಾರು? ಹದೀಸುಗಳನ್ನು ಅಕ್ಷರಶಃ ತೆಗೆದುಕೊಳ್ಳುವುದಾದರೆ, ಅವನು ಒಕ್ಕಣ್ಣ ರಾಕ್ಷಸನಾಗಿರುವನು. ಅವನು ಅಸಾಧಾರಣ ದೇಹವನ್ನು ಹೊಂದಿದ ಕತ್ತೆಯ ಮೇಲೇರಿ ಬರುವನು. ಅವನು ಎಷ್ಟು ಎತ್ತರವಾಗಿರುವನೆಂದರೆ ಅವನು ನಿಂತರೆ ಅವನ ತಲೆ ಮೋಡಗಳಿಗಿಂತ ಮೇಲೆ ಇರುವುದು. ಎಲ್ಲ ಪ್ರವಾದಿಗಳು ಈ ದಜ್ಜಾಲನ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದರು. ದಜ್ಜಾಲನು ಭೂಮಿಯನ್ನು ನಾಶಮಾಡುತ್ತಾ ಇರುವಾಗ ಈಸಾ ಮಸೀಹ್ ಆಕಾಶದಿಂದ ಇಳಿದು ಬಂದು ಡಮಾಸ್ಕಸ್ ನಗರದ ಸಮೀಪ ಅವನೊಂದಿಗೆ ಹೋರಾಡಿ ಅವನನ್ನು ಕೊಲ್ಲುವರು. ಅನಂತರ ಈಸಾ ಮಸೀಹ್ ಲೋಕವನ್ನೆಲ್ಲ ಜಯಿಸಿ ಅದರ ಆಡಳಿತೆಯನ್ನು ಮುಸ್ಲಿಮರಿಗೆ ವಹಿಸಿಕೊಡುವರು.

ಇದು ಸಂಕ್ಷಿಪ್ತವಾಗಿ ಮುಸ್ಲಿಮರ ರಾಷ್ಟ್ರೀಯ ಏಳಿಗೆ ಮತ್ತು ಆಧಿಪತ್ಯದ ಸಿದ್ಧಾಂತವಾಗಿದೆ. ಮುಸ್ಲಿಮರು ಯಾವುದೇ ರೀತಿಯ ರಾಜಕೀಯ ಹೋರಾಟ ನಡೆಸುವುದನ್ನು ಅದು ಮುಕ್ತಗೊಳಿಸುತ್ತದೆ. ಯಾವುದೇ ಪ್ರಯತ್ನ ಮಾಡದೆ ತಾವು ಭೂಮಿಗೆ ವಾರಸುದಾರರಾಗುವೆವು ಎಂದು ಭ್ರಮಿಸುತ್ತಾ ಇರುವವರು ರಾಜಕೀಯ ಚಿಂತನ ಮತ್ತು ಅದಕ್ಕನುಸಾರವಾಗಿರುವ ಹೋರಾಟದ ಬಗ್ಗೆ ಪರಿವೆಯಿಲ್ಲದವರಾಗಿದ್ದಾರೆ. ಅವರು ತಮ್ಮ ನಾಶ ಮತ್ತು ಅಧಃಪತನದ ಬಗ್ಗೆ ಮರವೆ ಹೊಂದಿ ಸಂತೋಷದಲ್ಲಿದ್ದಾರೆ. ಏಕೆಂದರೆ ಅವರು ಬಹಳ ದೃಢವಾಗಿ ನಂಬುತ್ತಾ ಇದ್ದಾರೆ – ಒಬ್ಬ ದಿವ್ಯ ಮಹಾತ್ಮ ಆಕಾಶದಿಂದ ಇಳಿದು ಬಂದು ವಿಜಯಯಾತ್ರೆ ನಡೆಸುವರೆಂದು. ಅವರು ಶಿಲುಬೆಯನ್ನು ಮುರಿದು ಹಾಕುವರು. ಹಂದಿಯನ್ನು ಕೊಲ್ಲುವರು. ಅವರು ಪೂರ್ವ ಮತ್ತು ಪಶ್ಚಿಮದ ಪ್ರಬಲ ದೇಶಗಳನ್ನು ಜಯಿಸುವರು. ಅನಂತರ ಅಲ್ಲಿ ಕಾಯುತ್ತಾ ಇರುವ ಮುಸ್ಲಿಮರನ್ನು ಕರೆದು ಹೇಳುವರು: "ಇಲ್ಲಿಗೆ ಬನ್ನಿರಿ, ಎಲೈ ದೇವನ ಸೈನಿಕರೇ, ಇಲ್ಲಿಗೆ ಬನ್ನಿರಿ. ಎಲೈ ಸಾತ್ವಿಕರೇ, ಭೂಲೋಕದ ಸಾಮ್ರಾಜ್ಯದ ರಾಜದಂಡವನ್ನು ನೀವು ನನ್ನಿಂದ ತೆಗೆದುಕೊಳ್ಳಿರಿ." ಮುಸ್ಲಿಮರ ಪುನರುದಯದ ಈ ಯುದ್ಧಾಸಕ್ತ ನಿಲುವನ್ನು ಅಹ್ಮದೀ ಮುಸ್ಲಿಮರು ಅಸಹ್ಯಪಡುತ್ತಾರೆ. ಅವರು ಈ ಒರಟು ನಿಲುವನ್ನು ಅಂಗೀಕರಿಸಲಾರರು.

ಇಸ್ಲಾಮಿನ ಆರ್ಥಿಕ ಪುನಶ್ಚೇತನದ ಬಗ್ಗೆ ಅಹ್ಮದಿಯೇತರರ ನಿಲುವನ್ನು ಪರಿಶೀಲಿಸುವ. ಅವರ ಮತಪಂಡಿತರು ಹೇಳುವುದೇನೆಂದರೆ, ಮುಸ್ಲಿಮರ ಆರ್ಥಿಕ ದುರವಸ್ಥೆಗೆ ಪರಿಹಾರ ಕಠಿಣ ಪ್ರಯತ್ನ ಮತ್ತು ತ್ಯಾಗ–ಸಮರ್ಪಣೆ ಮೂಲಕ ಸಾಧಿಸಲು ಸಾಧ್ಯವಿಲ್ಲ. ಇಮಾಮ್ ಮಹ್‌ದಿಯ ಮೂಲಕವೇ ಅದು ಸಾಧ್ಯವಾಗುವುದು. ಇಮಾಮ್ ಮಹ್‌ದಿ, ಈಸಾ ಮಸೀಹರ ಸಮಕಾಲೀನರಾಗಿರುವರು. ಅವರು ಆಗಮಿಸಿದ ಕೂಡಲೇ ಲೋಕದ ಎಲ್ಲ ಮುಸ್ಲಿಮರಿಗೆ ಅಪರಿಮಿತ ಸಂಪತ್ತು ಹಂಚುವರು. ಅವರ ಐಶ್ವರ್ಯಕ್ಕೆ ಮಿತಿಯಿಲ್ಲ. ಅವರ ಔದಾರ್ಯ ವರ್ಣಿಸಲು ಅಸಾಧ್ಯವಾದುದಾಗಿರುವುದು. ಈ ಸಂಪತ್ತು ಮುಸ್ಲಿಮರು ಸಂಗ್ರಹಿಸಿಡಲು ಸಾಧ್ಯವಾಗುವುದಕ್ಕಿಂತ ಹೆಚ್ಚಾಗಿರುವುದು. ಆಗ ಸಾಮಾನು–ಸಾಮಗ್ರಿಗಳ ಬಗ್ಗೆ ಮತ್ತು ಸಂಪತ್ತಿನ ಬಗ್ಗೆ ದುರಾಶೆಯು ಇಲ್ಲದಾಗುವುದು. ಮಹ್‌ದಿಯ ಆಗಮನವೇ ಮುಸ್ಲಿಮ್ ಲೋಕದ ಆರ್ಥಿಕ ದುರವಸ್ಥೆಗಿರುವ ಪರಿಹಾರವಾಗಿದೆ. ಮುಸ್ಲಿಮರು ಯಾವುದೇ ರೀತಿಯಲ್ಲಿ ಬೆವರು ಸುರಿಸುವ, ಕಷ್ಟಪಡುವ ಮತ್ತು ದುಡಿಯುವ ಅವಶ್ಯಕತೆ ಇರುವುದಿಲ್ಲ. ಭೂಮಿಯ ರಹಸ್ಯ ನಿಕ್ಷೇಪಗಳನ್ನು ಪತ್ತೆಹಚ್ಚಲು ಪ್ರಯತ್ನಪಡುವ ಅವಶ್ಯಕತೆ ಇಲ್ಲ. ಅಣುರಹಸ್ಯಗಳನ್ನು ಕಂಡುಹಿಡಿಯುವ ಅಥವಾ ಖಗೋಳ ರಹಸ್ಯಗಳನ್ನು ಅರಿಯಲು ಪ್ರಯತ್ನಿಸುವ ಅಗತ್ಯವೂ ಇಲ್ಲ. ಶ್ರಮ–ಸಾಧನೆ, ಕೈಗಾರಿಕೆಗಳು, ಅವಿಷ್ಕಾರಗಳು ಮತ್ತು ಪ್ರಯೋಗಗಳು ಅವಶ್ಯಕವಾಗಿಲ್ಲ. ಅವಶ್ಯಕವಾಗಿರುವುದು ಇಮಾಮ್ ಮಹ್‌ದಿಯ ಆಗಮನವಾಗಿದೆ. ಅಹ್ಮದೀ ಮುಸ್ಲಿಮರಾದ ನಾವು ಈ ಭಾವನಾರೂಪವನ್ನು ಬಾಲಿಶವೆಂದೂ ಅಪಕ್ವವೆಂದೂ ಅಂಗೀಕಾರಾರ್ಹವಲ್ಲವೆಂದೂ ಗಣಿಸುತ್ತೇವೆ.

## ಭವಿಷ್ಯವಾಣಿಗಳ ಸರಿಯಾದ ವ್ಯಾಖ್ಯಾನ

ಮಸೀಹ್ ಮತ್ತು ಮಹ್‌ದಿಯ ಆಗಮನದ ಬಗ್ಗೆ ಇರುವ ಭವಿಷ್ಯವಾಣಿಗಳನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ತಿರಸ್ಕರಿಸುವುದಿಲ್ಲ. ಆದರೆ ಅವುಗಳ ಬಗ್ಗೆ ಅಕ್ಷರಶಃ ಅರ್ಥ ಹೇಳುವುದು ಅಜ್ಞಾನದ ಪರಮ ಸೀಮೆ ಎಂದು ಗಣಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಹೋನ್ನತ ಸ್ಥಾನವನ್ನು ಮತ್ತು ಅವರು ನೀಡಿದ ಆಳವಾದ ದಾರ್ಶನಿಕ ಸಂದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ಇಂತಹ ಗಂಭೀರ ತಪ್ಪುಗಳು ಸಂಭವಿಸಿವೆ. ಆಂತರಿಕ ದೃಷ್ಟಿಯುಳ್ಳ ಬುದ್ಧಿಶಾಲಿಗಳು ಬಹಳ ಸಾರಿ ಸಾಮ್ಯಕಥೆಗಳನ್ನು ಮತ್ತು ರೂಪಕ ನಿರೂಪಣೆಗಳನ್ನು ಮಹತ್ವಪೂರ್ಣ ವಿಷಯಗಳನ್ನು ನಿರೂಪಿಸಲು ಬಳಸುತ್ತಾರೆ. ಆದರೆ ಕೇವಲ ಬಾಹ್ಯ ದೃಷ್ಟಿ ಹೊಂದಿದವರು ಅವುಗಳ ನಿಜವಾದ ಅರ್ಥವನ್ನು ಗ್ರಹಿಸಲಾರರು.

ಅಹ್ಮದೀ ಮುಸ್ಲಿಮರು ನಂಬುವುದೇನೆಂದರೆ, ಮಸೀಹ್, ದಜ್ಜಾಲ್, ದಜ್ಜಾಲನ ಕತ್ತೆ ಮೊದಲಾದವುಗಳಿಗೆ ಸಂಬಂಧಿಸಿದ ವಿವರಣೆಗಳು ರೂಪಕಗಳಾಗಿವೆ. ಭವಿಷ್ಯವಾಣಿಯಲ್ಲಿ ಸೂಚಿಸಲ್ಪಟ್ಟ ಈಸಬ್ನು ಮರ್‌ಯಮ್ ಹಿಂದೆ ಇಸ್ರಾಯೇಲ್ ಜನತೆಗೆ ಆಗಮಿಸಿದ ಪ್ರವಾದಿಯಲ್ಲ. ಹಿಂದೆ ಆಗಮಿಸಿದ ಈಸಾ ಮಸೀಹ್ ಶಿಲುಬೆಯಲ್ಲಿ ಮೃತನಾಗದೆ ರಕ್ಷಿಸಲ್ಪಟ್ಟ ನಂತರ ದೀರ್ಘಕಾಲ ಜೀವಿಸಿ ಮೃತರಾದರೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ.

ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಮಸೀಹ್, ಮುಸ್ಲಿಮ್ ಸಮುದಾಯದಲ್ಲಿ ಜನಿಸುವ ವ್ಯಕ್ತಿಯೇ ಆಗಿದ್ದಾರೆ. ಈಸಾ ಮಸೀಹರ ಕೆಲವು ಗುಣಗಳನ್ನು ಅವರು ಸಹ ಹೊಂದಿರುವ ಕಾರಣ ಅವರನ್ನು ಈಸಬ್ನು ಮರ್‌ಯಮ್ ಎಂದು ಕರೆಯಲಾಗಿದೆ. ಒಬ್ಬ ಶ್ರೇಷ್ಠ ನಾಟಕಕರ್ತೃವನ್ನು ಶೇಕ್ಸ್‌ಪೀಯರ್ ಎಂದು ಕರೆಯುವ ಹಾಗೆ ಇದಾಗಿದೆ. ಶಿಲುಬೆ ಎಂದು ಹೇಳಿದುದು ಸಹ ಉಪಮೆ ರೂಪದಲ್ಲಾಗಿದೆ. ಆಗಮಿಸಲಿರುವ ವಾಗ್ದತ್ತ ಮಸೀಹ್ ಶಿಲುಬೆಗಳನ್ನು ಮುರಿದು ಹಾಕುತ್ತಾ ಅಲೆದಾಡಲಾರರು. ಅವರು ಬಲವತ್ತಾದ ಸಾಕ್ಷ್ಯಾಧಾರಗಳ ಮೂಲಕ ಕ್ರೈಸ್ತಧರ್ಮವನ್ನು ಸೋಲಿಸುವರು. ಶಿಲುಬೆಯನ್ನು ಮುರಿಯುವುದೆಂದರೆ ಕ್ರೈಸ್ತ ಧರ್ಮದ ತಾತ್ವಿಕ ಸೋಲಾಗಿದೆ. ಇದೇ ರೀತಿ ಹಂದಿ ಎಂದರೆ ಏನೆಂದು ಅರ್ಥಮಾಡಿಕೊಳ್ಳಬೇಕು. ಅದು ಪಶ್ಚಿಮದ ಸಾಂಸ್ಕೃತಿಕ ಕೊಳಕನ್ನು ಸೂಚಿಸುತ್ತದೆ. ಆ ಸಂಸ್ಕೃತಿ ಮನುಷ್ಯರನ್ನು ಕೊಳಕು ಮೃಗಗಳನ್ನಾಗಿ

ಮಾಡುತ್ತದೆ. ಯೂರೋಪ್ ಮತ್ತು ಅಮೇರಿಕದ ಲೈಂಗಿಕ ಅರಾಜಕತೆಯನ್ನು ಹಂದಿ ಶಬ್ದವು ಸೂಚಿಸುತ್ತದೆ. ಅದು ಅಸಹ್ಯ ಭೋಗಲಾಲಸೆಯನ್ನು ಸೂಚಿಸುತ್ತದೆ. ಮಕ್ಕಳು ಸಹ ಅದಕ್ಕೆ ಬಲಿಯಾಗುತ್ತಿದ್ದಾರೆ. ಸಾಕುಹಂದಿಗಳನ್ನೂ ಕಾಡುಹಂದಿಗಳನ್ನೂ ಮಸೀಹರು ಬೇಟೆಯಾಡಿ ಕೊಲ್ಲುವುದಾಗಿ ಹದೀಸುಗಳಲ್ಲಿ ಹೇಳಿಲ್ಲ. ಒಬ್ಬ ಪ್ರವಾದಿ ಅಕ್ಷರಶಃ ಹಾಗೆ ಮಾಡುವುದು ಅಸಂಭಾವ್ಯವಾಗಿದೆ. ನಮ್ಮ ವಿರೋಧಿಗಳ ನಂಬಿಕೆ ನಮ್ಮನ್ನು ಗ್ರೀಕ್ ಪುರಾಣ ಕಥೆಗಳ ಅಜಾಕ್ಸ್ ಎಂಬ ಶೂರನ ಬಗ್ಗೆ ನೆನಪಿಸುವಂತೆ ಮಾಡುತ್ತದೆ. ಅವನು ಪಶುಗಳ ಹಿಂಡನ್ನೂ ಕುರಿಮಂದೆಯನ್ನೂ ಅವು ಸೈನ್ಯಾಧಿಪತಿಗಳೆಂಬ ಹುಚ್ಚು ನಂಬಿಕೆಯಿಂದ ತುಂಡು ತುಂಡಾಗಿ ಕತ್ತರಿಸಿದ್ದನು.

ಮಸೀಹ್, ಶಿಲುಬೆ ಮತ್ತು ಹಂದಿ ಪದಗಳನ್ನು ಬಳಸಿದ ಹಾಗೆ ದಜ್ಜಾಲನೆಂಬ ಪದವನ್ನು ಸಾಂಕೇತಿಕ ರೂಪದಲ್ಲಿ ಬಳಸಲಾಗಿದೆ. ದಜ್ಜಾಲನೆಂದರೆ ಶಕ್ತಿಶಾಲಿ ಜನಾಂಗವಾಗಿದೆ. ಅದು ಭೂಮಿಯಲ್ಲೂ ಆಕಾಶದಲ್ಲೂ ಆಳುತ್ತಾ ಇದೆ. ಶಿಲುಬೆ ಮತ್ತು ಹಂದಿ ಈ ಜನಾಂಗವನ್ನು ಸೂಚಿಸುವ ಸಂಜ್ಞೆಗಳಾಗಿವೆ. ಹದೀಸುಗಳ ಪ್ರಕಾರ ದಜ್ಜಾಲನ ಬಲಗಣ್ಣು ಕುರುಡಾಗಿರುವುದು ಮತ್ತು ಅವನ ಎಡಗಣ್ಣು ದೊಡ್ಡದಾಗಿ ಪ್ರಕಾಶಮಾನವಾಗಿರುವುದು. ಇದು ಈ ಜನಾಂಗ ಆಧ್ಯಾತ್ಮಿಕ ಪ್ರಕಾಶವನ್ನು ಹೊಂದಿರಲಿಕ್ಕಿಲ್ಲವೆಂದೂ ಅದರ ಲೌಕಿಕ ದೃಷ್ಟಿ ಬಲಿಷ್ಠವಾಗಿರುವುದೆಂದೂ ಅದರ ಲೌಕಿಕ ಗಳಿಕೆಗಳು ಬಹಳ ಹಿರಿದಾಗಿರುವುದೆಂದೂ ಸೂಚಿಸುತ್ತದೆ.

ಅಹ್ಮದೀ ಮುಸ್ಲಿಮರ ಪ್ರಕಾರ ದಜ್ಜಾಲನ ಕತ್ತೆ ಎಂದು ಹೇಳಿದುದು ಸಹ ಉಪಮೆಯ ರೂಪದಲ್ಲಾಗಿದೆ. ಕತ್ತೆಗಳ ಬಗ್ಗೆ ನೀಡಿದ ವಿವರಣೆಗಳು ಪಾಶ್ಚಾತ್ಯರು ಅವಿಷ್ಕರಿಸಿದ ಇಂಧನ ಶಕ್ತಿಯಿಂದ ಚಲಿಸುವ ವಾಹನಗಳನ್ನು ಸೂಚಿಸುತ್ತವೆ. ದಜ್ಜಾಲನ ಕತ್ತೆಯ ಬಗ್ಗೆ ನೀಡಲಾದ ಮುಖ್ಯ ವಿವರಣೆಗಳು ಹೀಗಿವೆ: ಅದು ಬೆಂಕಿಯನ್ನು ಭಕ್ಷಿಸುವುದು, ಅದು ಭೂಮಿ, ಸಮುದ್ರ ಮತ್ತು ಆಕಾಶದಲ್ಲಿ ಸಂಚರಿಸುವುದು. ಅದು ವೇಗವಾಗಿ ಸಂಚರಿಸಿ, ತಿಂಗಳುಗಳಷ್ಟು ಕಾಲ ಸಂಚರಿಸಿ ದಾಟಿ ಹೋಗಬೇಕಾದ ದೂರವನ್ನು ಗಂಟೆಗಳಲ್ಲಿ ಸಾಗಿ ಮುಗಿಸುವುದು. ಪ್ರಯಾಣಿಕರು ಅದರ ಬೆನ್ನ ಮೇಲೆ ಪ್ರಯಾಣಿಸದೆ ಅದರ ಹೊಟ್ಟೆಯೊಳಗೆ ಪ್ರಯಾಣ ಮಾಡುವರು. ಅದರ ಹೊಟ್ಟೆಯು ಬೆಳಕಿನಿಂದ ಬೆಳಗಿಸಲ್ಪಡುವುದು. ಅದು ಪ್ರಯಾಣ ಹೊರಡುವಾಗ ಘೋಷಣೆ ಮಾಡಿ ಪ್ರಯಾಣಿಕರು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಲು ಹೇಳುವುದು. ಇವುಗಳೆಲ್ಲ ಎಷ್ಟು ಸರಿಯಾಗಿ ಈಡೇರಿವೆ ಎಂದರೆ ಇವು ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಭವ್ಯ ಸಾಕ್ಷ್ಯವಾಗಿವೆ.

ಅಹ್ಮದೀ ಮುಸ್ಲಿಮರ ಪ್ರಕಾರ ಮಹ್‌ದಿಯ ಬಗ್ಗೆ ಭವಿಷ್ಯವಾಣಿಯಲ್ಲಿ ಹೇಳಿದುದು ಸಹ ಪ್ರತೀಕ ರೂಪದಲ್ಲಿದೆ. ಅವರು ಹಂಚುವ ಸಂಪತ್ತು ಆಧ್ಯಾತ್ಮಿಕ ಜ್ಞಾನ ಮತ್ತು ಬುದ್ಧಿಮತ್ತೆಯ ಸಂಪತ್ತೇ ಹೊರತು ಲೌಕಿಕ ಸಂಪತ್ತಲ್ಲ. ಕೆಲವರು ಅದನ್ನು ಪಡೆದುಕೊಳ್ಳಲು ನಿರಾಕರಿಸುವರು ಎಂದು ಭವಿಷ್ಯವಾಣಿಯಲ್ಲಿ ಹೇಳಿದುದರಿಂದ ಅದು ಲೌಕಿಕ ಸಂಪತ್ತಲ್ಲ ಎಂದು ಸೂಚಿಸುತ್ತದೆ. ಏಕೆಂದರೆ ಮನುಷ್ಯನು ಲೌಕಿಕ ಸಂಪತ್ತಿನ ಬಗ್ಗೆ ಎಂದೂ ತೃಪ್ತನಾಗಿ ಹೆಚ್ಚಾದುದನ್ನು ನಿರಾಕರಿಸಲಾರನು. ಆಧ್ಯಾತ್ಮಿಕ ಸಂಪತ್ತನ್ನು ಮಾತ್ರ ಅವನು ನಿರಾಕರಿಸುವನು.

ಅಹ್ಮದಿಯಾ ಜಮಾಅತ್, ಇತರ ಮುಸ್ಲಿಮರು ಹೇಳುವ ರೀತಿಯಲ್ಲಿ ಇಸ್ಲಾಮಿನ ಪುನಶ್ಚೇತನವಾಗುವುದು ಎಂಬುದನ್ನು ತಿರಸ್ಕರಿಸುತ್ತಾರೆ. ಅಹ್ಮದಿಯೇತರ ಮುಸ್ಲಿಮರು ಇದರ ಬಗ್ಗೆ ಹೊಂದಿರುವ ವಿಶ್ವಾಸ ಪವಿತ್ರ ಖುರ್‌ಆನಿನ ಉಪದೇಶಗಳ ವಾಸ್ತವಿಕ ಉದ್ದೇಶಗಳಿಂದ ಭಿನ್ನವಾಗಿರುವುದೂ ಪ್ರವಾದಿಗಳ ಚರಿತ್ರೆಗೆ ಅನುಸಾರವಾಗಿರದುದೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡವಳಿಕೆಗೆ ವಿರುದ್ಧವೂ ಆಗಿವೆ.

ಜನಾಂಗಗಳನ್ನು ನಿಷ್ಕ್ರಿಯರನ್ನಾಗಿ ಮಾಡಿ ಭ್ರಮಾಲೋಕದಲ್ಲಿರಿಸು ವಂತಹ ಇಂತಹ ಧಾರ್ಮಿಕ ಸೈದ್ಧಾಂತಿಕ ಅಫೀಮನ್ನು ಅಹ್ಮದಿಯಾ ಜಮಾಅತ್ ಹೊರತಳ್ಳುತ್ತದೆ.

## ಧಾರ್ಮಿಕ ಪುನಶ್ಚೇತನದ ಬಗ್ಗೆ ಅಹ್ಮದಿಯಾ ಜಮಾಅತಿನ ಸಿದ್ಧಾಂತ

ಅಹ್ಮದಿಯಾ ಜಮಾಅತಿನ ಸಿದ್ಧಾಂತವು ಎಲ್ಲ ಧರ್ಮಗಳ ಸಂಪ್ರದಾಯಕ್ಕೆ ವಿಭಿನ್ನವಾಗಿರುವಂತಹದಲ್ಲ. ಚರಿತ್ರೆ ಈ ಸಿದ್ಧಾಂತವನ್ನು ಮಾತ್ರ ಬೆಂಬಲಿಸುತ್ತದೆ. ಕೆಲವು ಧಾರ್ಮಿಕ ಗ್ರಂಥಗಳು ಮತ್ತು ಪುರಾಣ ಕಥೆಗಳು ಕೆಲವರು ಆಕಾಶಕ್ಕೆ ಏರಿಹೋದುದರ ಬಗ್ಗೆ ಪ್ರಸ್ತಾಪಿಸುತ್ತವೆ ಯಾದರೂ ಆದಮರ ಕಾಲದಿಂದ ಇಂದಿನವರೆಗೆ ಆಕಾಶದಿಂದ ಸ್ವಶರೀರದೊಂದಿಗೆ ಭೂಮಿಗೆ ಇಳಿದು ಬಂದ ಒಬ್ಬನ ಬಗ್ಗೆಯೂ ಪ್ರಸ್ತಾಪಿಸುವುದಿಲ್ಲ.

ಕೆಲವರು ಆಕಾಶಕ್ಕೇರಿ ಹೋದ ರೀತಿಯ ಬಗ್ಗೆ ವಿವಿಧ ಅಭಿಪ್ರಾಯಗಳಿವೆಯಾದರೂ ದೀರ್ಘಕಾಲ ಭೂಮಿಯಿಂದ ಕಣ್ಮರೆಯಾದ ನಂತರ ಭೂಮಿಗೆ ಮರಳಿ ಬಂದುದಾಗಿ ಒಬ್ಬನ ಬಗ್ಗೆಯೂ ವರದಿಯಾಗಿಲ್ಲ. ಧಾರ್ಮಿಕ ಸುಧಾರಕರು ಯಾವಾಗಲೂ ಜನರ ಮಧ್ಯದಲ್ಲಿ ಹುಟ್ಟಿ ಬೆಳೆದರು. ಅವರು ವಾದಿಸಿದಾಗ ಅವರನ್ನು ಯಾವಾಗಲೂ ಜನರು ತಿರಸ್ಕರಿಸಿ ಅಪಹಾಸ್ಯ ಮಾಡಿದರು. ಅವರನ್ನು ಸ್ವಾಗತಿಸಲು ಆಡಂಬರದ ಕಮಾನುಗಳು ರಚಿಸಲ್ಪಡಲಿಲ್ಲ. ಅವರಿಗೆ ಹಾರಾರ್ಪಣೆ ಮಾಡಲೂ ಇಲ್ಲ. ಅವರ ಆಗಮನದ ಬಗ್ಗೆ ಸಂತೋಷ ಸೂಚಿಸಲು ದೀಪಗಳನ್ನು ಬೆಳಗಿಸಲೂ ಇಲ್ಲ. ತದ್ವಿರುದ್ಧವಾಗಿ, ದೇವನಾಮದಲ್ಲಿ ಪ್ರಮಾಣ ಮಾಡಿ ತಮ್ಮ ವಾದವನ್ನು ಪ್ರಕಟಿಸಿದವರನ್ನು ಹಿಂಸಾಚಾರಕ್ಕೆ ಗುರಿಪಡಿಸಿ ಅವರ ತಥಾಕಥಿತ 'ಅಪರಾಧ'ಕ್ಕೆ ಶಿಕ್ಷೆ ನೀಡಲಾಯಿತು. ಅವರು ನಡೆಯುವ ದಾರಿಗಳಲ್ಲಿ ಮುಳ್ಳುಗಳನ್ನು ನಾಟಲಾಯಿತು. ಮಣ್ಣನ್ನು ಅವರ ತಲೆಯ ಮೇಲೆ ಸುರಿಯಲಾಯಿತು ಮತ್ತು ಅವರಿಗೆ ಕಲ್ಲೆಸಲಾಯಿತು. ಮುಳ್ಳಿನ ಕಿರೀಟವನ್ನು ಅವರ ತಲೆಯ ಮೇಲೆ ಇಟ್ಟು ಕಿರೀಟಧಾರಣೆ ಮಾಡಲಾಯಿತು. ಊಹಿಸಲಾಗುವ ಪ್ರತಿಯೊಂದು ರೀತಿಯ ಚಿತ್ರಹಿಂಸೆಗೆ ಅವರನ್ನು ಗುರಿಪಡಿಸಲಾಯಿತು. ನೀವು ಅವರನ್ನು ತಾಯಿಫ್ ನಗರದಿಂದ ಕಲ್ಲೇಟಿನಿಂದ ಗಾಯಗೊಂಡು ತಲೆಯಿಂದ ಕಾಲು ತನಕ ರಕ್ತ ಸುರಿಯುತ್ತಾ ಮರಳುವುದಾಗಿ ಕಂಡಿರುತ್ತೀರಿ. ನೀವು ಅವರನ್ನು ಉಹುದ್‌ನ ರಣಾಂಗಣದಲ್ಲಿ ಗಾಯದಿಂದ ಅರ್ಧ ಮರಣಸ್ಥಿತಿ ಹೊಂದಿ, ತಮಗೋಸ್ಕರ ಪ್ರಾಣತ್ಯಾಗ ಮಾಡಿದವರ ಮೃತಶರೀರಗಳ ಕೆಳಗೆ ಹೂಳಲ್ಪಟ್ಟ ಸ್ಥಿತಿಯಲ್ಲಿ ಕಂಡಿರುವಿರಿ.

ಅವರ ಅನುಯಾಯಿಗಳು ಸಹ ಹೀಗೆಯೇ ಹಿಂಸಾಚಾರಗಳಿಗೆ

ಗುರಿಯಾದುದನ್ನು ನೀವು ಕಾಣುವಿರಿ. ಯೋಚಿಸಬಹುದಾದ ಎಲ್ಲ ರೀತಿಯ ಹಿಂಸಾಚಾರ ವಿಧಾನಗಳಿಗೆ ಅವರು ಈಡಾದರು. ಅವರ ಕಾಲುಗಳನ್ನು ಹಿಡಿದು ಒರಟು ರಸ್ತೆಗಳ ಮೇಲೆ ಎಳೆದುಕೊಂಡು ಹೋಗಲಾಯಿತು. ಸುಡುಬಿಸಿಲಿನಲ್ಲಿ ಬೆಂದ ಮರಳಿನಲ್ಲಿ ಮಲಗಿಸಿ ಅವರು ತೀವ್ರ ಸೂರ್ಯ ತಾಪವನ್ನು ಅನುಭವಿಸುವಂತೆ ಮಾಡಲಾಗುತ್ತಿತ್ತು. ಅವರನ್ನು ಉರಿಯುವ ಕೆಂಡಗಳ ಮೇಲೆ ಕೆಂಡಗಳು ನಂದಿಹೋಗುವ ತನಕ ಮಲಗಿಸಲಾಗುತ್ತಿತ್ತು.

ಅವರನ್ನು ಮನೆಗಳಿಂದ ಹೊರಹಾಕಲಾಯಿತು. ಅವರನ್ನು ಗಡಿಪಾರು ಮಾಡಲಾಯಿತು. ಅವರನ್ನು ಅನ್ನಪಾನೀಯಗಳಿಂದ ವಿರಹಿತರನ್ನಾಗಿ ಮಾಡುವುದಾಗಿ ಬೆದರಿಕೆ ಹಾಕಲಾಯಿತು. ಅವರನ್ನು ಖಡ್ಗದಿಂದ ಕೊಲ್ಲಲಾಯಿತು. ಪತ್ನಿಯರನ್ನು ಪತಿಯರಿಂದಲೂ ಪತಿಯರನ್ನು ಪತ್ನಿಯರಿಂದಲೂ ಬೇರ್ಪಡಿಸಲಾಯಿತು. ತಾಯಿತಂದೆಯರು ಮಕ್ಕಳನ್ನು ಕಳೆದುಕೊಳ್ಳುವಂತೆ ಮಾಡಲಾಯಿತು. ಎಲ್ಲ ಮೂಲಭೂತ ಹಕ್ಕುಗಳನ್ನು ಅವರಿಗೆ ನಿರಾಕರಿಸಲಾಯಿತು. ಪ್ರಾರ್ಥಿಸಲು ಮತ್ತು ಮಸ್‌ಜಿದ್‌ಗಳನ್ನು ನಿರ್ಮಿಸಲು ಅವರಿಗೆ ತಡೆಯೊಡ್ಡಲಾಯಿತು. ತಮ್ಮ ಧರ್ಮ ಯಾವುದೆಂದು ಘೋಷಿಸಲು ಕೂಡ ತಡೆಯಲಾಯಿತು. ಅವರಿಗೆ ತಮ್ಮ ವಿಶ್ವಾಸಾದರ್ಶಗಳನ್ನು ಹೆಸರಿಸುವ ಹಕ್ಕು ಕೂಡ ನೀಡಲಾಗಲಿಲ್ಲ.

ಹೀಗೆ ಮನುಷ್ಯನಿಗೆ ಹೊಸ ಆಧ್ಯಾತ್ಮಿಕ ಜೀವಿತವು ದಯಪಾಲಿಸಲ್ಪಡುವುದು. ಧರ್ಮದ ಪುನಶ್ಚೇತನಕ್ಕೆ ಒಯ್ಯುವ ದಾರಿ ಇದೇ ಆಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದಲ್ಲೂ ಮೊದಲಿನ ಇತರ ಎಲ್ಲ ಪ್ರವಾದಿಗಳ ಜೀವಿತದಲ್ಲೂ ನಾವು ಈ ವಿದ್ಯಮಾನವು ಜಾರಿಗೊಂಡುದಾಗಿ ಕಾಣುತ್ತೇವೆ. ಪ್ರವಾದಿಗಳು ಈ ಅಪಾಯಕರ ಮಾರ್ಗದಲ್ಲಿ ಸಂಚರಿಸುತ್ತಾ ತಮ್ಮ ತಮ್ಮ ಜನಾಂಗಗಳನ್ನು ಪುನಶ್ಚೇತನಗೊಳಿಸಿದರು.

ಆದಮರ ಕಾಲದಿಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ತನಕ ಜಾರಿಯಲ್ಲಿದ್ದ ಧಾರ್ಮಿಕ ಪುನಶ್ಚೇತನದ ಪ್ರಕ್ರಿಯೆ ಹೀಗೆಯೇ ಇತ್ತು. ಸತ್ಯವು ಹೀಗಿರುವಾಗ, ಅಲ್ಲಾಹನು ತನ್ನ ಉಲ್ಲಂಘಿಸಲಾಗದ ಹಾಗೂ ಸದಾಕಾಲ ಜಾರಿಯಲ್ಲಿದ್ದ ನಡವಳಿಕೆಯನ್ನು ಬದಲಾಯಿಸಿದನೆಂದು ಅಂಗೀಕರಿಸುವುದಾದರೂ ಹೇಗೆ? ಮುಸ್ಲಿಮರು ಒಂದು ಹನಿ ರಕ್ತ ಸುರಿಸದೆ, ಪ್ರಯತ್ನದ ಒಂದು ಹೊಡೆತ ಸಹ ನೀಡದೆ ಭೂಮಿಗೆ ವಾರಸುದಾರರು ಎಂದು ಅಂಗೀಕರಿಸುವುದಾದರೂ ಹೇಗೆ? ತ್ಯಾಗ-ಬಲಿದಾನದ ಮಾರ್ಗದಲ್ಲಿ ಸಾಗದೆ ಮುಸ್ಲಿಮರು ಜಯಶಾಲಿಗಳಾಗುವರು ಎಂದು ನಂಬುವುದು ಹೇಗೆ? ಹಿಂದೆಂದೂ ಹಾಗೆ ಸಂಭವಿಸಿಲ್ಲ. ಇನ್ನು ಮುಂದೆ ಸಹ ಹಾಗೆ ಆಗಲಾರದು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹರು ಈ ಶಾಶ್ವತ ಸತ್ಯವನ್ನು ಸ್ವೀಕರಿಸಿ ಹೀಗೆ ಮುನ್ನೆಚ್ಚರಿಕೆ ನೀಡುತ್ತಾರೆ: "ಅಪಹಾಸ್ಯಕ್ಕೆ ಗುರಿಯಾಗದ ಒಬ್ಬ ಪ್ರವಾದಿಯೂ ಇಲ್ಲ. ಆದುದರಿಂದ ವಾಗ್ದತ್ತ ಮಸೀಹರನ್ನೂ ಜನರು ಪರಿಹಾಸ ಮಾಡಲಿಕ್ಕಿತ್ತು.

"ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿರುತ್ತಾನೆ: **ಯಾ ಹಸ್‌ರತನ್ ಅಲಲ್ ಇಬಾದಿ ಮಾ ಯಅ್‌ತೀಹಿಮ್ ಮಿನ್‌ರ್‌ರಸೂಲಿನ್ ಇಲ್ಲಾ ಕಾನೂ ಬಿಹೀ ಯಸ್ತಹ್‌ಝಿಊನ್**. – 'ಹಾ ಮನುಷ್ಯರ ದುರದೃಷ್ಟವೇ! ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ.' (36:31)

"ಪ್ರತಿಯೊಬ್ಬ ಪ್ರವಾದಿ ಪರಿಹಾಸಕ್ಕೆ ಗುರಿಯಾಗುವುದು ಅಲ್ಲಾಹನಿಂದ ಅವರ ಸತ್ಯತೆಯ ಚಿಹ್ನೆಯಾಗಿದೆ. ಆದರೆ ಎಲ್ಲ ಜನರ ಮುಂದೆ ಆಕಾಶದಿಂದ ಇಳಿದು ಬರುವವರನ್ನು ಮತ್ತು ಅವರ ಜೊತೆ ದೇವದೂತರು ಸಹ ಇರುವಾಗ ಯಾರು ಪರಿಹಾಸ ಮಾಡುವರು? ಈ ಸಾಕ್ಷ್ಯಾಧಾರದಿಂದ ಆಕಾಶದಿಂದ ಇಳಿದು ಬರುವ ಯೋಚನೆ ಕೇವಲ ಸುಳ್ಳೆಂದು ಬುದ್ಧಿವಂತನಾದ ಮನುಷ್ಯನು ಮನವರಿಕೆ ಮಾಡಿಕೊಳ್ಳಬಹುದು.

"ನೆನಪಿಟ್ಟುಕೊಳ್ಳಿರಿ. ಯಾರೂ ಆಕಾಶದಿಂದ ಇಳಿದು ಬರಲಿಕ್ಕಿಲ್ಲ. ಈಗ ಜೀವಿಸಿರುವ ನಮ್ಮ ಎಲ್ಲ ವಿರೋಧಿಗಳು ಮೃತರಾಗುವರು. ಅವರಲ್ಲಿ ಯಾರೂ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅನಂತರ ಬಾಕಿಯಾಗಿ ಉಳಿದ ಅವರ ಮಕ್ಕಳು ಸಹ ಮೃತರಾಗುವರು. ಅವರಲ್ಲಿ ಯಾರೂ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅನಂತರ ಅವರ ಮಕ್ಕಳ ಮಕ್ಕಳು ಸಹ ಮೃತರಾಗುವರು. ಅವರು ಸಹ ಮರ್‌ಯಮ್ ಪುತ್ರನನ್ನು ಆಕಾಶದಿಂದ ಇಳಿದು ಬರುವುದಾಗಿ ಕಾಣಲಾರರು. ಆಗ ದೇವನು ಜನರ ಹೃದಯಗಳಲ್ಲಿ ಗಾಬರಿಯನ್ನುಂಟುಮಾಡುವನು. ಶಿಲುಬೆಯ ಪ್ರಾಬಲ್ಯದ ಕಾಲವೂ ಆಗ ದಾಟಿ ಹೋಗಿರುವುದು. ಆದರೆ ಮರ್‌ಯಮ್ ಪುತ್ರ ಈಸಾ ಆಕಾಶದಿಂದ ಇಳಿದು ಬರಲಿಲ್ಲ. ಆಗ ಬುದ್ಧಿಶಾಲಿಗಳು ಈ ವಿಶ್ವಾಸದ ಬಗ್ಗೆ ಬೇಸರ ಹೊಂದುವರು. ಇಂದಿನಿಂದ ಮೂರನೇ ಶತಮಾನ ಪೂರ್ಣವಾಗುವ ಮೊದಲೇ ಈಸಾರನ್ನು ಪ್ರತೀಕ್ಷಿಸುವ ಮುಸ್ಲಿಮರು ಮತ್ತು ಕ್ರೈಸ್ತರು ನಿರಾಶೆಹೊಂದಿ ಈ ವಿಶ್ವಾಸದ ಬಗ್ಗೆ ಸಂದೇಹಬಾಧಿತರಾಗಿ ಈ ಸುಳ್ಳು ನಂಬಿಕೆಯನ್ನು ಬಿಟ್ಟುಬಿಡುವರು. ಆಗ ಲೋಕದಲ್ಲಿ ಒಂದೇ ಧರ್ಮ ಇರುವುದು. ಒಬ್ಬನೇ ನೇತಾರ ಇರುವರು. ನಾನೊಂದು ಬೀಜ ಬಿತ್ತಲು ಬಂದೆನು. ನನ್ನ ಕೈಗಳಿಂದ ಆ ಬೀಜ ಬಿತ್ತಲಾಗಿದೆ. ಅದು ಮೊಳಕೆಯೊಡೆದು ಬೆಳೆದು ವೃಕ್ಷವಾಗುವುದು. ಅದರ ಬೆಳವಣಿಗೆಯನ್ನು ತಡೆಯಬಲ್ಲವರು ಯಾರೂ ಇಲ್ಲ." (ತದ್‌ಕಿರತುಶ್ಶಹಾದತೈನ್ ಪುಟ 64, 65)

ಅಹ್ಮದಿಯರ ಮತ್ತು ಅಹ್ಮದಿಯೇತರರ ವಿಶ್ವಾಸಗಳನ್ನು ಹೋಲಿಸಿ ನೋಡುವ ನಿಷ್ಪಕ್ಷಪಾತಿಯಾದವನು ಹೀಗೆ ಕಾಣುವನು: ಅಹ್ಮದಿಯರ ನಿಲುವು ಧರ್ಮಗಳ ಚರಿತ್ರೆಯನ್ನು ಆಧಾರವಾಗಿಟ್ಟು ರೂಪಿಸಿದ್ದಾಗಿದೆ. ಆದರೆ ಅಹ್ಮದಿಯೇತರರ ಸಿದ್ಧಾಂತ ಪೌರಾಣಿಕ ಕಥೆಗಳನ್ನು ಆಧಾರವಾಗಿಟ್ಟುಕೊಂಡದ್ದಾಗಿದೆ ಹಾಗೂ ಧರ್ಮಗಳು ಪುನಶ್ಚೇತನಗೊಂಡ ಚರಿತ್ರೆಗೆ ವಿರುದ್ಧವಾಗಿದೆ. ದೇವನಿಂದ ನೇಮಿಸಲ್ಪಟ್ಟ ಪ್ರತಿಯೊಬ್ಬನು ವಿರೋಧದ ಬಿರುಗಾಳಿಯನ್ನು ಎದುರಿಸಬೇಕಾಯಿತೆಂದು ಚರಿತ್ರೆಯಿಂದ ತಿಳಿಯುತ್ತದೆ. ಎಲ್ಲ ಪ್ರವಾದಿಗಳು ಸತ್ಯ ಮತ್ತು ಶಾಶ್ವತ ಜೀವಿತದ ಸಂದೇಶದೊಂದಿಗೆ ಆಗಮಿಸಿದರು. ಆದರೆ ಸತ್ಯಕ್ಕೆ ವಿರುದ್ಧವಾಗಿ ಸುಳ್ಳನ್ನೂ ಆಧ್ಯಾತ್ಮಿಕ ಜೀವಿತಕ್ಕೆ ಬದಲಾಗಿ ಆಧ್ಯಾತ್ಮಿಕ ಮೃತ್ಯುವನ್ನೂ ಬಯಸಿದವರು ಪ್ರವಾದಿಗಳನ್ನು ವಿರೋಧಿಸಿದರು. ಧರ್ಮಗಳ ಜನನವಾದುದು ಆ

ರೀತಿಯಾಗಿದೆ. ಧರ್ಮಗಳೊಳಗೆ ಮಲಿನತೆ ಮತ್ತು ಭ್ರಷ್ಟತೆ ನುಸುಳುವಾಗ ಧರ್ಮಗಳ ಹೊಸಹುಟ್ಟು ಇದೇ ರೀತಿ ಸಂಭವಿಸುತ್ತವೆ. ಪ್ರವಾದಿಗಳು ಯಾವ ರೀತಿ ಕಷ್ಟಕ್ಕೆ ಗುರಿಯಾದರೋ ಅದೇ ರೀತಿ ಸುಧಾರಕರೂ ಕಷ್ಟಕ್ಕೆ ಈಡಾದರು. ಒಂದು ಜನಾಂಗವನ್ನು ದೇವನು ಪುನಶ್ಚೇತನಗೊಳಿಸಲು ಬಯಸುವಾಗ ಆ ಜನಾಂಗವು ಎರಡು ಗುಂಪುಗಳಾಗಿ ವಿಭಜಿಸ್ಪಡುತ್ತದೆ – ಸತ್ಯವನ್ನು ಕಂಡ ಒಂದು ಗುಂಪು ಮತ್ತು ಸತ್ಯವನ್ನು ವಿರೋಧಿಸುವ ಇನ್ನೊಂದು ಗುಂಪು. ಪ್ರತಿಯೊಂದು ಗುಂಪು ತನ್ನ ನಡವಳಿಕೆಯನ್ನು ಬದಲಾಯಿಸುವುದಿಲ್ಲ. ಪವಿತ್ರ ಖುರ್‌ಆನ್, ಪುನರಾವರ್ತಿಸಲ್ಪಡುವ ಈ ಶೃಂಖಲೆಯನ್ನು ಅತ್ಯಂತ ಪ್ರಭಾವಶಾಲಿಯಾದ ರೂಪದಲ್ಲಿ ವಿವರಿಸುತ್ತದೆ. ಪವಿತ್ರ ಖುರ್‌ಆನ್ ಅಧ್ಯಯನ ಮಾಡಿದರೆ ಹೀಗೆ ತಿಳಿಯುತ್ತದೆ:

1. ಧರ್ಮವು ಸ್ಥಾಪಿಸಲ್ಪಡುವುದು ಮತ್ತು ಪುನಶ್ಚೇತನಗೊಳ್ಳುವುದು ದೇವನಿಂದ ನೇಮಿಸಲ್ಪಟ್ಟ ಸುಧಾರಕರಿಂದಾಗಿದೆ. ಮತಪಂಡಿತರು ಸಭೆಗಳನ್ನು ನಡೆಸಿ ಮತ್ತು ಸಮಾಲೋಚನೆ ನಡೆಸಿ ಎಂದೂ ಧರ್ಮವನ್ನು ಪುನಶ್ಚೇತನಗೊಳಿಸಿರಲಿಲ್ಲ.

2. ದೇವನಿಂದ ನಿಯಮಿಸಲ್ಪಟ್ಟ ಸುಧಾರಕರು ಯಾವಾಗಲೂ ಅವರ ಜನರಿಂದ ತಿರಸ್ಕರಿಸಲ್ಪಡುತ್ತಿದ್ದರು ಮತ್ತು ಜನರು ಅವರೊಂದಿಗೆ ದುರಹಂಕಾರದಿಂದಲೂ ಪರಿಹಾಸದಿಂದಲೂ ವರ್ತಿಸುತ್ತಿದ್ದರು.

3. ಅಂತಹ ಸುಧಾರಕರು ಹಿಂಸಿಸಲ್ಪಡುತ್ತಿದ್ದರು. ತಮ್ಮ ತಂದೆತಾತಂದಿರ ಧರ್ಮವನ್ನು ಅವರು ಕೆಡಿಸಿದರೆಂದು ಅವರನ್ನು ವಿರೋಧಿಗಳು ಆಕ್ಷೇಪಿಸುತ್ತಿದ್ದರು. ಅವರನ್ನು ಪಾಷಂಡಿಗಳೆಂದೂ ಧರ್ಮತ್ಯಾಗಿಗಳೆಂದೂ ಕರೆಯಲಾಗುತ್ತಿತ್ತು.

4. ವಿರೋಧಿಗಳ ವಿಶ್ವಾಸದ ಪ್ರಕಾರ ಧರ್ಮತ್ಯಾಗಿಗಳಿಗೆ ಮರಣದಂಡನೆ ಅಥವಾ ಗಡಿಪಾರಿನ ಶಿಕ್ಷೆ ವಿಧಿಸಬೇಕಾಗಿತ್ತು. ಸುಧಾರಕರಿಗೆ ಅವರು ತಮ್ಮ ವಾದವನ್ನು ಹಿಂತೆಗೆಯಬೇಕು ಅಥವಾ ದೇಶ ಬಿಟ್ಟು ಹೋಗಬೇಕು ಎಂಬ ಎರಡು ಆಯ್ಕೆಗಳನ್ನು ವಿರೋಧಿಗಳು ಮುಂದಿಡುತ್ತಿದ್ದರು. ಸುಧಾರಕರು ಹೀಗೆ ಮಾಡಲು ಒಪ್ಪದಿದ್ದರೆ ಕೊಲ್ಲುವುದಾಗಿ ವಿರೋಧಿಗಳು ಬೆದರಿಕೆ ಹಾಕುತ್ತಿದ್ದರು.

5. ಸುಧಾರಕರು ಹಿಂಸೆ ಮಾಡಬೇಕೆಂದು ಎಂದೂ ಪ್ರತಿಪಾದಿಸುತ್ತಿರಲಿಲ್ಲ. ಅವರ ಅನುಯಾಯಿಗಳು ತಮ್ಮ ವಿಶ್ವಾಸದಲ್ಲಿ ಹೇಗೆ ಸ್ಥಿರವಾಗಿರುತ್ತಾರೆಂದರೆ ಅವರು ವಿಶ್ವಾಸ ತ್ಯಾಗ ಮಾಡುವುದಕ್ಕೆ ಬದಲಾಗಿ ದೇಶಬಿಟ್ಟು ಹೋಗಲು ಅಥವಾ ಹತರಾಗಲು ಸಿದ್ಧರಾಗುತ್ತಿದ್ದರು.

6. ಸುಧಾರಕರು ಅಧಿಕಾರ ಅಥವಾ ಉನ್ನತ ಉದ್ಯೋಗ ನೀಡುವ ವಾಗ್ದಾನ ನೀಡಿ ಜನರನ್ನು ತಮ್ಮ ಕಡೆಗೆ ಸೆಳೆಯುವುದಿಲ್ಲ. ಅವರು ಲೌಕಿಕ ಅಭಿಲಾಷೆಗಳನ್ನು ತಮ್ಮ ಅನುಯಾಯಿಗಳಿಂದ ದೂರೀಕರಿಸುವರು. ಸುಧಾರಕರು ಜನರಿಗೆ ಸಂಪತ್ತು ನೀಡಿ ಆಕರ್ಷಿಸುವುದಿಲ್ಲ. ಅವರು ತಮ್ಮ ಅನುಯಾಯಿಗಳಲ್ಲಿ ತ್ಯಾಗ ಮನೋಭಾವವನ್ನು ಉಂಟುಮಾಡುತ್ತಾರೆ. ಐಶ್ವರ್ಯವಂತರಾದ ವಿಶ್ವಾಸಿಗಳು ತಮ್ಮ ಸಂಪತ್ತನ್ನು ದೇವಮಾರ್ಗದಲ್ಲಿ ವಿನಿಯೋಗಿಸುವುದು ಪುಣ್ಯದಾಯಕವೆಂದು ಭಾವಿಸುತ್ತಾರೆ. ಶಕ್ತಿಶಾಲಿಗಳಾದ ವಿಶ್ವಾಸಿಗಳು ಅಧಿಕಾರದ ಆಸೆಯನ್ನು ಬಿಟ್ಟುಬಿಡುತ್ತಾರೆ. ಆಗ ದೇವಾನುಗ್ರಹವು ಅವರು ಲೌಕಿಕ ಅಧಿಕಾರವನ್ನು ಕೈಗೆತ್ತಿಕೊಳ್ಳಲು ಅರ್ಹರು ಎಂದು ತೀರ್ಮಾನಿಸುತ್ತದೆ.

ಪವಿತ್ರ ಖುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳು ಜನಾಂಗಗಳ ಧಾರ್ಮಿಕ ಪುನಶ್ಚೇತನದ ಹಂತಗಳನ್ನು ಮೇಲಿನಂತೆ ವಿವರಿಸುತ್ತವೆ. ಎಲ್ಲ ಪ್ರವಾದಿಗಳು ಆದಮ್[ಅ] ಮೊದಲುಗೊಂಡು ಹಝ್ರತ್ ಪೈಗಂಬರರ[ಸ] ತನಕ – ಈ ಹಂತಗಳನ್ನು ದಾಟಿ ಹೋದರು. ಅವರು ಕಷ್ಟ ಮತ್ತು ತ್ಯಾಗ ಬಲಿದಾನದ ಮಾರ್ಗದಲ್ಲಿ ಸಂಚರಿಸಿ ತಮ್ಮ ಜನಾಂಗಗಳನ್ನು ಮುಂದಕ್ಕೆ ಒಯ್ದು ನವ ಜೀವನವನ್ನು ನೀಡಿದರು. ಅವರು ಪ್ರೀತಿಯನ್ನು ಕಲಿಸಿದರು. ಕಠಿಣ ಪರಿಶ್ರಮವನ್ನು ಪ್ರೀತಿಸಲು, ನಿರಂತರ ಪ್ರಯತ್ನ ಮಾಡಲು ಮತ್ತು ಬಿಡುವಿಲ್ಲದೆ ಕೆಲಸ ಮಾಡಲು ಅವರು ಪ್ರೇರೇಪಿಸಿದರು. ಮೃತ ಜನಾಂಗಗಳಿಗೆ ಈ ಕ್ರಾಂತಿಕಾರಿ ಹುರುಪು ಜೀವನವನ್ನು ನೀಡುತ್ತದೆ. ಯಾವಾಗಲೂ ಪ್ರದರ್ಶಿಸಲಾದ ಮತ್ತು ಬದಲಾವಣೆ ಹೊಂದದ ಈ ದೈವಿಕ ನಿಯಮ ಮನುಷ್ಯ ಪ್ರಕೃತಿಗೆ, ಮನಸ್ಸಾಕ್ಷಿಗೆ ಮತ್ತು ವಿವೇಕಕ್ಕೆ ಅನುಯೋಜ್ಯವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ನಿಯಮವನ್ನು ಮನವರಿಕೆ ಮಾಡಿಕೊಂಡಿದೆ.

ಮೇಲೆ ವಿವರಿಸಿದ ಪ್ರಕಾರ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಧರ್ಮದ ಪುನಶ್ಚೇತನದ ಬಗ್ಗೆ ಪ್ರತಿಪಾದಿಸುವ ಸಿದ್ಧಾಂತ ಹೊಸದಾಗಿ ಮನುಷ್ಯಬುದ್ಧಿ ಕಂಡುಹಿಡಿದುದೇನೂ ಅಲ್ಲ. ಪವಿತ್ರ ಖುರ್‌ಆನ್ ಅತ್ಯಂತ ನಿಖರವಾಗಿ ದಾಖಲಿಸಿರುವ ಬದಲಾಯಿಸಲಾಗದ ಚಾರಿತ್ರಿಕ ಪ್ರಕ್ರಿಯೆಯಿಂದ ಅದು ಲಭಿಸಿದೆ. ಪ್ರತಿಯೊಂದು ಸತ್ಯಧರ್ಮದ ಶಾಶ್ವತ ತತ್ವಗಳ ಮತ್ತು ಸತ್ಯಗಳ ಅಸ್ತಿಭಾರದ ಮೇಲೆ ಅದನ್ನು ಸ್ಥಾಪಿಸಲಾಗಿದೆ. ಉದಾಹರಣೆಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಅವನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ." (2:257)

"ಹಾ ಮನುಷ್ಯರ ದುರದೃಷ್ಟವೇ! ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ" (36:31)

"ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಟು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು." (13:12)

ಪ್ರವಾದಿ ಶುಐಬರಿಗೆ[ಅ] ಅವರ ಜನಾಂಗದ ಜನರು ಹೀಗೆ ಬೆದರಿಕೆ ಹಾಕಿದರು: "ಹೇ ಶುಐಬ್, ನಿನ್ನನ್ನೂ ನಿನ್ನೊಂದಿಗಿರುವ ವಿಶ್ವಾಸಿಗಳನ್ನೂ ನಾವು ನಮ್ಮ ಊರಿನಿಂದ ಖಂಡಿತವಾಗಿಯೂ ಹೊರಕ್ಕಟ್ಟುವೆವು ಅಥವಾ ನೀವು ನಮ್ಮ ಧರ್ಮಕ್ಕೆ ಮರಳಲೇಬೇಕು." (7:89)

"ಪ್ರವಾದಿ ಶುಐಬ್ ಹೀಗೆ ಉತ್ತರ ನೀಡಿದರು: 'ಏನು ನಾವು ಅದನ್ನು ಇಷ್ಟಪಡುವುದಿಲ್ಲವಾದರೂ (ನಿಮ್ಮ ಧರ್ಮಕ್ಕೆ ಮರಳಬೇಕೇ?)' (7:89)

ಪ್ರವಾದಿ ನೂಹರ[ಅ] ಜನಾಂಗದವರು ಸಹ ಹೀಗೆ ಬೆದರಿಕೆ ಒಡ್ಡಿದರು: "ಹೇ ನೂಹ್, ನೀನು (ಉಪದೇಶಿಸುವುದನ್ನು) ನಿಲ್ಲಿಸದಿದ್ದರೆ ಖಂಡಿತವಾಗಿಯೂ ನೀನು ಕಲ್ಲೆಸೆದು ಕೊಲ್ಲಲ್ಪಡುವೆ." (26:117)

ವಿರೋಧಿಗಳು ಹೀಗೆ ವರ್ತಿಸಿದುದು ಕೇವಲ ಕೆಲವು ಪ್ರವಾದಿಗಳೊಂದಿಗೆ ಮಾತ್ರವೆಂದು ಗ್ರಹಿಸಬಾರದು. ಪವಿತ್ರ ಖುರ್‌ಆನ್ ಎಲ್ಲ ಪ್ರವಾದಿಗಳ ವಿರುದ್ಧ ವಿರೋಧಿಗಳ ವರ್ತನೆಯನ್ನು ಹೀಗೆ ಸಂಕ್ಷೇಪಿಸಿ ಹೇಳುತ್ತದೆ:

"ಅವಿಶ್ವಾಸಿಗಳು ಅವರ ಸಂದೇಶವಾಹಕರೊಡನೆ ಹೇಳಿದರು: 'ನಾವು ಖಂಡಿತವಾಗಿಯೂ ನಮ್ಮ ಊರಿನಿಂದ ನಿಮ್ಮನ್ನು ಹೊರಹಾಕುವೆವು. ಅಲ್ಲವಾದರೆ ನೀವು ನಮ್ಮ ಧರ್ಮಕ್ಕೆ ಮರಳಿ ಬರಲೇಬೇಕು." (14:14)

ಪ್ರವಾದಿ ಇಬ್ರಾಹೀಮ್[ಅ] ತನ್ನ ಪೂರ್ವಜರ ಧರ್ಮವನ್ನು ತ್ಯಜಿಸಿ ಸತ್ಯವನ್ನು ಹೇಳಿದುದರಿಂದ ಅವರಿಗೆ ಶಿಕ್ಷೆ ವಿಧಿಸಲಾಯಿತು. ಅವರ ಜನಾಂಗದ ಮುಂದಾಳುಗಳು ಕೋಪಾವಿಷ್ಟರಾಗಿ ಹೀಗೆ ಹೇಳಿದರು:

"ನೀವೇನಾದರೂ ಮಾಡಲು ಉದ್ದೇಶಿಸಿದ್ದರೆ, ಇವನನ್ನು ಸುಟ್ಟು ಹಾಕಿ ನಿಮ್ಮ ದೇವರುಗಳಿಗೆ ಸಹಾಯ ಮಾಡಿರಿ." (21:69)

ಬೈಬಲಿನ ವ್ಯಾಖ್ಯಾನದಲ್ಲಿ ಯಹೂದಿ ಪಂಡಿತರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ ಕಾರಣ ಯೇಸುಕ್ರಿಸ್ತರನ್ನು ಶಿಲುಬೆಗೆ ಜಡಿಯಲಾಯಿತು. ಆದರೆ ಅವರು ಬಹಿರಂಗವಾಗಿ ಹೀಗೆ ಹೇಳಿದ್ದರು:

ಮೋಶೆಯ ಧರ್ಮಶಾಸ್ತ್ರವನ್ನಾಗಲಿ, ಪ್ರವಾದಿಗಳ ವಚನವನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ – ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು." (ಮತ್ತಾಯ 5:17,18)

ನಿಮಗೆ ಒಂದು ವಿಷಯ ನೆನಪಿಸಿಕೊಡಲು ನಾನು ಬಯಸುತ್ತೇನೆ. ಯೇಸುಕ್ರಿಸ್ತರ ಮತ್ತು ಯಹೂದಿ ಮತಪಂಡಿತರ ಮಧ್ಯೆ ಭಿನ್ನಾಭಿಪ್ರಾಯಕ್ಕೆ ಕಾರಣ ಹಳೆಯ ಒಡಂಬಡಿಕೆಯ ಒಂದು ವಚನದ ವ್ಯಾಖ್ಯಾನದ ಕುರಿತಾಗಿತ್ತು. 2 ಅರಸುಗಳು ಅಧ್ಯಾಯ 2 ವಚನ 11ರಲ್ಲಿ ಎಲೀಯ ಆಕಾಶಕ್ಕೆ ಸುಳಿಗಾಳಿಯೊಂದಿಗೆ ಮೇಲೇರಿ ಹೋದುದಾಗಿ ಹೇಳಲಾಗಿದೆ. ಯಹೂದಿ ಮತಪಂಡಿತರು ಬೈಬಲಿನ ಈ ವಚನ ಅಕ್ಷರಾರ್ಥದಲ್ಲಿ ಈಡೇರಿರುವುದೆಂದು ಭಾವಿಸಿ, ಯೇಸುಕ್ರಿಸ್ತರಿಗೆ ಮುಂಚೆ ಎಲೀಯ ಪ್ರವಾದಿ ಸ್ವತಃ ಆಕಾಶದಿಂದ ಇಳಿದು ಬರುವರು ಎಂದು ನಂಬಿದ್ದರು. ಆದರೆ ಯೇಸುಕ್ರಿಸ್ತರು, ಈ ಭವಿಷ್ಯವಾಣಿ ಉಪಮೆಯ ರೀತಿಯಲ್ಲಿದೆ ಎಂದೂ ಅದರ ಪದಗಳನ್ನು ಅಕ್ಷರಶಃ ಪರಿಗಣಿಸಬಾರದೆಂದೂ ಹೇಳಿದರು. ಝುಕರಿಯ್ಯರ ಮಗ ಯೋಹಾನ (ಯಹ್‌ಯಾ) ಆಕಾಶದಿಂದ ಆಗಮಿಸಲಿರುವ ಎಲೀಯ ಎಂದು ಅವರು ಹೇಳಿದರು. ಯೋಹಾನ ಭೂಮಿಯಲ್ಲಿ ಹುಟ್ಟಿದರೆಂದೂ ಅವರು ಆಕಾಶದಿಂದ ಇಳಿದು ಬಂದಿರಲಿಲ್ಲವೆಂದೂ ಯೇಸುಕ್ರಿಸ್ತರಿಗೆ ಚೆನ್ನಾಗಿ ತಿಳಿದಿತ್ತು. "ಎಲೀಯನು ಮೊದಲು ಬರುವುದು ಅಗತ್ಯವೆಂಬುದಾಗಿ ಶಾಸ್ತ್ರಿಗಳು ಹೇಳುತ್ತಾರಲ್ಲ?" ಎಂಬ ಪ್ರಶ್ನೆಗೆ ಯೇಸುಕ್ರಿಸ್ತರು ಹೀಗೆ ಉತ್ತರ ನೀಡಿದರು:

"ಎಲೀಯನು ಬರುವುದು ನಿಜ; ಬಂದು ಎಲ್ಲವನ್ನೂ ತಿರುಗಿ ಸರಿ ಮಾಡುವನು; ಆದರೆ ನಾನು ನಿಮಗೆ ಹೇಳುವುದೇನೆಂದರೆ, ಎಲೀಯನು ಬಂದು ಹೋದನು; ಜನರು ಅವನ ಗುರುತು ಅರಿಯದೆ ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು. ಅವನಿಗಾದಂತೆ ಮನುಷ್ಯಕುಮಾರನಿಗೆ ಸಹ ಅವರ ಕಡೆಯಿಂದ ಹಿಂಸೆಯಾಗುವುದು ಎಂದು ಉತ್ತರ ಕೊಟ್ಟನು. ಆಗ ಸ್ನಾನಿಕನಾದ ಯೋಹಾನನ ವಿಷಯವಾಗಿ ತಮಗೆ ಈ ಮಾತನ್ನು ಹೇಳಿದನೆಂದು ಶಿಷ್ಯರು ತಿಳಿದುಕೊಂಡರು" (ಮತ್ತಾಯ 17:10–13)

ಎಲ್ಲರಿಗಿಂತ ಹೆಚ್ಚು ಕಷ್ಟಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಅನುಭವಿಸಿದ್ದರು. ಅವರು ಹೀಗೆ ಹೇಳಿದ್ದರು: ಯಾವುದೇ ಪ್ರವಾದಿ ನನ್ನಷ್ಟು ಕಷ್ಟ ಅನುಭವಿಸಲಿಲ್ಲ."

ಧರ್ಮಗಳ ಚರಿತ್ರೆ ನಮಗೆ ಹೀಗೆ ಕಲಿಸುತ್ತದೆ: ಯಾವಾಗಲೂ ಪ್ರವಾದಿಗಳಾಗಿ ವಾದಿಸಿದವರು ಮನುಷ್ಯರೇ ಆಗಿದ್ದರು. ಪುರಾಣ ಕಥೆಗಳ ವೀರನ ಹಾಗೆ ಅವರು ಆಕಾಶದಿಂದ ಇಳಿದು ಬರುವುದಿಲ್ಲ. ಪ್ರವಾದಿಗಳು ಯಾವಾಗಲೂ ಪರೀಕ್ಷೆಗಳಿಗೂ ಕಷ್ಟಗಳಿಗೂ ಈಡಾದರು. ಪ್ರವಾದಿಗಳ ಅನುಯಾಯಿಗಳು ಜಯಗಳಿಸುವುದು ಅನ್ಯರ ಪರಿಶ್ರಮ ಮೂಲಕವಾಗಿರುವುದಿಲ್ಲ. ಅವರು ತಮ್ಮ ಸ್ವಂತ ಬೆವರು ಮತ್ತು ರಕ್ತ ಸುರಿಸಿ ಜಯಶಾಲಿಗಳಾಗುತ್ತಾರೆ. ♦

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ನೀನು ಮಾಡು – ಮಾಡಬೇಡ

ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್

## 2 – ಇಸ್ಲಾಮೀ ಸಂಸ್ಕೃತಿ

201. ನೀನು ನಿನ್ನ ನಗ್ನತೆಯನ್ನು ಬಹಿರಂಗಪಡಿಸದಿರು.
202. ಯಾರಾದರೂ ತಿನ್ನುತ್ತಾ ಇದ್ದರೆ ಅವನ ಕಡೆಗೆ ದಿಟ್ಟಿಸಿ ನೋಡಬೇಡ.
203. ನೀನು ನಿನ್ನ ನೆರೆಹೊರೆಯವರಿಗೆ ಒಮ್ಮೊಮ್ಮೆ ಪಾರಿತೋಷಿಕ ಕಳುಹಿಸು.
204. ನಿನಗೆ ರೈಲು ಬಂಡಿಯಲ್ಲಿ ಮತ್ತು ಬಸ್ಸುಗಳಲ್ಲಿ ತೊಂದರೆ ಆದರೂ ನಿನ್ನ ಜೊತೆ ಪ್ರಯಾಣ ಮಾಡುವವರೊಂದಿಗೆ ಜಗಳ ಮಾಡಬೇಡ.
205. ನೀನು ತಾತ್ಕಾಲಿಕ ಉಪಯೋಗಕ್ಕಾಗಿ ಏನನ್ನಾದರೂ ಪಡಕೊಂಡರೆ ನಿನಗೆ ಕೊಟ್ಟವರು ಕೇಳುವ ಮೊದಲೇ ವಾಪಸು ಕೊಡು.
206. ನೀನು ನಿನ್ನ ವಂಶದ ಬಗ್ಗೆ ಹೆಮ್ಮೆ ಪಡದಿರು.
207. ನೀನು ಸರಕಾರಕ್ಕೆ ನಿಷ್ಠಾವಂತನಾಗು. ವಿದ್ರೋಹದಲ್ಲಿ ಭಾಗವಹಿಸದಿರು.
208. ಹೇ ಮಹಿಳೆ, ನೀನು ಮನೆಯಲ್ಲೂ ನಿನ್ನ ಎದೆಯನ್ನೂ ತಲೆಯನ್ನೂ ದುಪಟದಿಂದ ಮರೆಮಾಡು. ಇದು ನಿನ್ನ ಲಜ್ಜೆಯನ್ನು ಕಾಪಾಡಲು ಸಹಾಯಕವಾಗಿದೆ.
209. ಲೋಕದಲ್ಲಿ ಪ್ರತಿಯೊಬ್ಬನು ಯಾವಾಗಲಾದರೂ ನಿನಗೆ ಪ್ರಯೋಜನಕ್ಕೆ ಬರಬಹುದು. ಆದುದರಿಂದ ಯಾರೊಂದಿಗೂ ಜಗಳಮಾಡದಿರು.
210. ಹೇ ಪುರುಷ, ನೀನು ರೇಷ್ಮೆ ಬಟ್ಟೆ ಧರಿಸದಿರು.
211. ನೀನು ಇಸ್ಲಾಮೀ ಶರೀಅತನ್ನು ಅನುಸರಿಸಿ ನೀನು ವಾಸಿಸುವ ದೇಶದ ನಾಗರಿಕತೆಯನ್ನು ಅವಲಂಬಿಸಬಹುದು.
212. ಚಿನ್ನ–ಬೆಳ್ಳಿ ಪಾತ್ರೆಗಳಲ್ಲಿ ಆಹಾರ ತಿನ್ನಬೇಡ.
213. ನೀನು ಬಡತನಕ್ಕೆ ಭಯಪಟ್ಟು ಅಥವಾ ಅಭಿಮಾನದ ಕಾರಣ ನಿನ್ನ ಮಕ್ಕಳನ್ನು ಕೊಲ್ಲದಿರು.
214. ನೀನು ಸಾಮುದಾಯಿಕ ಕೆಲಸಗಳಲ್ಲಿ ಹೃತ್ಪೂರ್ವಕವಾಗಿ ಪ್ರಯತ್ನಿಸು.
215. ನೀನು ಅನ್ಯ ಧರ್ಮದವರ ಆರಾಧನಾಲಯಗಳನ್ನು ರಕ್ಷಿಸುವ ಕಾರ್ಯದಲ್ಲಿ ಭಾಗವಹಿಸು. ಅವರ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡದಿರು.
216. ಹೇ ಮಹಿಳೆ, ನೀನು ನಿನ್ನ ಸೌಂದರ್ಯವನ್ನು ಮರೆಮಾಡಲು ಹೊಲಿಸುವ ಬುರ್ಖಾ ಸುಂದರವಾಗದಿರಲಿ. ಏಕೆಂದರೆ ಬುರ್ಖ ಸೌಂದರ್ಯ ಮರೆಮಾಡಲಿಕ್ಕೆ ಹೊರತು ಅದು ಸ್ವತಃ ಸೌಂದರ್ಯ ಪ್ರದರ್ಶಕವಾಗಲಿಕ್ಕೆ ಅಲ್ಲ.
217. ಹೇ ಮಹಿಳೆ, ನಿನ್ನ ಬಟ್ಟೆಗಳಿಗೂ ಬುರ್ಖಕ್ಕೂ ಸುಗಂಧ ದ್ರವ್ಯ ಸವರಿ ಹೊರಗೆ ಹೋಗಬೇಡ.
218. ನೀನು ನಿನ್ನ ನಫ್ಲ್ ಮತ್ತು ಸುನ್ನತ್ ನಮಾಝ್‌ಗಳನ್ನು ನಿನ್ನ ಮನೆಗಳಲ್ಲಿ ಸಾಧ್ಯವಿರುವಾಗಲೆಲ್ಲ ಅನುಷ್ಠಿಸು. ನಿನ್ನ ಪತ್ನಿ ಮತ್ತು ಮಕ್ಕಳು ನಮಾಝ್ ಮಾಡುವ ಸರಿಯಾದ ಕ್ರಮ ಕಲಿಯಲು ಇದು ಸಹಾಯಕವಾಗುವುದು.
219. ನೀನು ಹುಡುಗಿಯರಿಗೆ ಹತ್ತು ಹನ್ನೊಂದು ವರ್ಷ ಪ್ರಾಯವಾಗುವಾಗ ಪರದೆ ಧರಿಸಲು ಹೇಳು.
220. ಮುಸ್ಲಿಮ್ ಮಹಿಳೆ ಧ್ಝಿಬ ಮಾಡಿದ ಪ್ರಾಣಿಯ ಮಾಂಸ ತಿನ್ನುವುದು ಧರ್ಮಬದ್ಧವಾಗಿದೆ. ಅದನ್ನು ತಿನ್ನು.
221. ನೀನು ಜಾತಿಯ ಬಗ್ಗೆ ತಲೆಗೆಡಿಸಬೇಡ.
222. ಯಾವ ರೀತಿ ಅತ್ಯಾಶೆ ಕೆಟ್ಟದ್ದೋ, ಅದೇ ರೀತಿ ಜಿಪುಣತನ ಕೂಡ ಕೆಟ್ಟದು.
223. ಹಿರಿಯರ ಬಗ್ಗೆ ಹೆಮ್ಮೆ ಪಡುವುದು; ಆದರೆ ಸ್ವತಃ ತಾನು ಏನೂ ಆಗದಿರುವುದು ನಾಚಿಕೆಗೇಡಾಗಿದೆ.
224. ದಾರಿ ಕೇಳುವವನಿಗೆ ನೀನು ದಾರಿ ತೋರಿಸು.
225. ಹೇ ಮಹಿಳೆ, ನೀನು ನಿನ್ನ ಹೆಣ್ಣು ಮಕ್ಕಳನ್ನು ಬಡಾವಣೆಯ ಹುಡುಗರೊಂದಿಗೆ ಆಟ ಆಡಲು ಬಿಡಬೇಡ.
226. ನೀನು ಜೀವನಾಧಾರಕ್ಕೋಸ್ಕರ ನಿಷಿದ್ಧ ಕೆಲಸ ಮಾಡಬೇಡ. ನೀಚ ಉದ್ಯೋಗ ಕೂಡ ಮಾಡಬೇಡ.
227. ನೀನು ಬಾಡಿಗೆ ಮನೆಯಲ್ಲಿದ್ದರೂ ಮನೆಯ ಸೌಂದರ್ಯ ಕೆಡಿಸದಿರು.
228. ನೀನು ನಿನ್ನ ಬಳಿ ಒಂದು ಚಾಕು, ಒಂದು ಪೆನ್ ಅಥವಾ ಪೆನ್ಸಿಲ್ ಮತ್ತು ನೋಟ್ ಬುಕ್ ಇಟ್ಟುಕೊಳ್ಳು.
229. ಹೇ ವಿದ್ಯಾರ್ಥಿ, ನೀನು ನಿನ್ನ ಕೈಗಳನ್ನೂ ಪಾಠ ಪುಸ್ತಕಗಳನ್ನೂ ಬರಹದ ಪುಸ್ತಕಗಳನ್ನೂ ಶಾಯಿಯ ಕಲೆಗಳಿಂದ ಕೆಡಿಸಬೇಡ.

230. ನೀನು ಖುತ್‌ಬ ಅಥವಾ ಭಾಷಣ ಆಲಿಸುವಾಗ ಮೌನವಾಗಿರು ಮತ್ತು ಗಮನಕೊಟ್ಟು ಆಲಿಸು ಮತ್ತು ಭಾಷಣಕಾರರ ಕಡೆಗೆ ಮುಖ ತಿರುಗಿಸು.

231. ನೀನು ನಿನ್ನ ಪುತ್ರತ್ವವನ್ನು ನಿನ್ನ ತಂದೆಯ ಹೊರತು ಬೇರೆ ಯಾರಿಗೂ ಕಲ್ಪಿಸಬೇಡ.

232. ನೀನು ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸು.

233. ನೀನು ನಿನ್ನ ಯೋಚನೆಗಳನ್ನು ಮತ್ತು ಸ್ಥಿತಿಗತಿಗಳನ್ನು ಬರೆಯಲು ಒಂದು ಡೈರಿ ಇಟ್ಟುಕೊಳ್ಳು.

234. ನೀನು ಸದಾ ಸಮಯ ಉಗುಳುತ್ತಾ ಇರುವ ಅಭ್ಯಾಸ ಮಾಡಬಾರದು.

235. ನಿನ್ನನ್ನು ಮಾತ್ರ ಔತಣಕ್ಕೆ ಕರೆದರೆ ನಿನ್ನ ಮಕ್ಕಳನ್ನು ಕರೆದುಕೊಂಡು ಹೋಗಬೇಡ.

236. ಹೇ ಮುಗ್ಧ ಬಾಲಿಕೆ, ನಿನ್ನ ಎಲ್ಲ ಪತ್ರ ವ್ಯವಹಾರಗಳು ನಿನ್ನ ತಂದೆ ತಾಯಂದಿರ ವೀಕ್ಷಣೆಯಲ್ಲಿ ನಡೆಯಬೇಕು.

237. ನಿನ್ನ ಕುಟುಂಬದಲ್ಲಿ ಮತ್ತು ನಿನ್ನಲ್ಲಿ ರೋಗಗಳು ಮತ್ತು ಬಲಹೀನತೆಗಳಿದ್ದರೆ ನೀನು ಅಂತಹ ರೋಗಗಳೂ ಬಲಹೀನತೆಗಳೂ ಇರುವ ಕುಟುಂಬದಿಂದ ವಿವಾಹವಾಗಬಾರದು.

238. ನಿನಗೆ ಒಂದಕ್ಕಿಂತ ಹೆಚ್ಚು ಪತ್ನಿಯರಿದ್ದರೆ ಅವರ ಮಧ್ಯೆ ನ್ಯಾಯಪಾಲನೆ ಮಾಡು.

239. ನೀನು ಪತ್ರ ಬರೆಯುವಾಗ ಬಿಸ್ಮಿಲ್ಲಾಹ್, ಊರಿನ ಹೆಸರು ಮತ್ತು ದಿನಾಂಕ ಬರೆಯಬೇಕು.

240. ನೀನು ಸ್ಪಷ್ಟವಾಗಿಯೂ ಸರಳವಾಗಿಯೂ ಬರೆ.

241. ನೀನು ಮೋಡಿ ಅಕ್ಷರದಲ್ಲಿ ಬರೆಯಬೇಡ. ಓದುವ ಹಾಗೆ ಬರೆ.

242. ನೀನು ಆವಶ್ಯಕ ವಿಷಯಗಳ ಬಗ್ಗೆ ಸಲಹೆ ಕೇಳುವ ಅಭ್ಯಾಸ ಹೊಂದು.

## 3. ಸಂಪತ್ತಿಗೆ ಸಂಬಂಧಿಸಿದ ವಿಷಯಗಳು

1. ನೀನು ನಿನ್ನ ಸಂಪತ್ತನ್ನು ಯಾವಾಗಲೂ ಧಾರ್ಮಿಕವಾಗಿ ಅನುಮತಿಸಲಾದ ಮತ್ತು ಪ್ರಯೋಜನಕರವಾದ ಕೆಲಸಗಳಿಗೋಸ್ಕರ ಖರ್ಚು ಮಾಡು.
2. ನೀನು ತೂಕ ಮಾಡಿಕೊಡುವಾಗ ಪೂರ್ಣವಾಗಿ ತೂಕ ಮಾಡಿಕೊಡು.
3. ಅಳೆದು ಕೊಡುವಾಗ ಪೂರ್ಣವಾಗಿ ಅಳತೆ ಮಾಡಿಕೊಡು.
4. ನೀನು ಯಾವುದಾದರೂ ವೃತ್ತಿ ಅಥವಾ ಕರಕುಶಲತೆಯನ್ನು ಅಗತ್ಯವಾಗಿ ಕಲಿಯಬೇಕು.
5. ನಿನ್ನ ಕೆಲಸಗಳಲ್ಲಿ ಅವ್ಯವಸ್ಥೆ ಮತ್ತು ತರಬೇತಿ ರಾಹಿತ್ಯವಿರಬಾರದು.
6. ನೀನು ಪತ್ರಗಳಿಗೆ ಉತ್ತರ ಬೇಗ ನೀಡಬೇಕು.
7. ನೀನು ಸಾಲ ಪಡೆಯುವುದರಿಂದ ಆದಷ್ಟು ದೂರವಿರು.
8. ನೀನು ನಿನ್ನ ಆದಾಯದ ಒಂದು ಭಾಗ ಕಾದಿರಿಸಬೇಕು.
9. ನೀನು ವ್ಯಾಪಾರದಲ್ಲಿ ಪ್ರಾಮಾಣಿಕತೆಯಿಂದಲೂ ವಿಶ್ವಾಸಾರ್ಹತೆಯಿಂದಲೂ ವರ್ತಿಸಬೇಕು.
10. ಹೇ ವ್ಯಾಪಾರಿ, ನೀನು ಜಾಹಿರಾತು ನೀಡುವಾಗ ಅತಿಶಯೋಕ್ತಿ ಬಳಸಬೇಡ.
11. ನೀನು ಮನುಷ್ಯರ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಮರೆತುಬಿಡಬೇಡ. ಎಲ್ಲ ಮನುಷ್ಯರು ಆದಮರ ಸಂತಾನವಾಗಿದ್ದು ನಿನ್ನ ಸಹೋದರ ಸಹೋದರಿಯರಾಗಿದ್ದಾರೆ.
12. ಹೇ ಹಾಲು ಮಾರಾಟಗಾರನೇ, ನೀನು ಹಾಲಿನಲ್ಲಿ ನೀರು ಸೇರಿಸದಿರು.
13. ಹೇ ವ್ಯಾಪಾರಿ, ನೀನು ಕಲಬೆರಕೆಯ ವಸ್ತುವನ್ನು ಶುದ್ಧವೆಂದು ಮಾರಾಟ ಮಾಡದಿರು.
14. ಹೇ ವ್ಯಾಪಾರಿ, ನೀನು ಕಲಬೆರಕೆಯ ತುಪ್ಪವನ್ನು ಶುದ್ಧ ತುಪ್ಪವೆಂದು ಮಾರಾಟ ಮಾಡಬೇಡ.
15. ಹೇ ವ್ಯಾಪಾರಿ, ನೀನು ಒಂದು ವಸ್ತುವಿನ ಸ್ಯಾಂಪಲ್ ಕೊಟ್ಟು ಅದಕ್ಕೆ ಬದಲಾಗಿ ಗುಣಮಟ್ಟವಿಲ್ಲದ ವಸ್ತುವನ್ನು ಕೊಡಬೇಡ.
16. ಹೇ ಕಸಬುದಾರ, ನೀನು ವಾಗ್ದಾನವನ್ನು ಈಡೇರಿಸು. ಯಾವ ದಿನ ಕೆಲಸ ಮಾಡಿಕೊಡುವುದಾಗಿ ವಾಗ್ದಾನ ಮಾಡಿರುವಿಯೋ ಆ ದಿನ ಕೆಲಸ ಮಾಡಿಕೊಡು.
17. ಹೇ ಚಿನ್ನದ ಕೆಲಸಗಾರನೇ, ನೀನು ಆಭರಣದಲ್ಲಿ ಬಂಗಾರದೊಂದಿಗೆ ಅನ್ಯ ಲೋಹವನ್ನು ಮಿಶ್ರ ಮಾಡಬೇಡ.
18. ನೀನು ಜನರ ಜಗಳದಲ್ಲಿ ಮಧ್ಯ ಪ್ರವೇಶಿಸಬೇಡ. ಆದರೆ ನಿನ್ನ ಹಸ್ತಕ್ಷೇಪದಿಂದ ರಾಜಿಯಾಗುವುದಾದರೆ ಹಾಗೆ ಮಾಡಬಹುದು.

19. ನೀನು ನಿನ್ನ ತಕ್ಕಡಿ, ತೂಕದ ಕಲ್ಲುಗಳು, ಅಳತೆಯ ಗಜ ಮತ್ತು ಅಳೆಯುವ ಪಾತ್ರೆಗಳನ್ನು ಸರಿಪಡಿಸಿಡು.
20. ನೀನು ತಿಳಿದುಕೊಂಡು ಖೋಟಾ ನಾಣ್ಯಗಳನ್ನು ಸರಿಯಾದ ನಾಣ್ಯ ಎಂದು ಚಲಾಯಿಸದಿರು.
21. ನೀನು ಶರೀಅತ್ ಪ್ರಕಾರ ಪಾಲು ನೀಡುವುದರಲ್ಲಿ ಅವ್ಯವಸ್ಥೆ ಉಂಟುಮಾಡದಿರು.
22. ನೀನು ತಾಯಿ, ಸಹೋದರಿ ಮತ್ತು ಹೆಣ್ಣು ಮಕ್ಕಳ ಪಾಲು ಶರೀಅತ್ ಪ್ರಕಾರ ಹಂಚಿಕೊಡು.
23. ನೀನು ನಿನ್ನ ಪತ್ನಿಗೆ ಮಹರ್ ಸಂತೋಷದಿಂದ ಮತ್ತು ಬೇಗನೆ ಕೊಡು.
24. ಹೇ ಸ್ತ್ರೀ, ನೀನು ಖುಲಅ್ ಎಂಬ ಅಪಮಾನದಿಂದ ನಿನ್ನನ್ನು ರಕ್ಷಿಸಿಕೊಳ್ಳು.
25. ನೀನು ನಿನ್ನ ಪತ್ನಿಗೆ ತಲಾಖ್ ನೀಡದಿರಲು ಪ್ರಯತ್ನಿಸು.
26. ನೀನು ನಿನ್ನ ಪತ್ನಿಗೆ ಹೊಡೆಯದಿರಲು ಪ್ರಯತ್ನಿಸು.
27. ನೀನು ನಿನ್ನ ಸಂಬಂಧಿಕರ ಬಗ್ಗೆ ಶ್ರದ್ಧೆ ವಹಿಸು. ಅವರಿಗೆ ಕಷ್ಟ ನೀಡದಿರು.
28. ನೀನು ಯಾವಾಗಲೂ ಆವಶ್ಯಕ ವಿಷಯಗಳಲ್ಲಿ ಸಲಹೆ ಕೇಳು.
29. ನೀನು ನಿನ್ನ ಕೆಲಸಗಳಲ್ಲಿ ಬುದ್ಧಿಯನ್ನು ಉಪಯೋಗಿಸು. ಅದರಿಂದ ಪೂರ್ಣ ಪ್ರಯೋಜನ ಪಡೆಯಲೆತ್ನಿಸು.
30. ನೀನು ಒಳ್ಳೆಯ ಮತ್ತು ಪ್ರಯೋಜನಕರವಾದ ಶಿಫಾರಸು ಮಾಡಲು ನಿರಾಕರಿಸಬೇಡ.
31. ನೀನು ಯಾವಾಗಲೂ ಪ್ರತೀಕಾರ ಮಾಡಬೇಡ; ಯಾವಾಗಲೂ ಕ್ಷಮಿಸುತ್ತಲೂ ಇರಬೇಡ.
32. ನೀನು ನಿನ್ನ ಮತವನ್ನು ಅನರ್ಹನಿಗೆ ಕೊಡಬೇಡ.
33. ವಿವಾಹದ ನಂತರ ನೀನು ನಿನ್ನ ಪತ್ನಿಯ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಹೊತ್ತಿರುವೆ.
34. ಹೇ ಪುರುಷ, ನೀನು ನಿನ್ನ ಪತ್ನಿಯ ಮೇಲ್ವಿಚಾರಕ ಮತ್ತು ರಕ್ಷಕನಾಗಿರುವೆ. ನೀನು ನಿನ್ನ ಈ ಸ್ಥಾನವನ್ನು ಕಳೆದುಕೊಳ್ಳಬೇಡ.
35. ಹೇ ಮಹಿಳೆ, ನೀನು ನಿನ್ನ ಪತಿಯನ್ನು ಅನುಸರಿಸುವವಳೂ ಅವನ ಸಂಪತ್ತು ಮತ್ತು ಗೌರವವನ್ನು ನೋಡಿಕೊಳ್ಳುವವಳೂ ಆಗಿರುವೆ.
36. ನೀನು ನಿನ್ನ ಮನೆಯನ್ನು ಪ್ರವೇಶಿಸುವಾಗ ಕೂಡ ನೀನು ಬಂದ ಬಗ್ಗೆ ತಿಳಿಸಿ ಪ್ರವೇಶಿಸು.
37. ನೀನು ಮೊಕದ್ದಮೆ ಹೂಡಿ ಅಥವಾ ಅನ್ಯಾಯದಿಂದ ಅನ್ಯರ ಸಂಪತ್ತನ್ನು ತಿನ್ನಬೇಡ.
38. ನಿನ್ನ ಲಿಖಿತ ಮರಣಶಾಸನ ನಿನ್ನ ಬಳಿ ಯಾವಾಗಲೂ ಇರಬೇಕು.
39. ನೀನು ಮೃತರನ್ನು ದೂಷಿಸಬೇಡ. ಜೀವಂತವಾಗಿರುವ ಜನರಿಗೆ ಹಾಗೆ ಮಾಡುವುದರಿಂದ ನೋವಾಗುತ್ತದೆ. ಮೃತರ ಬಗ್ಗೆ ತೀರ್ಮಾನ ಅಲ್ಲಾಹನ ಕೈಗೆ ಸೇರಿದೆ.
40. ನೀನು ಸಂಬಳ ಪಡೆಯುತ್ತಾ ಇದ್ದರೂ ನಿನ್ನ ಯಜಮಾನನ ಕೆಲಸಕ್ಕೆ ನೀನು ಪೂರ್ಣ ಶ್ರದ್ಧೆ ನೀಡುವುದಿಲ್ಲವಾದರೆ ನೀನು ತಪ್ಪುಗಾರನಾಗುವೆ.
41. ನೀನು ನಿಷಿದ್ಧ ವಸ್ತುಗಳ ವ್ಯಾಪಾರ ಮಾಡಬಾರದು.
42. ನೀನು ಟಿಕೇಟು ರಹಿತ ಪ್ರಯಾಣ ಮಾಡಬಾರದು.
43. ಪ್ಲಾಟ್‌ಫಾರ್ಮ ಟಿಕೇಟು ದೊರೆಯುವುದಾದರೆ ಅದನ್ನು ಖರೀದಿಸಿ ಅಥವಾ ಬೇರೆ ಕಡೆ ಸ್ಟೇಶನ್ ಮಾಸ್ಟರರ ಅನುಮತಿ ಪಡೆದು ರೈಲ್ವೇ ಸ್ಟೇಷನ್‌ಗೆ ಪ್ರವೇಶಿಸು.
44. ನೀನು ಪ್ರಯಾಣಕ್ಕೆ ಹೊರಡುವಾಗ ಎಲ್ಲ ವಸ್ತುಗಳ ಮೇಲೆ ನಿನ್ನ ಮತ್ತು ಸ್ಥಳದ ಹೆಸರು ಬರೆದು ಚೀಟಿ ಅಂಟಿಸಿ ವಸ್ತುಗಳನ್ನು ಎಣಿಸಿ ನೋಟ್‌ಬುಕ್‌ನಲ್ಲಿ ಬರೆದಿಡು.
45. ನೀನು ರೈಲ್ವೇ ಸ್ಟೇಶನ್‌ನಲ್ಲಿ ಪೋರ್ಟರನಿಗೆ ನಿನ್ನ ಸಾಮಗ್ರಿ ಹೊರಲು ಕೊಡುವಾಗ ಅವನ ನಂಬರನ್ನು ಆವಶ್ಯಕವಾಗಿ ನೋಡು.
46. ಹೇ ಸರಕಾರಿ ನೌಕರ, ನೀನು ಸರಕಾರಿ ಸಾಮಗ್ರಿಗಳನ್ನು ನಿನ್ನ ಸ್ವಂತ ಉಪಯೋಗಕ್ಕೆ ಬಳಸಬೇಡ.
47. ನೀನು ಸರಕಾರಿ ನೌಕರನಿಂದ ನಿನ್ನ ಸ್ವಂತ ಕೆಲಸ ಮಾಡಿಸಬೇಡ. ನಿನಗೆ ಅದಕ್ಕೆ ಅಧಿಕಾರವಿದ್ದರೆ ನಿನಗೆ ಮಾಡಿಕೊಟ್ಟ ನಿನ್ನ ಸ್ವಂತ ಕೆಲಸಕ್ಕೆ ಕೆಲಸ ಮಾಡಿದವನಿಗೆ ಪ್ರತಿಫಲ ನೀಡು.
48. ನೀನು ರೈಲು ಬಂಡಿಯ ಕೆಳ ತರಗತಿಯ ಟಿಕೇಟು ಪಡೆದು ಮೇಲಿನ ತರಗತಿಯಲ್ಲಿ ಪ್ರಯಾಣ ಮಾಡಬೇಡ. ಹಾಗೆ ಪ್ರಯಾಣ ಮಾಡಲು ನಿರ್ಬಂಧಿತನಾದರೆ ಹೆಚ್ಚುವರಿ ಹಣವನ್ನು ಪಾವತಿ ಮಾಡು.
49. ರೈಲು ಬಂಡಿ ಪ್ರಯಾಣ ಮಾಡುವಾಗ ಹನ್ನೆರಡು ವರ್ಷಕ್ಕಿಂತ ಮೇಲಿನ ಪ್ರಾಯದ ಮಕ್ಕಳಿಗೆ ಪೂರ್ಣ ಟಿಕೇಟು ಖರೀದಿಸು.

50. ರೈಲು ಬಂಡಿಯಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಮಗುವಿಗೂ ಅರ್ಧ ಟಿಕೇಟು ಖರೀದಿಸು.
51. ನೀನು ಜನರೊಂದಿಗೆ ಮತ್ತು ದೇವನೊಂದಿಗೆ ನಿನ್ನ ಸಾಂಪತ್ತಿಕ ವ್ಯವಹಾರ ಶುದ್ಧವಾಗಿರಿಸು.
52. ನೀನು ಎಂದಿಗೂ ಬಾಕೀದಾರನಾಗಬೇಡ. ನೀನು ಜನರ ಹಕ್ಕುಗಳನ್ನು ಕೊಡುವುದರಲ್ಲಿ ತೀವ್ರ ನಿಷ್ಠೆಯುಳ್ಳವನಾಗು.
53. ನೀನು ಜನರಿಂದ ನಿನ್ನ ಹಕ್ಕುಗಳನ್ನು ವಸೂಲಿ ಮಾಡುವಾಗ ಮೃದುವಾಗಿ ವರ್ತಿಸು.
54. ನಿನಗೆ ಸಾಲಕೊಡುವ ಅಂಗಡಿ ವ್ಯಾಪಾರಿಯ ಸಾಲವನ್ನು ಬೇಗನೆ ಅಥವಾ ತಿಂಗಳಿಗೊಮ್ಮೆ ತೀರಿಸಿಕೊಡು.
55. ನೀನು ಜಮಾಅತಿನ ಚಂದಾ ಹಣ ನಿಗದಿತ ರೀತಿಯಲ್ಲಿ ಕ್ರಮಬದ್ಧವಾಗಿ ಕೊಡು.
56. ನೀನು ಪ್ರಯಾಣ ಮಾಡುವಾಗ ನಿನ್ನ ಕೈಯಲ್ಲಿ ಎಷ್ಟು ಹಣವಿದೆ, ಅದನ್ನು ಎಲ್ಲಿ ಇರಿಸಿರುವೆ ಎಂದು ಯಾರೊಂದಿಗೂ ಹೇಳಬೇಡ.
57. ಹೇ ಮಹಿಳೆ, ನೀನು ನಿನ್ನ ಪತಿಯಿಂದ ಅವನ ಸಾಮರ್ಥ್ಯಕ್ಕಿಂತ ಹೆಚ್ಚಿಗೆ ಆವಶ್ಯಪಡದಿರು.
58. ಹೇ ಮಹಿಳೆ, ನೀನು ನಿನ್ನ ಪತಿಯ ಹಣವನ್ನು ಅವನ ಅನುಮತಿ ಇಲ್ಲದೆ ಖರ್ಚು ಮಾಡಬೇಡ. (ಇಸ್ಲಾಮೀ ಶರೀಅತ್‌ಗೆ ಅನುಗುಣವಾಗಿ ಅತ್ಯಾವಶ್ಯಕ ಸಂದರ್ಭಗಳಲ್ಲಿ ಹೊರತು).
59. ನೀನು ಕಾರ್ಮಿಕನ ಕೂಲಿ ಅವನ ಬೆವರು ಆರಿ ಹೋಗುವ ಮೊದಲು ಕೊಡು ಅಥವಾ ಅವನೊಂದಿಗೆ ಒಪ್ಪಂದ ಮಾಡಿದ ಹಾಗೆ ಕೊಡು.
60. ನೀನು ಇನ್‌ಕಮ್ ಟ್ಯಾಕ್ಸ್, ಜಮಾಅತಿನ ಚಂದಾ, ಝಕಾತ್, ವಸಿಯ್ಯತ್ ಚಂದಾ ಇವುಗಳಿಂದ ರಕ್ಷಣೆ ಪಡೆಯಲು ನಿನ್ನ ಆದಾಯವನ್ನು ಮುಚ್ಚಿಡಬೇಡ.
61. ನಿನ್ನ ಜೇಬುಗಳನ್ನು ಕಳ್ಳರಿಂದ ಸುರಕ್ಷಿತವಾಗಿರಿಸು – ಪೋಸ್ಟ್ ಆಫೀಸ್ ಮತ್ತು ಟಿಕೇಟು ನೀಡುವ ಸ್ಥಳಗಳಲ್ಲಿ ವಿಶಿಷ್ಟವಾಗಿ.
62. ವ್ಯಕ್ತಿಗಳ ಹಾಗೆ ಸರಕಾರಗಳೂ ಸಂಸ್ಥೆಗಳೂ ಒಪ್ಪಂದಗಳಿಗೆ ಬದ್ಧವಾಗಿವೆ ಎಂದು ನೆನಪಿಡು.
63. ನೀನು ಕೊಡು ಕೊಳ್ಳುವಿಕೆಯ ವ್ಯವಹಾರದಲ್ಲಿ ಯಾವುದೇ ರೀತಿಯಲ್ಲಿ ವಂಚಿಸಬೇಡ.
64. ನೀನು ನಿನ್ನ ಸಂಪತ್ತಿನಿಂದ ಒಂದು ಭಾಗ ಬಹಿರಂಗವಾಗಿಯೂ ಇನ್ನೊಂದು ಭಾಗ ರಹಸ್ಯವಾಗಿಯೂ ಖರ್ಚು ಮಾಡು.
65. ನೀನು ಸಾಲ ಪಡಕೊಂಡರೆ ವಾಗ್ದಾನ ಪ್ರಕಾರ ಸಂತೋಷದಿಂದ ಮರುಪಾವತಿ ಮಾಡು.
66. ನೀನು ಅನಾಥನ ಸಂಪತ್ತನ್ನು ತಿನ್ನಬೇಡ. ಆದರೆ ನೀನು ಬಡವನಾಗಿದ್ದರೆ ನೀನು ಅನಾಥನ ಮೇಲ್ವಿಚಾರಣೆಗೆ ನಿನಗೆ ಆವಶ್ಯಕವಾದ ಸೇವಾಧನ ಪಡೆಯಬಹುದು.
67. ನೀನು ಬಡವರಿಗೆ ದಾನಧರ್ಮ ನೀಡಬೇಕು. ಆದರೆ ನೀನು ದಾನ ನೀಡಿದ ನಂತರ ದಾನ ಪಡೆದವರನ್ನು ಕಷ್ಟಕ್ಕೆ ಗುರಿಪಡಿಸಬಾರದು.
68. ನೀನು ಕೊಳಕು, ಹರಕು, ಸಾಮಗ್ರಿಗಳನ್ನು ದಾನವಾಗಿ ಕೊಡಬಾರದು.
69. ನೀನು ಶಬೇ ಬರಾತ್ ರಾತ್ರಿ ಪಟಾಕಿ ಸುಡಬೇಡ.
70. ನೀನು ಬಡ್ಡಿಯನ್ನು ನಿಷಿದ್ಧವೆಂದು ಗಣಿಸು.
71. ನೀನು ವ್ಯಾಪಾರಿಯಾಗಿದ್ದರೆ, ನಿಷಿದ್ಧ ಮತ್ತು ಧರ್ಮಬದ್ಧ ವ್ಯಾಪಾರಗಳ ಬಗ್ಗೆ ತಿಳಿಯುವುದು ಆವಶ್ಯಕವಾಗಿದೆ.
72. ನೀನು ಮುಂದೆ ಕಳುಹಿಸಿದ ಸಂಪತ್ತೇ ನಿನ್ನದು. ಉಳಿದುದೆಲ್ಲವು ನಿನ್ನ ವಾರಸುದಾರರದು.
73. ನೀನು ಐಶ್ವರ್ಯವಂತನಾಗಿದ್ದರೆ ನಿನ್ನ ಆದಾಯ ಖರ್ಚು ವೆಚ್ಚಗಳ ಮಾಸಿಕ ಅಥವಾ ವಾರ್ಷಿಕ ಬಜೆಟ್ ರಚಿಸು.
74. ನೀನು ನಿನ್ನ ಸಂಪತ್ತು ಮತ್ತು ಬೆಲೆಬಾಳುವ ವಸ್ತುಗಳನ್ನು ಸುರಕ್ಷಿತ ಸ್ಥಳದಲ್ಲಿ ಇಡು.
75. ಹೇ ಕೆಲಸಗಾರ, ನೀನು ನಿನ್ನ ಯಜಮಾನನ ವ್ಯಾಪರ ಸಾಮಗ್ರಿಯಿಂದ ಕದಿಯಬೇಡ.
76. ನೀನು ಜುಗಾರಿ ಆಡಬೇಡ.
77. ನೀನು ಮದುವೆ ಮತ್ತು ಮರಣದ ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಹಣ ಖರ್ಚು ಮಾಡಬೇಡ.
78. ಹೇ ಮಹಿಳೆ, ನೀನು ನಿನ್ನ ಮನೆ ಖರ್ಚು ಒಂದು ಪುಸ್ತಕದಲ್ಲಿ ಬರೆದಿಡು.
79. ಹೇ ವ್ಯಾಪಾರಿ, ನೀನು ನಿನ್ನ ಸರಕಿಗೆ ಹೇಳುವ ಬೆಲೆ ಪರಿಚಯಸ್ಥರಿಗೂ ಆಗಂತುಕರಿಗೂ ಚಿಕ್ಕವರಿಗೂ ದೊಡ್ಡವರಿಗೂ ಒಂದೇ ಆಗಿರಲಿ.
80. ನೀನು ಪಂಥ ಕಟ್ಟಬೇಡ.

* * * * *

# ಅಫ್‌ಘಾನಿಸ್ಥಾನ, ಭಾಗ್ಯಹೀನ ದೇಶ

* ಅಬ್ದುರ್ರಹ್ಮಾನ್, ಕೊಡಿಯತ್ತೂರ್

**ಸುಮಾರು 120 ವರ್ಷ ಮುಂಚೆ ಅಫ್‌ಘಾನ್ ಜನತೆಯನ್ನು ಅಭಿಸಂಬೋಧಿಸಿ, ಜಿಹಾದಿ ಆವೇಶ ತ್ಯಜಿಸಿ ಸ್ವಯಂ ಒಂದು ಪರಿವರ್ತನೆ ಮಾಡಬೇಕೆಂದು ವಾಗ್ದತ್ತ ಮಸೀಹ್ ಮಾಡಿದ ಹೃದಯಸ್ಪರ್ಶಿ ಅಭ್ಯರ್ಥನೆಯ ಬದಲಿಗೆ ತನ್ನ ಇಬ್ಬರು ಶಿಷ್ಯರನ್ನು ಆ ಜನತೆ ವಧಿಸಿಬಿಟ್ಟಿತು. ಅಫ್‌ಘಾನಿಗಳ ನಿಯತ ವಿಧಿಯನ್ನು ವಾಗ್ದತ್ತ ಮಸೀಹರು(ಅ) ಮುಂದಾಗಿ ಕಂಡಿದ್ದರು.**

ಭೀಕರತೆ ಮತ್ತು ಯುದ್ಧದ ಪರಿಣಾಮವಾಗಿ ಭೂಮಿಯ ನರಕವಾಗಿಬಿಟ್ಟ ಅಫ್‌ಘಾನ್ ಮತ್ತು ಅಫ್‌ಘಾನ್ ವಂಶಜರು ಹೆಚ್ಚಿನಾಂಶವಿರುವ ಪಾಕಿಸ್ತಾನದ ಗಡಿ ಪ್ರದೇಶದವರನ್ನು ಸಂಬೋಧಿಸಿ ವಾಗ್ದತ್ತ ಮಸೀಹ್(ಅ) ಸುಮಾರು 120 ವರ್ಷ ಮುಂಚೆ ನೀಡಿದ ಉಪದೇಶಗಳೂ ಮುನ್ನೆಚ್ಚರಿಕೆಗಳೂ ವಿಸ್ಮಯಕರವಾಗಿವೆ. ಅಮುಸ್ಲಿಂ ಎಂಬ ಕಾರಣದಿಂದ ಪೇಶಾವರದಲ್ಲಿ ಇಬ್ಬರು ಯುರೋಪಿಯನ್ನರನ್ನು ಧರ್ಮಾಂಧ ಪಠಾನರು ನಿಷ್ಠುರವಾಗಿ ಕೊಲೆಮಾಡಿದ ವಾರ್ತೆ ತಿಳಿದಾಗ ಆ ಮಹಾತ್ಮರು "ಜಿಹಾದ್" ಎಂಬ ಹೆಸರಿನಲ್ಲಿ ಒಂದು ಕಿರುಹೊತ್ತಗೆ ರಚಿಸಿದರು.

ಆ ಪುಸ್ತಕದಲ್ಲಿ ಕಾಬೂಲ್ ಅಮೀರನನ್ನು ಸಂಬೋಧಿಸಿ ಅವರು ಹೀಗೆ ಹೇಳಿದರು:

**"ಜಿಹಾದ್ ಎಂಬ ಹೆಸರಿನಲ್ಲಿ ಅನ್ಯಧರ್ಮೀಯರ ಮೇಲೆ ಆಕ್ರಮಣ ಎಂಬ ಮುಸ್ಲಿಂಗಳಲ್ಲಿ ಕಂಡುಬರುವ ಇಂದಿನ ಮನೋಭಾವ 'ಶರಈ' (ನಿಯಮಬದ್ಧ) ಜಿಹಾದ್ ಅಲ್ಲ; ಬದಲಿಗೆ, ಅಲ್ಲಾಹ್ ಮತ್ತು ಪ್ರವಾದಿಯ ಆಜ್ಞೆಗಳಿಗೆ ವಿರುದ್ಧವಾದ ವರ್ತನೆ ಮತ್ತು ಕಡು ಪಾತಕವಾಗಿದೆ. ಆದರೆ ಈ ಸಂಪ್ರದಾಯಕ್ಕೆ ಅಂಟಿಕೊಂಡಿರುವ ಕೆಲವು ಮುಸ್ಲಿಂ ರಾಷ್ಟ್ರಗಳು ಇದನ್ನು ಒಂದು ಹಳೆಯ ಅಭ್ಯಾಸ ಮಾಡಿಬಿಟ್ಟಿರುವುದರಿಂದ ಅದನ್ನು ಬೇಗನೆ ತ್ಯಜಿಸಲು ಸಾಧ್ಯವಿಲ್ಲ. ಆದರೆ ಅಂತಹ ಉಪದೇಶ ನೀಡುವವರನ್ನು ತಮ್ಮ ಶತ್ರುವೆಂದು ಭಾವಿಸಿ ಯುದ್ಧಾವೇಶದಿಂದ ಆತನ ಜೀವಹಾನಿ ಮಾಡಲು ಸಿದ್ಧರಾಗಬಹುದು. ಆದರೆ ನಾನು ಆಲೋಚಿಸುತ್ತಿದ್ದೇನೆ – ಪೂರ್ವಕಾಲದ ಅಫ್‌ಘಾನ್ ಅಮೀರುಗಳಲ್ಲಿ ಗೋಚರವಾಗದ ರೀತಿಯಲ್ಲಿ ಅಫ್‌ಘಾನಿಗಳಲ್ಲಿ ಪ್ರಭಾವ ಬೀರುತ್ತಿರುವ ಹೀಗಿನ ಕಾಬೂಲ್ ಅಧಿಪತಿಯಾದ ಅಮೀರ್ ಪ್ರಸಿದ್ಧ ಧರ್ಮ ಪಂಡಿತರನ್ನು ಕರೆಸಿ ಈ ಜಿಹಾದ್ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿ, ನಂತರ ಉಲಮಾಗಳ ಮುಖಾಂತರವೇ ಸಾಮಾನ್ಯ ಜನರನ್ನು ಅವರ ತಪ್ಪುಗಳ ಬಗ್ಗೆ ಎಚ್ಚರಿಸಬೇಕಾಗಿದೆ. ಅದರೊಂದಿಗೆ ಈ ರಾಜ್ಯಗಳ ಧರ್ಮಪಂಡಿತರು 'ಪುಶ್ತು' ಭಾಷೆಯಲ್ಲಿ ಕೆಲವು ಪುಸ್ತಕಗಳನ್ನು ಸಿದ್ಧಪಡಿಸಿ ವಿಪುಲವಾಗಿ ಪ್ರಸಿದ್ಧಿಸಿದರೆ ಇಂತಹ ವರ್ತನೆಗಳು ಜನರಲ್ಲಿ ಸತ್ಫಲಗಳನ್ನು ಸೃಷ್ಟಿಸುವುದು..... ಅತ್ಯಂತ ಪ್ರಧಾನವಾದ ಈ ಪರಿಷ್ಕರಣ ಕಾರ್ಯಕ್ಕೋಸ್ಕರ ಅಮೀರ್ ಗಮನಿಸದಿದ್ದರೆ ಮುಲ್ಲಾಗಳ ಇಂತಹ ಫತ್ವಗಳ ಬಗ್ಗೆ ಮೌನ ಅವಲಂಬಿಸುವುದರ ಅಂತ್ಯ ಫಲಗಳು ಸರಕಾರಕ್ಕೇ ದೊಡ್ಡ ಕಷ್ಟನಷ್ಟಗಳನ್ನು ಉಂಟುಮಾಡುವುದು."** (ಜಿಹಾದ್ ಪುಟ 37).

ಈ ಪುಸ್ತಕದಲ್ಲಿ ಬಹಳ ವಿಶದವಾಗಿಯೇ ಮುಲ್ಲಾಗಳ ಮತ್ತು ಪಾಮರ ಜನರ ಈ ತಪ್ಪಾದ ಜಿಹಾದಿ ಕಲ್ಪನೆಯ ದೋಷಗಳ ಸಂಬಂಧಿಸಿ ವಿವರಿಸುತ್ತಾ ಇದರಿಂದ ಜನರನ್ನು ಹಿಂದೆ ಸರಿಸಲು ಅಮೀರನ ಕಡೆಯಿಂದ ಪ್ರಯತ್ನಗಳುಂಟಾಗದಿದ್ದರೆ ಸ್ವತಃ ಅಮೀರನಿಗೂ ಅದರ ದೋಷಫಲಗಳನ್ನು ಅನುಭವಿಸಬೇಕಾದೀತೆಂದೂ ಕೊನೆಗೆ ಪ್ರಳಯದ ದೃಶ್ಯಗಳನ್ನು ಕಾಣಬೇಕಾಗುವುದೆಂದೂ ತಾಕೀತು ಮಾಡಿದ್ದರು. ವಾಗ್ದತ್ತ ಮಸೀಹರ ಅನೇಕ ಪುಸ್ತಕಗಳಲ್ಲಿ ಜಿಹಾದಿಗೆ ಸಂಬಂಧಿಸಿ ಇಸ್ಲಾಮಿಕ ಪಾಠಗಳನ್ನು ವಿವರಿಸಿ ಜಿಹಾದಿನ ಹೆಸರಿನಲ್ಲಿ ನಡೆಯುತ್ತಿರುವ ರಕ್ತಪಾತವನ್ನು ಕೊನೆಗೊಳಿಸಬೇಕೆಂದು ಉಪದೇಶಿಸಿದ್ದಾರೆ.

"ದುರ್ರೆಸಮೀನ್" ಎಂಬ ಕವಿತಾ ಪುಸ್ತಕದಲ್ಲಿ ಅವರು ನೀಡಿದ ತಾಕೀತು ನೋಡಿರಿ:

**"ನನ್ನ ಈ ಉಪದೇಶ ಶ್ರವಿಸಿದ ನಂತರ ಕೂಡ ಯುದ್ಧಕ್ಕೆ ಹೋಗುವವರಿಗೆ ಅವಿಶ್ವಾಸಿಗಳ ಕೈಗಳಿಂದ ಕಠಿಣ ತರದ ನೋವನ್ನು ಸಹಿಸಬೇಕಾಗಿ ಬರಬಹುದು..... ನೀವು ಅವರಿಗೆ ಮನಗಾಣಿಸಿ ಕೊಡಿರಿ. ಇದು ಮಸೀಹರ ಕಾಲವಾಗಿದೆ; ಯುದ್ಧದ ಕಾಲವಲ್ಲ. ಇನ್ನೂ ಅವರು ಮನವರಿಕೆ ಮಾಡುವುದಿಲ್ಲವಾದರೆ ಅಲ್ಲಾಹು ಅವರಿಗೆ ಮನಗಾಣಿಸಿಕೊಡುವನು."** (ದುರ್ರೆಸಮೀನ್).

ಖೇದಕರವೇನೆಂದರೆ, ಅವರು ಹಝ್ರತ್ ಅಹ್ಮದ್(ಅ) ಅವರ ನಿಷ್ಕಳಂಕವಾದ ಉಪದೇಶಗಳನ್ನೂ ಗೌರವಪೂರ್ಣವಾದ ಮುನ್ನೆಚ್ಚರಿಕೆಗಳನ್ನೂ ಕೇಳುವುದಕ್ಕೆ ಬದಲು ಅವರನ್ನು ಮತ್ತು ಅವರ ಶಿಷ್ಯಂದಿರನ್ನು ಶತ್ರುಗಳೆಂದು ಬಗೆದು ಅವರ ವಿರುದ್ಧ ದುಷ್ಕೃತ್ಯಗಳನ್ನು ಜಾರಿಗೊಳಿಸಿ ತಮ್ಮ ಹುಚ್ಚುತನದಲ್ಲಿ ಮುನ್ನೇರಿದರು. ಜಿಹಾದನ್ನು ನಿರ್ಬಲಗೊಳಿಸಿದ ಮಸೀಹರನ್ನು ನಂಬಿದ ತಪ್ಪು ಹೊರಿಸಿ ಅಫ್‌ಘಾನದಲ್ಲಿ ಸಾವಿರಗಟ್ಟಲೆ ಶಿಷ್ಯಂದಿರಿದ್ದ ವ್ಯಕ್ತಿಯೂ ಅಫ್‌ಘಾನ್ ರಾಜನ ಅರಮನೆಯಲ್ಲಿ ಆದರಣೀಯನೂ ರಾಜನ ಕಿರೀಟಧಾರಣೆ ಕಾರ್ಮಿಕತ್ವ ವಹಿಸುವ ಮಹಾನ್ ವ್ಯಕ್ತಿಯೂ ಆಗಿದ್ದ ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬರನ್ನು ಕಾಬೂಲ್‌ನ ಮಣ್ಣಿನಲ್ಲಿ ಅಮೀರ್ ಹಬೀಬುಲ್ಲಾ ಖಾನ್, ಮುಫ್ತಿಗಳು ಮತ್ತು ಪರಿವಾರಗಳು ಸೇರಿ 10-9-1901ರಂದು ಕಲ್ಲೆಸೆದು ಕೊಂದರು. ಈ ನಿಷ್ಠುರ ಕೃತ್ಯ ವಾಗ್ದತ್ತ ಮಸೀಹರಿಗೆ ಅತ್ಯಂತ ನೋವುಂಟುಮಾಡಿತು. "ತದ್‌ಕಿರತುಶ್ಶಹಾದತೈನ್" ಎಂಬ ಗ್ರಂಥದಲ್ಲಿ ಅವರು ಹೀಗೆ ಬರೆದರು:

**"ಸಾಹಿಬ್‌ಝಾದ ಅಬ್ದುಲ್ಲತೀಫ್‌ರಿಗೆ ವಿಧಿಸಲಾದ ಹುತಾತ್ಮತೆ ಹಾಗೆ ಘಟಿಸಿತು. ಇನ್ನು ದ್ರೋಹಿಗಿರುವ ಪ್ರತಿಕ್ರಿಯೆ ಬಾಕಿಯಿದೆ." ಪುನಃ ಅವರು ಹೇಳುತ್ತಾರೆ: "ಈ ಕೊಲೆ ಅತ್ಯಂತ ನಿಷ್ಕರುಣೆಯಿಂದ ಮಾಡಲ್ಪಟ್ಟಿದೆ. ಆಕಾಶದ ಕೆಳಗೆ ಈ ಕೊಲೆಗೆ ತುಲ್ಯವಾದ ಬೇರೊಂದು ಘಟನೆಯನ್ನು ಕಾಣಲು ಸಾಧ್ಯವಿಲ್ಲ. ಹಾ ಕಷ್ಟ ! ಅವಿವೇಕಿಯಾದ ಅಮೀರ್ ಎಂತಹ ಕೃತ್ಯವನ್ನು ಮಾಡಿಬಿಟ್ಟನು! ಒಬ್ಬ ಪರಮ ನಿರಪರಾಧಿಯಾದ ವ್ಯಕ್ತಿಯನ್ನು ಅಸಾಮಾನ್ಯ ನಿರ್ದಯೆಯಿಂದ**

**ಕೊಂದುಬಿಟ್ಟು ಆತನು ಸ್ವಯಂ ನಾಶಕ್ಕೆ ಈಡಾಗಿದ್ದಾನೆ. ಹೇ ಕಾಬೂಲ್ ಭೂ ಪ್ರದೇಶವೇ, ನೀನು ಸಾಕ್ಷಿಯಾಗು. ನಿನ್ನ ಪ್ರದೇಶದಲ್ಲಿ ಈ ಮಹಾಪಾತಕ ನಡೆಸಲ್ಪಟ್ಟಿದೆ. ಹೇ ಭಾಗ್ಯಹೀನ ಭೂಪ್ರದೇಶವೇ, ದೇವದೃಷ್ಟಿಯಲ್ಲಿ ನೀನು ನಿಂದ್ಯನಾಗಿರುವೆ. ಈ ಮಹಾ ಪಾತಕದ ಕ್ರಿಯಾ ವೇದಿಕೆ ನಿನ್ನ ನೆಲವಷ್ಟೇ !"** (ತದ್‌ಕಿರತುಶಹಾದತೈನ್ ಪುಟ 74).

ಅಲ್ಲಾಹನ ಸತ್ಯದೂತನ ಶಾಪಕ್ಕೆ ಗುರಿಯಾದ ಅಫ್‌ಘಾನ್ ಮಣ್ಣಿಗೂ ಜಿಹಾದ್ ಬಗ್ಗೆ ಆ ಮಹಾತ್ಮರ ಪಾಠಗಳನ್ನು ಅವಗಣಿಸಿದ ಮುಸ್ಲಿಂ ಸಮುದಾಯಕ್ಕೂ ಏನು ಸಂಭವಿಸಿತು ಎಂದು 120 ವರ್ಷಗಳ ಚರಿತ್ರೆ ನಮ್ಮ ಮುಂದೆ ಸಾಕ್ಷ್ಯವಹಿಸುತ್ತದೆ. ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬರ ವಧೆ ನಡೆದ ಮರುದಿನವೇ ಒಂದು ಅದ್ಭುತ ದೃಷ್ಟಾಂತವೆಂಬಂತೆ ದೇಶದ ಹಲವೆಡೆಗಳಲ್ಲಿ ಬಲವಾದ ಬಿರುಗಾಳಿ ಬೀಸಿತು. ನಂತರ ಕಾಬೂಲ್ ನಗರದಲ್ಲಿ ಕಾಲರಾ ಹರಡಿ ಅನೇಕ ಮಂದಿ ಮೃತರಾದರು. ರಾಜ ಕುಟುಂಬದ ಹಲವು ಪ್ರಮುಖರು ಮಾತ್ರವಲ್ಲ, ಅಬ್ದುಲ್ಲತೀಫ್ ಸಾಹಿಬರ ವಿರುದ್ಧ ಅಪರಾಧ ವಿಧಿಸಿದ ಮುಫ್ತಿಗಳಲ್ಲಿ ಕೆಲವರು ಕಾಲರಾ ರೋಗಕ್ಕೆ ಬಲಿಯಾದರು. ಅಮೀರ್ ಹಬೀಬುಲ್ಲಾಹ್ ಖಾನ್ 1919 ಫೆಬ್ರವರಿ 20ರಂದು ಗುಂಡಿನೇಟಿನಿಂದ ಕೊಲ್ಲಲ್ಪಟ್ಟನು. ಅನಂತರ ಇಂದಿನ ತನಕದ ಅಫ್‌ಘಾನಿಸ್ಥಾನದ ಚರಿತ್ರೆ ರಕ್ತಪಾತ ಮತ್ತು ಗಲಭೆ ಗೊಂದಲಗಳಿಂದ ಕೂಡಿದೆ. ಅಧಿಕಾರದಲ್ಲಿ ಕುಳಿತ ಆಡಳಿತಾಧಿಕಾರಿಗಳೆಲ್ಲರೂ ಸ್ಥಾನಭ್ರಷ್ಟಮಾಡಲ್ಪಟ್ಟರು ಅಥವಾ ಕೊಲ್ಲಲ್ಪಟ್ಟರು.

ದುಃಖಕರವಾದ ಸತ್ಯವೇನೆಂದರೆ, ಇದನ್ನೆಲ್ಲ ಕಂಡರೂ ಇಂತಹ ಒಂದು ಸ್ಥಿತಿಯ ಕುರಿತು ದೈವಿಕ ಜ್ಞಾನದಿಂದ ಮುನ್ನೆಚ್ಚರಿಕೆ ನೀಡಿದ ವಾಗ್ದತ್ತ ಮಸೀಹರ ಸಂಬಂಧಿಸಿ ತಿಳಿದುಕೊಳ್ಳಲು ಈ ಜನತೆ ಬಯಸುವುದಿಲ್ಲ ಎಂಬುದಾಗಿದೆ.

"ನನ್ನ ಮಾತುಗಳನ್ನು ಶ್ರವಿಸಿದ ನಂತರ ಕೂಡ ಯುದ್ಧಕ್ಕೆ ಹೋಗುವವರಿಗೆ ಅವಿಶ್ವಾಸಿಗಳ ಕೈಗಳಿಂದ ಕಠಿಣತರವಾದ ನೋವನ್ನು ಸಹಿಸಬೇಕಾಗುವುದು" ಎಂಬ ವಾಗ್ದತ್ತ ಮಸೀಹರ ಮುನ್ನೆಚ್ಚರಿಕೆ ಇಲ್ಲೆಲ್ಲ ಸತ್ಯವಾಗಿ ಪರಿಣಮಿಸುತ್ತಿದೆ.

ಸಂಕ್ಷಿಪ್ತವಾಗಿ, ವಾಗ್ದತ್ತ ಮಸೀಹ್ ಹಝ್ರತ್ ಅಹ್ಮದ್(ಅ) ಅವರ ಸ್ಪಷ್ಟವಾದ ಅಧ್ಯಾಪನೆಗಳ ಕಡೆಗೆ ಮರಳಬೇಕಲ್ಲದೆ ಮನುಷ್ಯರಾಶಿಗೆ ಈ ಅಗ್ನಿಕುಂಡದಿಂದ ಪಾರಾಗಲು ಬೇರೊಂದು ಮಾರ್ಗವಿಲ್ಲ ಎಂಬುದು ಸತ್ಯಾಂಶವಾಗಿದೆ. ದುರಂತಗಳಲ್ಲಿ ಮುಳುಗುತ್ತಿರುವ ಮುಸ್ಲಿಂ ಸಹೋದರರ ಮುಂದೆ ವಾಗ್ದತ್ತ ಮಸೀಹರ, "ನನ್ನ ಈ ಉಪದೇಶವನ್ನು ಶ್ರವಿಸಿದ ನಂತರ ಕೂಡ ಯುದ್ಧಕ್ಕೆ ಹೋಗುವವರಿಗೆ ಅವಿಶ್ವಾಸಿಗಳ ಕೈಗಳಿಂದ ಕಠಿಣತರವಾದ ನೋವನ್ನು ಸಹಿಸಬೇಕಾಗುವುದು" ಎಂಬ ಭವಿಷ್ಯ ನುಡಿಯನ್ನು ಉಲ್ಲೇಖಿಸುತ್ತಾ ಈ ಲೇಖನವನ್ನು ಕೊನೆಗೊಳಿಸುತ್ತೇನೆ.

♦

**ಪ್ರತಿಭೆಗಳು**



ಮೌಲವಿ ಇನಾಮುಲ್ಲಾಹ್ ಮತ್ತು ತಹ್‌ಲಿಯ ಜಾಸ್ಮಿನ್ ದಂಪತಿಯ ಪುತ್ರಿ ಶಾಫಿಯ ಮಸ್ರೂರ್ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) ತನ್ನ 6ನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಪೂರ್ಣವಾಗಿ ಓದಿ ಮುಗಿಸಿದ್ದಾಳೆ – ಮಾಶಾಅಲ್ಲಾಹ್.

==========================================================






ಪಯಂಗಾಡಿ ಜಮಾಅತಿನ ಸಿ. ಶಫೀಕ್ ಅಹ್ಮದ್ ಮತ್ತು ಮಂಗಳೂರಿನ ಫಾತಿಮತ್ ಝುಹ್ರ ದಂಪತಿಯ ಪುತ್ರಿ ಶಹಾಮಾ ಪರ್ವೀನ್ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) ಪಯಂಗಾಡಿ ಜಮಾಅತಿನ ಬೆಸ್ಟ್ ನಾಸಿರಾತ್ ಪದಕವನ್ನು ಗಳಿಸಿದ್ದಾಳೆ – ಮಾಶಾಅಲ್ಲಾಹ್.

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

1. **ಜ| ತಸ್ಲೀಮ್ ಆರಿಫ್ ಸಾಹಿಬ್, ಮಂಗಳೂರು. ರೂ. 3000/–**
2. **ಜ| ಆಖಿಬ್ ರಹ್ಮಾನ್ ಸಾಹಿಬ್, ಮಂಗಳೂರು. ರೂ. 1000/–**
3. **ಜ| ಕೆ.ಎಂ. ಉಮರ್ ಸಾಹಿಬ್, ಮಡಿಕೇರಿ. ರೂ. 500/–**
4. **ಮಜ್ಲಿಸ್ ಅನ್ಸಾರುಲ್ಲಾಹ್, ಬೆಂಗಳೂರು ರೂ. 2000/–**

## ಅಹ್ಮದಿಯಾ ಜಮಾಅತಿನ ಪ್ರಗತಿ

- ಈ ವರ್ಷ 403 ಹೊಸ ಜಮಾಅತ್ ಘಟಕಗಳು ಸ್ಥಾಪಿಸಲ್ಪಟ್ಟವು.
- 135 ಹೊಸ ಮಸೀದಿಗಳು ನಿರ್ಮಿಸಲ್ಪಟ್ಟವು.
- 76 ಮಸೀದಿಗಳು ಅಹ್ಮದೀ ಮಸೀದಿಗಳಾದವು.
- 31 ಹೊಸ ಮಸೀದಿಗಳು ಘಾನದಲ್ಲಿ ಸ್ಥಾಪಿಸಲ್ಪಟ್ಟವು.
- ಯು.ಕೆ. ರಾಕಿಂ ಪ್ರೆಸ್ ಮೂಲಕ 315,000 ಪುಸ್ತಕಗಳು ಪ್ರಕಟಿಸಲ್ಪಟ್ಟವು.
- 123 ಹೊಸ ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟವು.
- 39 ಭಾಷೆಗಳ 384 ಪುಸ್ತಕಗಳ 36 ಲಕ್ಷ ಪ್ರತಿಗಳು ಪ್ರಕಾಶಿಸಲ್ಪಟ್ಟವು.
- 1970 ಎಕ್ಸಿಬಿಶನ್ ಮತ್ತು 2747 ಪುಸ್ತಕ ಮಳಿಗೆಗಳ ಮೂಲಕ 175,000 ಜನರಿಗೆ ಸಂದೇಶ ತಲಪಿಸಲಾಯಿತು.
- Alislam.org ಒಂದು ಹೊಸ ಖುರ್‌ಆನ್ ಸರ್ಚ್ ಎಂಜಿನ್ ಲಾಂಚ್ ಮಾಡಿತು.
- MTA 8 ಚಾನೆಲ್ ಮೂಲಕ 17 ಭಾಷೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು 24x7 ಕಾಲ ಬಿತ್ತರಿಸುತ್ತದೆ.
- 103 ದೇಶಗಳಲ್ಲಿ 6,98,400 ಕಿರುಹೊತ್ತಗೆಗಳನ್ನು 168 ಲಕ್ಷ ಮಂದಿಗೆ ತಲಪಿಸಲಾಯಿತು.
- ವಕ್ಫೆನೌ ಯೋಜನೆಯಡಿಯಲ್ಲಿ 75,522 ಸದಸ್ಯರಿದ್ದಾರೆ. (44,697 ಹುಡುಗರು ಮತ್ತು 30,825 ಹುಡುಗಿಯರು) ಈ ವರ್ಷ 2856 ಸದಸ್ಯರ ಸೇರ್ಪಡೆ.
- 2021 ವಾರ್ತಾ ಪತ್ರಿಕೆಗಳಲ್ಲಿ 3,274 ಲೇಖನಗಳು ಪ್ರಕಟಗೊಂಡು 3.3 ಕೋಟಿ ಜನರಿಗೆ ತಲಪಿತು.
- ಸಾಮಾಜಿಕ ಮಾಧ್ಯಮ ಮೂಲಕ 50 ಲಕ್ಷ ಜನರಿಗೆ ಸಂದೇಶ ತಲಪಿತು.
- ನುಸ್ರತ್ ಜಹಾನ್ ಯೋಜನೆ: 12 ದೇಶಗಳಲ್ಲಿ 37 ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. 11 ದೇಶಗಳಲ್ಲಿ 594 ಶಾಲೆಗಳನ್ನು ತೆರೆಯಲಾಗಿದೆ.
- 125,221 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.
- ಅತಿ ಹೆಚ್ಚು ಮಂದಿ ಜಮಾಅತಿಗೆ ಸೇರಿದ 3 ದೇಶಗಳು: **1. GUINEA – CONAKRY 2. CAMEROON 3. SIERRALEONE**
- ಲೋಕದಾದ್ಯಂತ 829 ಹೊಸ ಪ್ರದೇಶಗಳಿಗೆ ಅಹ್ಮದಿಯಾ ಸಂದೇಶ ತಲಪಿತು.

(ಹಝ್ರತ್ ಖಲೀಫತುಲ್ ಮಸೀಹ್ 7–8–2021ರಂದು ಮಾಡಿದ ಯು.ಕೆ. ಜಲ್ಸಾ ಸಾಲಾನ ಭಾಷಣದಿಂದ ಸಂಗ್ರಹಿತ)

ಆರೋಗ್ಯ

# ಪವರ್ ನ್ಯಾಪ್
## ಹೃದಯಾಘಾತದ ಅಪಾಯ ಕಡಿಮೆ

ನೀವು ಎಷ್ಟು ನಿದ್ದೆ ಮಾಡುತ್ತೀರಿ? ಎಂಟು ಗಂಟೆಗಳಿಗಿಂತ ಹೆಚ್ಚು ಮತ್ತು ಆರು ಗಂಟೆಗಳಿಗಿಂತ ಕಡಿಮೆ ನಿದ್ದೆ ಮಾಡುವುದಾದರೆ ಅದು ತಪ್ಪು. ಅನೇಕ ಸಮಸ್ಯೆಗಳಿಗೆ ಇದು ಕಾರಣವಾಗಬಹುದಾಗಿದೆ. ನಿದ್ದೆಯು ಸರಿಯಾಗಿ ಆಗದೇ ಇದ್ದರೆ ಅದು ಇತರ ಅಪಾಯಗಳನ್ನು ಆಹ್ವಾನಿಸುತ್ತದೆ. ಕೆಲವರು 8–9 ಗಂಟೆಗಳಿಗಿಂತ ಕಡಿಮೆ ನಿದ್ದೆ ಮಾಡಿ ಹಗಲಿನಲ್ಲಿ ನಿದ್ದೆಗೆ ಜಾರುತ್ತಾರೆ.

ಸಂಶೋಧನೆಯ ಪ್ರಕಾರ ಆರರಿಂದ ಏಳು ಗಂಟೆಗಳ ನಿದ್ದೆಯೊಂದಿಗೆ ಪವರ್ ನ್ಯಾಪ್ ತೆಗೆದುಕೊಳ್ಳುವುದರಿಂದ ಹೃದಯದ ಕಾಯಿಲೆಗಳ ಅಪಾಯ ಶೇ. 40ರಷ್ಟು ಕಡಿಮೆಯಾಗುತ್ತದೆ. ರಾತ್ರಿಯ ನಿದ್ದೆ ಪೂರ್ಣಗೊಳ್ಳದಿದ್ದರೆ ಅಥವಾ ಆರರಿಂದ ಏಳು ಗಂಟೆಗಳ ನಿದ್ದೆಯನ್ನು ಮಾತ್ರ ನೀವು ಮಾಡಿದ್ದರೆ ಪವರ್ ನ್ಯಾಪ್ ಮೊರೆ ಹೋಗಬಹುದು. ಇದು ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುವುದಲ್ಲದೆ, ಮೈಗ್ರೇನ್, ರಕ್ತದೊತ್ತಡ ಮತ್ತು ಒತ್ತಡದ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ.

### ಕನಿಷ್ಠ 6 ಗಂಟೆಗಳ ನಿದ್ದೆ ಯಾಕೆ ಅಗತ್ಯ?

ರಾತ್ರಿ ನಿದ್ದೆ ಮಾಡುವಾಗ ನಾವು ನಿದ್ದೆಯ ಕನಿಷ್ಠ 4 ಚಕ್ರಗಳನ್ನು ಪೂರ್ಣಗೊಳಿಸಬೇಕು. ನಿದ್ದೆಯ ಒಂದು ಚಕ್ರ ಎಂದರೆ 90 ನಿಮಿಷಗಳು, ಆದ್ದರಿಂದ ನಿದ್ದೆಯ 4 ಚಕ್ರಗಳನ್ನು ಪೂರ್ಣಗೊಳಿಸಲು ನಾವು ಆರು ಗಂಟೆಗಳ ಕಾಲ ನಿದ್ದೆ ಮಾಡಬೇಕಾಗುತ್ತದೆ. ಆರು ಗಂಟೆಗಳ ನಿದ್ದೆಯ ಹಿಂದಿನ ವಿಜ್ಞಾನ ಇದಾಗಿದೆ. ವಾಸ್ತವವಾಗಿ ನಮ್ಮ ನಿದ್ದೆಯನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿದೆ. ಎನ್‌ಆರ್‌ಇಎಂ (ನಾನ್ ರಾಪಿಡ್ ಐ ಮೂವ್‌ಮೆಂಟ್) ಹಂತ ಮತ್ತು ಆರ್‌ಇಎಂ (ರಾಪಿಡ್ ಐ ಮೂವ್‌ಮೆಂಟ್) ಹಂತ. ಎನ್‌ಆರ್‌ಇಎಂ ಸಹ ಮೂರು ಉಪ–ಹಂತಗಳನ್ನು ಹೊಂದಿದೆ.

### ಪವರ್ ನ್ಯಾಪ್ ಎಂದರೇನು?

ನೀವು ಹಗಲಿನ ಹೊತ್ತಲ್ಲಿ 10ರಿಂದ 15 ನಿಮಿಷ ಅಥವಾ ಅರ್ಧ ಗಂಟೆಯ ವರೆಗೆ ನಿದ್ದೆ ಮಾಡುವುದಾದರೆ ಅದನ್ನು ಪವರ್ ನ್ಯಾಪ್ ಎಂದು ಕರೆಯಲಾಗುತ್ತದೆ. ಅಂದರೆ ಪವರ್ ನ್ಯಾಪ್ ಎನ್ನುವುದು ನಿಮ್ಮ ದೇಹಕ್ಕೆ ವಿಶ್ರಾಂತಿ ನೀಡಲು ಹಗಲಿನಲ್ಲಿ ತೆಗೆದುಕೊಳ್ಳುವ ಸಣ್ಣ ನಿದ್ದೆ. ನೀವು ಎಷ್ಟೇ ಬ್ಯುಸಿ ಶೆಡ್ಯೂಲ್‌ನಲ್ಲಿದ್ದರೂ 15 ನಿಮಿಷಗಳ ನಿದ್ದೆ ನಿಮಗೆ ಹೆಚ್ಚು ತಾಜಾತನ ಮತ್ತು ಶಕ್ತಿಯನ್ನು ತುಂಬುತ್ತದೆ. ಇತ್ತೀಚೆಗೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ನಡೆಸಿದ ಸಂಶೋಧನೆಯಲ್ಲಿ ಈ ಅಂಶ ಪತ್ತೆಯಾಗಿದೆ. 30 ನಿಮಿಷಗಳ ಪವರ್ ನ್ಯಾಪ್ ಜನರ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಸಂಶೋಧನೆ ವರದಿ ತಿಳಿಸಿದೆ.

### ಪವರ್ ನ್ಯಾಪ್ ಪ್ರಯೋಜನಗಳೇನು

ಇದು ಹೃದ್ರೋಗ ಅಥವಾ ಆಘಾತದ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಸಂಶೋಧನೆ ಕಂಡುಹಿಡಿದಿದೆ. ಇದು ನಮ್ಮ ಉತ್ಪಾದನ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ನಾಸಾ ಹೇಳಿದೆ. ಪವರ್ ನ್ಯಾಪ್‌ನ ಪ್ರಯೋಜನಗಳನ್ನು ಇಲ್ಲಿ ನೀಡಲಾಗಿದೆ.

* ಪವರ್ ನ್ಯಾಪ್ ತೆಗೆದುಕೊಳ್ಳುವುದರಿಂದ ದೇಹಕ್ಕೆ ವಿರಾಮ ಸಿಗುತ್ತದೆ. ಈ ಸಮಯದಲ್ಲಿ ದೇಹವು ಶಕ್ತಿಯನ್ನು ಪುನಃ ಸಂಗ್ರಹಿಸಲು ಅವಕಾಶ ಲಭಿಸುತ್ತದೆ. ಶಕ್ತಿಯ ಮಟ್ಟವನ್ನು ಹೆಚ್ಚಿಸುತ್ತದೆ.

* ಇಡೀ ದಿನ ಕೆಲಸ ಮಾಡುವುದರಿಂದ ಮೆದುಳು ಆಯಾಸಗೊಳ್ಳುತ್ತದೆ. ಅಂದರೆ ನಾವು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿ ಕೂಡ ದಣಿದಿದ್ದೇವೆ ಎಂದರ್ಥ. ಅಂತಹ ಪರಿಸ್ಥಿತಿಯಲ್ಲಿ ಕಿರು ನಿದ್ದೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಮತ್ತು ನಮ್ಮ ಸ್ಮರಣೆಯನ್ನು ಬಲಪಡಿಸುತ್ತದೆ.

* ಸಂಶೋಧನೆಯ ಪ್ರಕಾರ ಹೃದಯ ಸಂಬಂಧಿತ ಕಾಯಿಲೆಗಳು ಮತ್ತು ಹೃದಯಾಘಾತದ ಅಪಾಯವನ್ನು ಶೇ. 40ರಷ್ಟು ಕಡಿಮೆ ಮಾಡುತ್ತದೆ.

* ನಮ್ಮ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಪವರ್ ನ್ಯಾಪ್ ಸಮಯದಲ್ಲಿ ನಮ್ಮ ದೇಹವು ವಿಶ್ರಾಂತಿ ಕ್ರಮದಲ್ಲಿರುವಾಗ ಅನಂತರ ರೋಗ ನಿರೋಧಕ ಕೋಶಗಳು ಹೆಚ್ಚು ಅಭಿವೃದ್ಧಿ ಹೊಂದುತ್ತವೆ. **(ಉದಯವಾಣಿ 6–1–2021)**

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

ಓದಿದ್ದು

## ಪ್ರಚಾರದ ಹಂಗಿಲ್ಲದ 24X7 ಆಂಬ್ಯುಲೆನ್ಸ್

### ಮಂಗಳೂರಿನ ಎಫ್‌ಎಫ್‌ಪಿ ಉಚಿತ ಸೇವೆ । ಪ್ರಚಾರವಿಲ್ಲದೆ ರೋಗಿಗಳಿಗೆ ಸಾಗಾಟ

**ಮುಹಮ್ಮದ್ ಆರಿಫ್ ಮಂಗಳೂರು**

ಜಾತಿ–ಧರ್ಮಗಳ ಭೇದವಿಲ್ಲ. ಬಡವ–ಶ್ರೀಮಂತನೆಂಬ ತಾರತಮ್ಯವಿಲ್ಲ. ರಾತ್ರಿ–ಹಗಲೆಂಬ ವ್ಯತ್ಯಾಸವಿಲ್ಲ. ಯಾರು ಯಾವ ಹೊತ್ತಲ್ಲಿ ಕರೆದರೂ ಮಂಗಳೂರಿನ ಫ್ಯಾಮಿಲಿ ಫಾರ್ ಪೂವರ್ (ಎಫ್‌ಎಫ್‌ಪಿ) ಸಂಘಟನೆಯ ಆಂಬ್ಯುಲೆನ್ಸ್ ರೆಡಿ. ಈ ಆಂಬ್ಯುಲೆನ್ಸ್‌ಗೆ ಯಾವುದೇ ಹಣ ಕೊಡಬೇಕಾಗಿಲ್ಲ. ಪ್ರಚಾರ ಬಯಸದೆ ನಡೆಸುವ ಈ ಆಂಬ್ಯುಲೆನ್ಸ್ ಸಾಕಷ್ಟು ವೈಶಿಷ್ಟ್ಯತೆಗಳನ್ನು ಹೊಂದಿದೆ.

ಹೆಸರು, ಪ್ರಚಾರ ಬಯಸದ ಸಾವಿರಕ್ಕಿಂತ ಹೆಚ್ಚು ಸದಸ್ಯರ ಮೂಲಕ ಬಡವರಿಗೆ ಮಾಸಿಕ ರೇಶನ್, ಮನೆ ಮನೆಗೆ ಹೋಗಿ ರೋಗಿಗಳ ಶುಶ್ರೂಷೆ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡಿರುವ ಎಫ್‌ಎಫ್‌ಪಿ, ಕಳೆದ ವರ್ಷ ಆಂಬ್ಯುಲೆನ್ಸ್ ಯೋಜನೆ ಪ್ರಕಟಿಸಿ, ಎರಡು ದಿನದಲ್ಲೇ 20 ಲಕ್ಷ ರೂ.ಗಿಂತ ಹೆಚ್ಚು ಮೊತ್ತದಲ್ಲಿ ಆಂಬ್ಯುಲೆನ್ಸ್ ಖರೀದಿಸಲಾಗಿದೆ. ಆ.15ರಂದು ಆಂಬ್ಯುಲೆನ್ಸ್ ಸೇವೆ ಆರಂಭಿಸಿ, ನೂರಾರು ರೋಗಿಗಳನ್ನು, ಕೊರೊನಾ ಸೋಂಕಿತರನ್ನು, ಮೃತದೇಹಗಳನ್ನು ಸಾಗಾಟ ಮಾಡಲಾಗಿದೆ.

**ಏನೇನಿದೆ?:** ಈ ಹವಾನಿಯಂತ್ರಿತ ಆಂಬ್ಯುಲೆನ್ಸ್‌ನಲ್ಲಿ ಆಕ್ಸಿಜನ್, ಪ್ರಥಮ ಚಿಕಿತ್ಸೆ ಕಿಟ್, ಪಿಪಿಇ ಕಿಟ್, ಮೃತದೇಹಕ್ಕೆ ಹಾಕುವ ಬ್ಯಾಗ್, ಗ್ಲೌಸ್, ಮಾಸ್ಕ್, ಸ್ಯಾನಿಟೈಸರ್, ಆಕ್ಸಿ ಮೀಟರ್, ಬಿಪಿ ಸಹಿತ ಆರೋಗ್ಯ ತಪಾಸಣೆ ಉಪಕರಣಗಳಿವೆ. ಇವೆಲ್ಲದರ ನಿರ್ವಹಣೆಗೆ ಅನುಭವಸ್ಥ ಚಾಲಕ ಆಸಿಫ್ ಬಜಪೆ ಇದ್ದಾರೆ. ಮೃತದೇಹಕ್ಕೆ ಹಾಕುವ ಕಫನ್ ವಸ್ತ್ರದ ಕಿಟ್ ಕೂಡ ಸ್ಟಾಕ್ ಇದೆ. ಡಿಸ್ಚಾರ್ಜ್ ಆದ ರೋಗಿಗಳನ್ನೂ ಉಚಿತವಾಗಿ ಮನೆಗೆ ಬಿಡುವುದು ಇದರ ವಿಶೇಷ.

ತೀರಾ ಬಡವರಿಗೆ ವೀಲ್ ಚೇರ್, ವಾಕಿಂಗ್ ಸ್ಟಿಕ್, ವಾಟರ್ ಬೆಡ್ ಇತ್ಯಾದಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಅಗತ್ಯವಿದ್ದರೆ ಮೃತದೇಹವನ್ನು ಅಂತಿಮ ವಿಧಿ ಸಹಿತ ದಫನ ಕ್ರಿಯೆಯನ್ನೂ ಮಾಡಿಕೊಡಲಾಗುತ್ತದೆ ಎಂದು ಹೆಸರು ಹೇಳಲಿಚ್ಛಿಸದ ಎಫ್‌ಎಫ್‌ಪಿ ಕಾರ್ಯಕರ್ತರೊಬ್ಬರು ಹೇಳುತ್ತಾರೆ.

**ಎಲ್ಲಿ ತನಕ?:** ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಏಳು ತಾಲೂಕು, ಕೇರಳದ ಕಾಸರಗೋಡು ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ಮಣಿಪಾಲ ಆಸ್ಪತ್ರೆ ತನಕವೂ ಈ ಆಂಬ್ಯುಲೆನ್ಸ್ ಸಂಚರಿಸಿ, ರೋಗಿಗಳು, ಮೃತದೇಹಗಳ ಸಾಗಾಟ ಮಾಡುತ್ತಿದೆ. ಈ ವ್ಯಾಪ್ತಿಯ ಎಷ್ಟೇ ದೂರ ಸಂಚಾರ ಮಾಡಿದರೂ, ಪಾರ್ಟಿಯಿಂದ ಯಾವುದೇ ಮೊತ್ತ ಪಡೆಯುವುದಿಲ್ಲ. ಡೀಸೆಲ್, ನಿರ್ವಹಣೆ ಮತ್ತು ಚಾಲಕನ ವೇತನ ಎಲ್ಲವನ್ನೂ ಎಫ್‌ಎಫ್‌ಪಿ ಭರಿಸುತ್ತದೆ. ಇದರ ಚಾಲಕ ಕೂಡ 24 ಗಂಟೆಯೂ ಸೇವೆಯ ಕಾರ್ಯನಿರ್ವಹಿಸುತ್ತಿದ್ದಾರೆ.

ಇತ್ತೀಚೆಗೆ ಮಂಗಳೂರಿನಿಂದ ಉಪ್ಪಳಕ್ಕೆ 15 ನಿಮಿಷದಲ್ಲಿ ರೋಗಿಯ ಸಾಗಾಟ, ಕಳೆದ ವಾರ ಸಿಡಿಲು ಬಡಿದ ಗಾಯಾಳು ಬಾಲಕನನ್ನು ಮುಕ್ಕ ಶ್ರೀನಿವಾಸ ಆಸ್ಪತ್ರೆಯಿಂದ ಫಾದರ್ ಮುಲ್ಲರ್ ಆಸ್ಪತ್ರೆಗೆ ಹತ್ತು ನಿಮಿಷದಲ್ಲಿ ಸಾಗಾಟ ಸೇರಿದಂತೆ ಕ್ಷಿಪ್ರ ಕಾರ್ಯಾಚರಣೆಯಲ್ಲೂ ಗಮನ ಸೆಳೆದಿದೆ. ಇಂತಹ ಸಂದರ್ಭದಲ್ಲಿ ಆಂಬ್ಯುಲೆನ್ಸ್ ತೆರಳುವ ರಸ್ತೆ ಸಂಚಾರಕ್ಕೆ ಸುಗಮಕ್ಕೆ ಎಫ್‌ಎಫ್‌ಪಿ ಕಾರ್ಯಕರ್ತರ ದಂಡೇ ಇದೆ.

**(ವಿಜಯ ಕರ್ನಾಟಕ 27–4–2021)**

==================================================================

## ಕಲ್ಲು ನಾಗರಕ್ಕೆ, ಹುತ್ತಕ್ಕೆ ಹಾಲನ್ನು ಹಾಕದೆ ಮಕ್ಕಳು, ಬಡವರು ಮತ್ತು ರೋಗಿಗಳಿಗೆ ನೀಡಿ: ಶ್ರೀ ಬಸವಪ್ರಭು ಸ್ವಾಮೀಜಿ

**ದಾವಣಗೆರೆ, ಆ.13:** ಹಬ್ಬಗಳ ಹೆಸರಿನಲ್ಲಿ ಹಾಲು ಅಮೃತ ಹಬ್ಬಗಳ ಆಚರಣೆ ಹೆಸರಿನಲ್ಲಿ ಕಲ್ಲು ನಾಗರಕ್ಕೆ, ಹುತ್ತಕ್ಕೆ ಹಾಲನ್ನು ಹಾಕದೇ ಮನೆಯಲ್ಲಿ ಹಿರಿಯರಿಗೆ, ಮಕ್ಕಳಿಗೆ, ಬಡವರಿಗೆ, ರೋಗಿಗಳಿಗೆ ನೀಡುವಂತೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಕರೆ ನೀಡಿದ್ದಾರೆ.

ನಗರದ ವಿರಕ್ತಮಠದಲ್ಲಿ ನಾಗರ ಪಂಚಮಿ ಹಬ್ಬದ ಅಂಗವಾಗಿ ಶುಕ್ರವಾರ ಬಸವ ಕೇಂದ್ರ, ಮುರುಘರಾಜೇಂದ್ರ ವಿರಕ್ತಮಠ, ಶಿವಯೋಗಾಶ್ರಮದ ಸಹಯೋಗದಲ್ಲಿ ನಡೆದ ಹಾಲು ಕುಡಿಸುವ ಹಬ್ಬ ಬಸವ ಪಂಚಮಿ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಹಾಲನ್ನು ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೂಢನಂಬಿಕೆಗಳನ್ನು ತೊಡೆದು ಹಾಕುವ ಮೂಲಕ ವೈಜ್ಞಾನಿಕವಾಗಿ ಹಾಗೂ ವೈಚಾರಿಕವಾಗಿ ಹಬ್ಬಗಳನ್ನು ಆಚರಣೆ ಮಾಡಬೇಕು ಎಂದರು.

ನಾಗರ ಪಂಚಮಿ ಹಬ್ಬದಲ್ಲಿ ಕಲ್ಲು ನಾಗರಕ್ಕೆ ಹಾಲನ್ನು ಎರೆಯುವ ಮೂಲಕ ಕುಡಿಯುವ ಹಾಲನ್ನು ಮಣ್ಣು ಪಾಲು ಮಾಡುತ್ತಾರೆ. ಹಾಲು ಅಮೃತ ಸಮಾನ ಹಾಗೂ ಸಂಜೀವಿನಿಯಾಗಿದ್ದು ಅದು ವಿಟಮಿನ್ ನೀಡುತ್ತದೆ. ದೇವರು ಧರ್ಮದ ಹೆಸರಿನಲ್ಲಿ ಹೋಮ, ಹವನದ ಸಂದರ್ಭದಲ್ಲಿ ಹಾಲು, ತುಪ್ಪ, ಜೇನುತುಪ್ಪ, ಬೆಲ್ಲ, ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ವ್ಯರ್ಥಮಾಡಬಾರದು ಎಂದರು.

ನಾಗರ ಪಂಚಮಿ ಹಬ್ಬ ಆಚರಿಸಬೇಕೆ ಉಂಡಿ, ಹಣ್ಣುಗಳನ್ನು ತಿನ್ನಿರಿ, ಜೋಕಾಲಿ ಆಡಿರಿ ಎಂದ ಅವರು, ಹಾವು ಹಾಲು ಕುಡಿಯುವುದಿಲ್ಲ ಎಂಬುದು ವೈಜ್ಞಾನಿಕ ಸತ್ಯವಾಗಿದೆ. ನಮ್ಮ ದೇಶದಲ್ಲಿ ಬಹಳಷ್ಟು ಜನರಿಗೆ ಕುಡಿಯಲು ಹಾಲು ಸಿಗುತ್ತಿಲ್ಲ. ಬಹಳಷ್ಟು

ಮಕ್ಕಳು ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿದ್ದಾರೆ. ಮಕ್ಕಳು, ವಯೋವೃದ್ಧರು, ರೋಗಿಗಳಿಗೆ, ಬಡವರಿಗೆ, ನಿರ್ಗತಿಕರಿಗೆ ಹಾಲನ್ನು ನೀಡಬೇಕು ಈ ಮೂಲಕ ಮಾನವರಲ್ಲಿ ನಿಜವಾದ ದೇವರನ್ನು ಕಾಣಬೇಕು ಎಂದು ಸಲಹೆ ನೀಡಿದರು.

ಹಾವುಗಳು ಹಾಲನ್ನು ಕೊಡುವುದಿಲ್ಲ. ಹಾವಿನ ಆಹಾರ ಇಲಿ, ಹುಳ ಹುಪ್ಪಡಿಗಳು. ಹಾವುಗಳು ಎಂದಿಗೂ ಹಾಲನ್ನು ಕುಡಿಯುವುದಿಲ್ಲ. ಹಾಲನ್ನು ಕುಡಿಯುವುದರಿಂದ ಮೂಳೆಗಳು ಸದೃಢವಾಗುತ್ತವೆ ಹಾಗೂ ಆಯುಷ್ಯ ವೃದ್ಧಿಸುತ್ತದೆ. ಕ್ರೀಡೆಗಳಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಜನರು ದುಶ್ಚಟಗಳಿಗೆ ಒಳಗಾಗಿ ಆಲ್ಕೋಹಾಲ್ ಸೇವಿಸುವ ಮೂಲಕ ತಮ್ಮ ಆಯುಷ್ಯವನ್ನು ಕ್ಷೀಣಿಸಿಕೊಳ್ಳುತ್ತಿದ್ದಾರೆ. ಮಕ್ಕಳಲ್ಲಿ ಜಾಗೃತಿ ಮೂಡಿಸುವುದರಿಂದ ಅವರಲ್ಲಿಯೂ ಸಹ ಹಾಲನ್ನು ವ್ಯರ್ಥ ಮಾಡಬಾರದು ಎಂಬ ಅರಿವು ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಡಾ. ಮುರುಘಾ ಶರಣರ ಮಾರ್ಗದರ್ಶನದಂತೆ ಇಂತಹ ಜಾಗೃತಿ ಕಾರ್ಯಕ್ರಮಗಳನ್ನು 750ಕ್ಕೂ ಹೆಚ್ಚು ಬಸವ ಕೇಂದ್ರಗಳು ನಾಡಿನಾದ್ಯಂತ ಆಚರಿಸುತ್ತಾ ಬಂದಿವೆ ಎಂದು ಹೇಳಿದರು. ಹಾಸಬಾವಿ ಕರಿಬಸಪ್ಪ, ವಿವಿಎಫ್ ಸಂಘದ ಕಾರ್ಯದರ್ಶಿ ಎಂ. ಜಯಕುಮಾರ, ಟ್ರಸ್ಟ್ ಕಾರ್ಯದರ್ಶಿ ಎಸ್. ಓಂಕಾರಪ್ಪ, ಲಂಬಿ ಮುರುಗೇಶ, ಮಹಿಳಾ ಬಸವ ಕೇಂದ್ರದ ಮಹದೇವಮ್ಮ, ಎಸ್.ಜೆ.ಎಂ. ಶಾಲೆ ಮುಖ್ಯೋಪಾಧ್ಯಾಯ ರೋಷನ್, ಪಾರೂಕ್, ಜಗದೀಶ, ಶಿಕ್ಷಕರಾದ ಸೌಭಾಗ್ಯ, ಕುಮಾರಸ್ವಾಮಿ, ಶರಣಬಸವ ಇತರರು ಇದ್ದರು. **(ವಾರ್ತಾ ಭಾರತಿ 13–8–2021)**

## ಹಿಂದೂ ವೃದ್ಧನಿಗೆ ಮುಸ್ಲಿಮರಿಂದ ಅಂತ್ಯಸಂಸ್ಕಾರ

**ಕೊಪ್ಪಳ, ಎ. 26:** ತೀವ್ರ ಉಸಿರಾಟ ತೊಂದರೆಯಿಂದ ಮೃತಪಟ್ಟ 85 ವರ್ಷದ ಹಿಂದೂ ವ್ಯಕ್ತಿಯ ಅಂತ್ಯಸಂಸ್ಕಾರವನ್ನು ನಗರದ ಮುಸ್ಲಿಂ ಯುವಕರು ಗವಿಮಠದ ಹಿಂಭಾಗದ ಚಿತಾಗಾರದಲ್ಲಿ ಹಿಂದೂ ಧಾರ್ಮಿಕ ಪದ್ಧತಿ ಅನುಸಾರವೇ ನೆರವೇರಿಸಿ ಗಮನ ಸೆಳೆದರು. ಇಲ್ಲಿನ ವಿಕಾಸ ನಗರದ ನಿವಾಸಿ ವಿಠ್ಠಲ ರಾವ್ ಮಹೇಂದ್ರಕರ್ (85) ರವಿವಾರ ಸಂಜೆ ಮನೆಯಲ್ಲಿ ಮೃತಪಟ್ಟಿದ್ದರು. ಸಂಬಂಧಿಕರು ಬೇರೆ ಬೇರೆ ಊರುಗಳಲ್ಲಿದ್ದರು. ತಂದೆ ಸಾವಿನ ವಿಷಯ ತಿಳಿದು ಮೃತರ ಪುತ್ರ ಪ್ರಮೋದ್ ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದರು. ಧಾರ್ಮಿಕ ವಿಧಿಗಳನ್ನು ದೂರದೂರಿನಿಂದ ಬಂದಿದ್ದ ವೃದ್ಧನ ಅಳಿಯನ ಮೂಲಕ ಮಾಡಿಸಲಾಯಿತು. **(ಉದಯವಾಣಿ 27–4–2021)**

## ಇಸ್ರೇಲ್: ಕಾಲ್ತುಳಿತಕ್ಕೆ 44 ಮಂದಿ ಬಲಿ

**ಜೆರುಸಲೇಂ:** ಇಸ್ರೇಲ್‌ನ ಮೌಂಟ್ ಮೆರೋನ್ ಎಂಬಲ್ಲಿ ಗುರುವಾರ ರಾತ್ರಿ ನಡೆದ ಧಾರ್ಮಿಕ ಸಮಾವೇಶವೊಂದರ ವೇಳೆ ಸಂಭವಿಸಿದ ಕಾಲ್ತುಳಿತದಿಂದಾಗಿ 44 ಭಕ್ತಾದಿಗಳು ಬಲಿಯಾಗಿ, 150ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಯೆಹೂದಿಗಳ ಧರ್ಮಗುರುಗಳಲ್ಲೊಬ್ಬರಾದ, 2ನೇ ಶತಮಾನದಲ್ಲಿ ಜೀವಿಸಿದ್ದ ರಬ್ಬಿ ಶಿಮೊನ್ ಬಾರ್ ಯೊಚಾಯ್ ಸಮಾಧಿ ಸ್ಥಳಕ್ಕೆ ಸಮೀಪದಲ್ಲೇ ಇರುವ ಬೆಟ್ಟದಲ್ಲಿ ಲಾಗ್ ಬಿಒಮರ್ ಎಂಬ ಹಬ್ಬದ ಆಚರಣೆ ಏರ್ಪಡಿಸಲಾಗಿತ್ತು. ಗುರುವಾರ ರಾತ್ರಿಯಿಡೀ ಪ್ರಾರ್ಥನೆ, ನೃತ್ಯ ಕಾರ್ಯಕ್ರಮವಿತ್ತು. ಹಾಗಾಗಿ ಅಪಾರ ಸಂಖ್ಯೆಯಲ್ಲಿ ಬೆಟ್ಟಕ್ಕೆ ಬಂದಿದ್ದ ಯೆಹೂದಿಗಳು ಬೆಟ್ಟವನ್ನೇರಿ ಹೋಗುತ್ತಿದ್ದಾಗ ಒಂದು ಹಂತದಲ್ಲಿ ಕೆಲವು ಮೆಟ್ಟಿಲುಗಳಿಂದ ಜಾರಿ ಹಿಂದಿದ್ದವರ ಮೇಲೆ ಬಿದ್ದಿದ್ದಾರೆ. ಇದು ಕಾಲ್ತುಳಿತಕ್ಕೆ ಕಾರಣವಾಗಿದೆ.

**(ಉದಯವಾಣಿ 1–5–2021)**

## ಭಾರತದಲ್ಲಿ ಮುಸ್ಲಿಮರು ಇರಬಾರದು ಎಂದು ಹಿಂದೂವೊಬ್ಬ ಹೇಳಿದರೆ ಆತ ಹಿಂದೂವೇ ಅಲ್ಲ – ಮೋಹನ್ ಭಾಗವತ್

**ಘಾಝಿಯಾಬಾದ್:** ಭಾರತದಲ್ಲಿ ಇಸ್ಲಾಮ್ ಧರ್ಮ ಅಪಾಯದಲ್ಲಿದೆ ಎಂದು ಸೃಷ್ಟಿಸಲಾದ ಭಯದ ಬಲೆಗೆ ಮುಸ್ಲಿಮರು ಸಿಲುಕಬಾರದು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಕರೆ ನೀಡಿದ್ದಾರೆ. ನಿನ್ನೆ ಭಾನುವಾರ ಮುಸ್ಲಿಮ್ ರಾಷ್ಟ್ರೀಯ ಮಂಚ್ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿದ್ದ ಭಾಗವತ್, ಎಲ್ಲಾ ಭಾರತೀಯರದ್ದೂ ಒಂದೇ ಡಿಎನ್‌ಎ ಆಗಿದ್ದು, ಪೂಜಾಚರಣೆ ವಿಚಾರದಿಂದ ಜನರನ್ನ ಬೇರ್ಪಡಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ, ಗೋ ರಕ್ಷಣೆ ಹೆಸರಿನಲ್ಲಿ ಜನರ ಮೇಲೆ ಹಲ್ಲೆ ಮಾಡುವುದನ್ನು ಬಲವಾಗಿ ಆಕ್ಷೇಪಿಸಿದ ಅವರು, ಅಂಥವರು ಹಿಂದುತ್ವದ ವಿರುದ್ಧವಾಗಿದ್ದಾರೆ ಎಂದು ಹೇಳಿದ್ದಾರೆ.

"ಯಾವ ಮುಸ್ಲಿಮನೂ ಭಾರತದಲ್ಲಿ ಇರಬಾರದು ಎಂದು ಹಿಂದೂವೊಬ್ಬ ಹೇಳಿದರೆ ಆತ ಒಬ್ಬ ಹಿಂದೂವೇ ಅಲ್ಲ. ಗೋವು ನಮಗೆ ಪೂಜ್ಯ. ಆದರೆ, ಗೋರಕ್ಷಣೆ ಹೆಸರಿನಲ್ಲಿ ಇತರರ ಮೇಲೆ ಹಲ್ಲೆ ನಡೆಸಿದರೆ ಅದು ಹಿಂದುತ್ವ ವಿರೋಧಿಯಾಗುತ್ತದೆ. ಗೋಹತ್ಯೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನು ಇದೆ" ಎಂದು ಆರೆಸ್ಸೆಸ್ ಮುಖ್ಯಸ್ಥರು ತಿಳಿಸಿದ್ದಾರೆ. ತನ್ನ ಖ್ಯಾತಿ ಹೆಚ್ಚಿಸಿಕೊಳ್ಳಲಾಗಲೀ, ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿಯಾಗಲೀ ತಾನು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿಲ್ಲ ಎಂದು ತಮ್ಮ ಭಾಷಣದ ಆರಂಭದಲ್ಲೇ ಸ್ಪಷ್ಟಪಡಿಸಿದ ಅವರು, ರಾಷ್ಟ್ರೀಯತೆ ಭಾವನೆಯಲ್ಲಿ ಭಾರತೀಯರಲ್ಲಿ ಒಗ್ಗಟ್ಟು ಮಾಡಬೇಕೆಂದು ಪ್ರತಿಪಾದಿಸಿದರು. ದೇಶದಲ್ಲಿ ಒಗ್ಗಟ್ಟಿನ

ಬಲವಿಲ್ಲದೇ ಅಭಿವೃದ್ಧಿ ಸಾಧ್ಯವಿಲ್ಲ. ರಾಷ್ಟ್ರೀಯತೆ ಮತ್ತು ನಮ್ಮ ಪೂರ್ವಿಕರ ವೈಭವವು ನಮ್ಮ ಒಗ್ಗಟ್ಟಿಗೆ ಆಧಾರವಾಗಿರಬೇಕು ಎಂಬ ಅನಿಸಿಕೆ ವ್ಯಕ್ತಪಡಿಸಿದ ಮೋಹನ್ ಭಾಗವತ್, ಹಿಂದೂ ಮತ್ತು ಮುಸ್ಲಿಮರ ನಡುವಿನ ಸಂಘರ್ಷ ಶಮನಕ್ಕೆ ಮಾತುಕತೆಯೇ ಏಕೈಕ ಪರಿಹಾರ ಎಂದಿದ್ದಾರೆ.

"ಹಿಂದೂ ಮತ್ತು ಮುಸ್ಲಿಮ್ ಮಧ್ಯೆ ಒಗ್ಗಟ್ಟು ಮೂಡಬೇಕು ಎನ್ನುವುದು ತಪ್ಪಾಗುತ್ತದೆ. ಯಾಕೆಂದರೆ, ಈ ಎರಡು ಸಮುದಾಯಗಳು ವಿಭಿನ್ನವಲ್ಲ. ಯಾವುದೇ ಧರ್ಮೀಯರನ್ನ ಒಳಗೊಂಡಂತೆ ಎಲ್ಲಾ ಭಾರತೀಯರ ಡಿಎನ್ಎ ಒಂದೇ ಆಗಿದೆ..... ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಇಲ್ಲಿ ಹಿಂದೂ ಅಥವಾ ಮುಸ್ಲಿಮರ ಪ್ರಾಬಲ್ಯ ಎಂದೆನ್ನಲು ಸಾಧ್ಯವಿಲ್ಲ. ಇಲ್ಲಿ ಭಾರತೀಯರ ಪ್ರಾಬಲ್ಯ ಮಾತ್ರವೇ ಇರುವುದು" ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕರು ಅಭಿಪ್ರಾಯಪಟ್ಟಿದ್ದಾರೆ.

ಆರ್ ಎಸ್ ಎಸ್ ಸಂಘಟನೆ ರಾಜಕಾರಣದಲ್ಲೂ ಇಲ್ಲ, ಅಥವಾ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಉದ್ದೇಶದಲ್ಲೂ ಇಲ್ಲ. ದೇಶದ ಸಬಲತೆಗೆ ಹಾಗೂ ಸಮಾಜದ ಪ್ರತಿಯೊಬ್ಬರ ಏಳ್ಗೆಗೆ ಸಂಘ ಕೆಲಸ ಮಾಡುತ್ತದೆ ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

**(ಜನಧ್ವನಿ 5–7–2021)**

===============================================================

## ದೇಶದಲ್ಲಿದೆ ಬದುಕಲು ಮುಕ್ತ ಅವಕಾಶ

**ಗಾಜಿಯಾಬಾದ್:** ದೇಶದಲ್ಲಿ ಎಲ್ಲರಿಗೂ ಮುಕ್ತವಾಗಿ ಬದುಕುವ ಹಕ್ಕು ಇದೆ ಎಂದು ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ್ ಭಾಗವತ್ ಪ್ರತಿಪಾದಿಸಿದ್ದಾರೆ. ಭಾರತದಲ್ಲಿ ಎಲ್ಲ ಧರ್ಮೀಯರೂ ಒಗ್ಗಟ್ಟಿನಿಂದ, ಸಾಮಾಜಿಕ ಸ್ವಾತಂತ್ರ್ಯದಿಂದ ಬದುಕಲು ಈ ದೇಶದಲ್ಲಿ ಮುಕ್ತವಾದ ಅವಕಾಶವಿದೆ ಎಂದು ಹೇಳಿದ್ದಾರೆ.

ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಮುಸ್ಲಿಂ ರಾಷ್ಟ್ರೀಯ ಮಂಚ್ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋಹನ್ ಭಾಗವತ್ ದೇಶದಲ್ಲಿ ವಾಸಿಸುತ್ತಿರುವ ಯಾರೂ ಕೂಡ ತಮಗೆ ಅಪಾಯ ಇದೆ ಎಂದು ಭಾವಿಸಬೇಕಾಗಿಲ್ಲ. ಮುಸ್ಲಿಮರಿಗೆ ಭಾರತದಲ್ಲಿ ಅಪಾಯ ಕಾದಿದೆ ಎಂಬ ವದಂತಿಗಳಿಗೆ ಕಿವಿಗೊಡಬೇಡಿ. ಯಾರಿಗೂ ಯಾರಿಂದಲೂ ತೊಂದರೆಯಿಲ್ಲ. ಯಾರನ್ನು ಪೂಜಿಸುತ್ತಾರೆ ಎಂಬುದರ ಮೇಲೆ ಯಾರನ್ನೂ ದ್ವೇಷಿಸುವುದಿಲ್ಲ. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ಇಲ್ಲಿ ಯಾವುದೇ ಸಮುದಾಯದ ಪ್ರಾಬಲ್ಯವಿಲ್ಲ. ಕೇವಲ ಭಾರತೀಯತೆಗೆ ಮಾತ್ರ ಪ್ರಾಧಾನ್ಯ ಇರುತ್ತದೆ ಎಂದರು.

'ಹಿಂದೂ – ಮುಸ್ಲಿಂ ಭಾವೈಕ್ಯವನ್ನು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದ ಅವರು, ಎಲ್ಲ ಭಾರತೀಯರ ರಕ್ತದಲ್ಲಿರುವುದು ಒಂದೇ ಡಿಎನ್ಎ. ಹಾಗಾಗಿ ನಾವೆಲ್ಲರೂ ಒಂದು. ದೇಶದ ಅಭಿವೃದ್ಧಿಗೆ ಎಲ್ಲರ ಸಹಕಾರ ಬೇಕು. ರಾಷ್ಟ್ರೀಯತೆಯ ಮಂತ್ರ, ಹಿರಿಯರ ಆದರ್ಶ ಮೈಗೂಡಿಸಿಕೊಂಡು ದೇಶ ಮುನ್ನಡೆಸಬೇಕಿದೆ. ಒಗ್ಗಟ್ಟಿಲ್ಲದೆ ದೇಶ ಅಭಿವೃದ್ಧಿ ಸಾಧ್ಯವಿಲ್ಲ' ಎಂದರು.

### 'ಕೊಲ್ಲುವವ ಹಿಂದೂ ಅಲ್ಲ':

ಲಿಂಚಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವವರ ವಿರುದ್ಧ ಹರಿಹಾಯ್ದ ಭಾಗವತ್, 'ಹೊಡೆದು ಕೊಲ್ಲುವ ಪ್ರಕರಣಗಳಲ್ಲಿ ಭಾಗಿಯಾಗುವವರು ಹಿಂದೂಗಳೇ ಅಲ್ಲ' ಎಂದರು. 'ಮುಸ್ಲಿಮರು ಈ ದೇಶದಲ್ಲಿರಬಾರದು ಎಂದು ಹೇಳುವವನು ಹಿಂದೂ ಅಲ್ಲ. ಗೋವನ್ನು ಪೂಜಿಸುವ ನಾವು ಹಿಂದುತ್ವದ ಹೆಸರಲ್ಲಿ ಮತ್ತೊಬ್ಬರನ್ನು ಕೊಲ್ಲುವುದು ಹಿಂದುತ್ವಕ್ಕೆ ವಿರುದ್ಧವಾದ ನಡೆ. ಅಂಥವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನಾತ್ಮಕ ಕ್ರಮಗಳು ಜರಗುವಂತಾಗಲಿ' ಎಂದು ಹೇಳಿದ್ದಾರೆ. ಆದರೆ ಕೆಲವರ ವಿರುದ್ಧ ಸುಳ್ಳು ಲಿಂಚಿಂಗ್ ಪ್ರಕರಣಗಳು ದಾಖಲಾಗಿದ್ದು ಅಂಥ ಪರಿಪಾತಕ್ಕೂ ಅಂತ್ಯಹಾಡಬೇಕಿದೆ ಎಂದು ಅವರು ಹೇಳಿದ್ದಾರೆ. **(ಉದಯವಾಣಿ 5–7–2021)**

===============================================================

## ಮುಸ್ಲಿಮರಿಗೆ ಎನ್‌ಆರ್‌ಸಿ, ಸಿಎಎ ಆತಂಕ ಬೇಡ

**ಗುವಾಹಾಟಿ:** ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ)ಯಿಂದಾಗಿ ಮುಸ್ಲಿಮರಿಗೆ ತೊಂದರೆಯಾಗುವುದಿಲ್ಲ. ಇದರಿಂದಾಗಿ ಹಿಂದೂ ಮತ್ತು ಮುಸ್ಲಿಂ ಸಮುದಾಯದ ನಡುವೆ ವಿಭಜನೆ ತರಲಾರದು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ. ಅಸ್ಸಾಂಗೆ ಎರಡು ದಿನಗಳ ಕಾಲ ಪ್ರವಾಸ ಕೈಗೊಂಡಿರುವ ಅವರು, ಬುಧವಾರ ಗುವಾಹಾಟಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. ಕೇವಲ ರಾಜಕೀಯ ಲಾಭ ಪಡೆಯುವುದಕ್ಕಾಗಿ ಸಿಎಎ ಮತ್ತು ಎನ್‌ಆರ್‌ಸಿಯಿಂದ ಮುಸ್ಲಿಮರಿಗೆ ತೊಂದರೆಯಾಗುತ್ತದೆ ಎಂದು ಹುಯಿಲೆಬ್ಬಿಸಲಾಗುತ್ತದೆ ಎಂದು ಹೇಳಿದ್ದಾರೆ. ಸಿಎಎ, ಎನ್‌ಆರ್‌ಸಿಯಿಂದಾಗಿ ದೇಶದಲ್ಲಿರುವ ಮುಸ್ಲಿಮರ ಪೌರತ್ವಕ್ಕೆ ತೊಂದರೆಯಾಗುವುದಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥರು ಪ್ರತಿಪಾದಿಸಿದ್ದಾರೆ.

ಇದುವರೆಗೆ ಅಲ್ಪಸಂಖ್ಯಾತರ ಹಿತವನ್ನು ಕೇಂದ್ರ ಸರಕಾರ ಕಾಯ್ದುಕೊಂಡಿದೆ. ಅದನ್ನು ಮುಂದುವರಿಸಲಾಗುತ್ತದೆ ಎಂದರು ಆರ್‌ಎಸ್‌ಎಸ್ ಮುಖ್ಯಸ್ಥ. ಭಾರತದ ನೆರೆಯ ದೇಶಗಳಲ್ಲಿ ಧಾರ್ಮಿಕವಾಗಿ ನೊಂದಿರುವವರಿಗೆ ಸಿಎಎಯಿಂದ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಮಾತನಾಡಿದ ಅಸ್ಸಾಂ ಸಿಎಂ ಹಿಮಾಂತ ಶರ್ಮ ಬಿಸ್ವಾ ಭಾರತೀಯ ನಾಗರಿಕತೆಗೆ ಅನುಗುಣವಾಗಿ ಜಾತ್ಯತೀತವನ್ನು ಪುನರ್‌ವಿಮರ್ಶಿಸಬೇಕಾಗಿದೆ ಎಂದರು. **(ಉದಯವಾಣಿ 22–7–2021)**

## 5ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಹಲವು ಸೌಲಭ್ಯ

**ಕೊಟ್ಟಾಯಂ:** ಕೇರಳದಲ್ಲಿ ಐದು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಕ್ರೈಸ್ತ ಕುಟುಂಬಗಳಿಗಾಗಿ ಕ್ಯಾಥೊಲಿಕ್ ಚರ್ಚ್‌ವೊಂದು ವಿಶೇಷ ಕ್ಷೇಮಾಭಿವೃದ್ಧಿ ಯೋಜನೆಯನ್ನು ಘೋಷಿಸಿದೆ. ತಮ್ಮ ಸಮುದಾಯದ ಜನಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. 2000 ಇಸವಿಯ ಅನಂತರ ಮದುವೆಯಾಗಿರುವ ಹಾಗೂ 5 ಅಥವಾ ಐದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಕ್ರೈಸ್ತ ದಂಪತಿಗೆ ಮಾಸಿಕ 1,500 ರೂ. ಗಳ ಮಾಸಿಕ ಸಹಾಯ ಧನ ನೀಡುವುದಾಗಿ ಕೊಟ್ಟಾಯಂನ ಸಿರೊ-ಮಲಬಾರ್ ಚರ್ಚ್‌ನ ಪಾಲಾ ಡಯೊಸೀಸ್ ಅಧೀನದಲ್ಲಿರುವ ಫ್ಯಾಮಿಲಿ ಅಪೋಸ್ಟೋಲೇಟ್ ಸಮಿತಿ ಪ್ರಕಟಿಸಿದೆ.

ಕಳೆದ ಕೆಲವು ವರ್ಷಗಳಿಂದ ಕೇರಳದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆ ಇಳಿಮುಖವಾಗುತ್ತಿದ್ದು, ಅದನ್ನು ಹೆಚ್ಚಿಸುವುದು ಕೂಡ ನಮ್ಮ ಉದ್ದೇಶ. ಅದಕ್ಕಿಂತಲೂ ಮುಖ್ಯವಾಗಿ ಕೊರೊನಾದಿಂದ ಸಂಕಷ್ಟಕ್ಕೆ ಸಿಲುಕಿರುವ ಕ್ರೈಸ್ತ ಕುಟುಂಬಗಳಿಗೆ ನೆರವು ನೀಡಲು ಈ ಯೋಜನೆ ಜಾರಿಗೊಳಿಸಲಾಗಿದೆ ಎಂದು ಚರ್ಚ್ ತಿಳಿಸಿದೆ. ಆಗಸ್ಟ್‌ನಿಂದ ಇದು ಅನುಷ್ಠಾನಗೊಳ್ಳಲಿದೆ. **(ಉದಯವಾಣಿ 28-7-2021)**

## ಚೀನದಲ್ಲಿನ್ನು 3 ಮಕ್ಕಳಿಗೆ ಅವಕಾಶ

**ಬೀಜಿಂಗ್:** ಚೀನದಲ್ಲಿ ಇನ್ನು ಮುಂದೆ ದಂಪತಿ ಮೂವರು ಮಕ್ಕಳನ್ನು ಪಡೆಯಬಹುದು. ಈ ಬಗ್ಗೆ ನ್ಯಾಶನಲ್ ಪೀಪಲ್ಸ್ ಕಾಂಗ್ರೆಸ್‌ನ ಸ್ಥಾಯಿ ಸಮಿತಿ ಸಭೆಯಲ್ಲಿ ಜನಸಂಖ್ಯಾ ಮತ್ತು ಕುಟುಂಬ ಯೋಜನೆ ಕಾನೂನಿನಲ್ಲಿ ಬದಲಾವಣೆ ಮಾಡುವ ಬಗ್ಗೆ ಸಮ್ಮತಿ ನೀಡಲಾಗಿದೆ. ಜನಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿರುವ ಚೀನದಲ್ಲಿ ಇತ್ತೀಚೆಗೆ ನಡೆದಿದ್ದ ಅಧ್ಯಯನದಲ್ಲಿ ಜನನ ಪ್ರಮಾಣ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿತ್ತು.

ಜನಗಣತಿಯ ಅಂಶಗಳ ಪ್ರಕಾರ 60 ವರ್ಷಕ್ಕಿಂತ ಮೇಲ್ಪಟ್ಟವರ ಸಂಖ್ಯೆ 264 ಮಿಲಿಯನ್ ಅಥವಾ ಶೇ. 18.7ರಷ್ಟು ಏರಿಕೆಯಾಗಿತ್ತು. ಜತೆಗೆ ಒಂದು ದಶಕಕ್ಕೆ ಹೋಲಿಕೆ ಮಾಡಿದರೆ ಜನಸಂಖ್ಯಾ ಪ್ರಮಾಣ ನಿಧಾನಗತಿಯಲ್ಲಿ ಅಂದರೆ 1.412 ಬಿಲಿಯನ್‌ನಷ್ಟಾಗಿತ್ತು. ಮುಂದಿನ ವರ್ಷ ಈ ಪ್ರಮಾಣ ಮತ್ತಷ್ಟು ಕುಸಿಯಲಿದೆ ಎಂದು ಗಣತಿಯ ವೇಳೆ ಕಂಡು ಬಂದಿತ್ತು. ಆ ದೇಶದಲ್ಲಿ ಜೀವನ ವೆಚ್ಚ ಹೆಚ್ಚಾಗಿರುವುದರಿಂದ ನೂತನ ದಂಪತಿ ಮಕ್ಕಳನ್ನು ಪಡೆಯಲು ಆಸಕ್ತಿ ಹೊಂದಿಲ್ಲ. ಹೀಗಾಗಿ, ಈ ಸವಾಲು ಎದುರಿಸುವ ನಿಟ್ಟಿನಲ್ಲಿ ಚೀನ ಸರಕಾರ ದಂಪತಿಗೆ ವಿತ್ತೀಯ ನೆರವನ್ನೂ ನೀಡುವ ಬಗ್ಗೆ ಘೋಷಣೆ ಮಾಡಿದೆ. **(ಉದಯವಾಣಿ 21-8-2021)**

## ಲೈಂಗಿಕ ದೌರ್ಜನ್ಯ: ಪೋಪ್ ಕಠಿನ ಕ್ರಮ

**ವ್ಯಾಟಿಕನ್ ಸಿಟಿ:** ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಲೈಂಗಿಕ ದೌರ್ಜನ್ಯಗಳ ಪ್ರಕರಣಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಇಂತಹ ಕೃತ್ಯಗಳ ವಿರುದ್ಧ ರೋಮ್‌ನ ವ್ಯಾಟಿಕನ್‌ನಲ್ಲಿರುವ ಕೇಂದ್ರ ಚರ್ಚ್ ಕಠಿನ ಕ್ರಮ ತೆಗೆದುಕೊಂಡಿದೆ. ಕ್ರೈಸ್ತ ಜಗತ್ತಿನ ಅಗ್ರಗಣ್ಯ ಗುರು ಪೋಪ್ ಫ್ರಾನ್ಸಿಸ್, ಕ್ಯಾಥೋಲಿಕ್ ಚರ್ಚ್‌ಗಳ ನಿಯಮಗಳಲ್ಲಿ ಬದಲಾವಣೆ ತಂದಿದ್ದಾರೆ. ಇನ್ನು ಅಪ್ರಾಪ್ತ ವಯಸ್ಕರಿಗಾಗಲೀ, ಪ್ರೌಢರಿಗಾಗಲೀ ಚರ್ಚ್ ಆವರಣದಲ್ಲಿ ಯಾರೇ ಕಿರುಕುಳ ನೀಡಿದರೂ ಅವರನ್ನು ಆ ಸ್ಥಾನದಿಂದ ವಜಾಗೊಳಿಸಲಾಗುವುದು. ಅವರಿಗೆ ನೀಡಲಾಗಿರುವ ಧಾರ್ಮಿಕ ಅಧಿಕಾರವನ್ನು ಕಿತ್ತುಕೊಳ್ಳಲಾಗುವುದು ಎಂದು ವ್ಯಾಟಿಕನ್ನಿನ ಹೊಸ ಕ್ಯಾನನ್ ನಿಯಮಗಳಲ್ಲಿ ತಿಳಿಸಲಾಗಿದೆ. ಇದು ಜಗತ್ತಿನಲ್ಲಿರುವ 103 ಕೋಟಿ ಕ್ಯಾಥೋಲಿಕ್ ಚರ್ಚ್‌ಗಳಿಗೆ ಅನ್ವಯವಾಗುತ್ತದೆ. **(ಉದಯವಾಣಿ 2-6-2021)**

## ಕೇರಳದ ಕ್ರೈಸ್ತ ಸನ್ಯಾಸಿನಿ ಲೂಸಿ ಮನವಿ ತಿರಸ್ಕೃತ

**ತಿರುವನಂತಪುರ:** ಕೇರಳದ ರೋಮನ್ ಕ್ಯಾಥೋಲಿಕ್ ಚರ್ಚ್‌ನಿಂದ 2019ರಲ್ಲಿ ತಮ್ಮನ್ನು ಬಹಿಷ್ಕರಿಸಿರುವ 'ಫ್ರಾನ್ಸಿಸ್ಯನ್ ಕ್ಲಾರಿಸ್ಟ್ ಕಾಂಗ್ರೆಷನ್'ನ (ಎಫ್‌ಸಿಸಿ) ನಿರ್ಧಾರವನ್ನು ಪ್ರಶ್ನಿಸಿ, ಕೇರಳದ ಕ್ರೈಸ್ತ ಸನ್ಯಾಸಿನಿ ಲೂಸಿ ಕಲಪ್ಪುರಾ ಅವರು, ಸಲ್ಲಿಸಿದ್ದ ಮೇಲ್ಮನವಿಯನ್ನು ವ್ಯಾಟಿಕನ್ ಸಿಟಿಯಲ್ಲಿರುವ ಕ್ಯಾಥೋಲಿಕ್ ಚರ್ಚ್‌ಗಳಿಗೆ ಸಂಬಂಧಿಸಿದ ವ್ಯಾಜ್ಯಗಳ ಪರಿಹಾರ ನ್ಯಾಯಾಧಿಕರಣ 'ಅಪೋಸ್ಟಾಲಿಕಾ ಸಿಗ್ನಾ ಚುರಾ' ತಿರಸ್ಕರಿಸಿದೆ. ಕಳೆದ ವರ್ಷ ತಮ್ಮ ಮೊದಲ ಮೇಲ್ಮನವಿಯನ್ನು ತಿರಸ್ಕರಿಸಿದ 'ಅಪೋಸ್ಟಾಲಿಕಾ ಸಿಗ್ನಾ ಚುರಾ'ಕ್ಕೆ ಈ ವರ್ಷ ಮಾರ್ಚ್‌ನಲ್ಲಿ 2ನೇ ಮೇಲ್ಮನವಿಯನ್ನು ಲೂಸಿ ಅವರು ಸಲ್ಲಿಸಿದ್ದರು. ಇದೂ ಕೂಡ ತಿರಸ್ಕೃತಗೊಂಡಿದೆ. 2019ರಲ್ಲಿ ತಮ್ಮ ಕ್ರೈಸ್ತ ಸನ್ಯಾಸಿನಿಯೊಬ್ಬರನ್ನು ಅತ್ಯಾಚಾರಗೈದ ಆರೋಪ ಹೊತ್ತಿದ್ದ ಬಿಷಪ್ ಫ್ರಾಂಕೋ ಮುಲಕ್ಕಲ್ ಅವರನ್ನು ಬಿಷಪ್ ಸ್ಥಾನದಿಂದ ಕಿತ್ತೊಗೆಯಬೇಕೆಂದು ಆಗ್ರಹಿಸಿ ನಡೆಸಲಾಗಿದ್ದ ಪ್ರತಿಭಟನೆಗಳಲ್ಲಿ ಲೂಸಿ ಪಾಲ್ಗೊಂಡಿದ್ದರು. ಆ ಹಿನ್ನೆಲೆಯಲ್ಲಿ ಅವರನ್ನು ಎಫ್‌ಸಿಸಿ ಬಹಿಷ್ಕರಿಸಿತ್ತು.

**(ಉದಯವಾಣಿ 15-6-2021)**

## ಅತ್ಯಾಚಾರಿ ಜತೆ ಮದುವೆ: ಸಂತ್ರಸ್ತೆ ಮನವಿ

**ತಿರುವನಂತಪುರ:** ರೋಮನ್ ಕ್ಯಾಥೊಲಿಕ್ ಚರ್ಚ್‌ನ ಪಾದ್ರಿಯೊಬ್ಬರಿಂದ ಅತ್ಯಾಚಾರಕ್ಕೊಳಗಾಗಿದ್ದ ಮಹಿಳೆಯೊಬ್ಬರು, ತಮ್ಮನ್ನು ಬಲಾತ್ಕಾರ ಮಾಡಿದ್ದ ಪಾದ್ರಿಯೊಂದಿಗೆ ಮದುವೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಸುಪ್ರೀಂ ಕೋರ್ಟ್‌ಗೆ ಮನವಿ

ಸಲ್ಲಿಸಿದ್ದಾರೆ. ಅವರ ಅರ್ಜಿ ಸ್ವೀಕರಿಸಿರುವ ನ್ಯಾಯಾಲಯ, ಸೋಮವಾರದಿಂದ ವಿಚಾರಣೆ ಆರಂಭಿಸುವುದಾಗಿ ತಿಳಿಸಿದೆ. 2016ರಲ್ಲಿ ಪಾದ್ರಿಯವರ ನಿವಾಸದಲ್ಲಿ ಆಗ 10ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದ ಈ ಮಹಿಳೆಯ ಮೇಲೆ ಪಾದ್ರಿ ವಡಕ್ಕುಂಚೆರ್ರಿ ಅತ್ಯಾಚಾರ ಎಸಗಿದ್ದರು. ಇದು ಹೊರಬಂದ ಅನಂತರ, ವಡಕ್ಕುಂಚೆರಿಯನ್ನು ಪಾದ್ರಿ ಸ್ಥಾನದಿಂದ ತೆಗೆದು ಹಾಕಲಾಗಿತ್ತು.

**(ಉದಯವಾಣಿ 1–8–2021)**

## ಗಾಂಧಿ ಮರಿಮೊಮ್ಮಗಳಿಗೆ ಜೈಲು

**ಡರ್ಬನ್:** ಮಹಾತ್ಮಾ ಗಾಂಧೀಜಿಯ ಮರಿಮೊಮ್ಮಗಳು ಲತಾ ರಾಮಗೋಬಿಂದ್‌ಗೆ ದ.ಆಫ್ರಿಕಾದ ಡರ್ಬನ್‌ನ ಕೋರ್ಟ್ 7 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಉದ್ಯಮಿ ಎಸ್.ಆರ್. ಮಹಾರಾಜ್‌ಗೆ ನಕಲಿ ದಾಖಲೆ ತೋರಿಸಿ 3.22 ಕೋಟಿ ರೂ. ಗಳನ್ನು ವಂಚಿಸಿದ್ದೇ ಇದಕ್ಕೆ ಕಾರಣ. 2015ರಲ್ಲಿ ಎಸ್.ಆರ್. ಮಹಾರಾಜ್‌ರನ್ನು ಭೇಟಿ ಮಾಡಿದ್ದ ಲತಾ, ತಾನು ಭಾರತದಿಂದ 3 ಕಂಟೈನರ್ ಲಿನೆನ್ ಬಟ್ಟೆ ತರಿಸಿಕೊಂಡಿದ್ದು ಸೀಮಾಸುಂಕ ಕಟ್ಟಲು ಹಣವಿಲ್ಲ, ಅದಕ್ಕಾಗಿ 6.2 ದಶಲಕ್ಷ ರ್‍ಯಾಂಡ್ ಹಣಬೇಕೆಂದು ಕೇಳಿಕೊಂಡಿದ್ದರು. ನಕಲಿ ದಾಖಲೆಗಳನ್ನು ಸತ್ಯವೆಂದು ಬಿಂಬಿಸಿದ್ದರು. **(ಉದಯವಾಣಿ 9–6–2021)**

## ಶವಾಗಾರ ಸಹಾಯಕ ಹುದ್ದೆ: 8,000 ಅರ್ಜಿ!

**ಕೋಲ್ಕತಾ:** ಪಶ್ಚಿಮ ಬಂಗಾಲದ ಸರಕಾರಿ ಸ್ವಾಮ್ಯದ ನೀಲ್ ರತನ್, ಸರ್ಕಾರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಫಾರೆನ್ಸಿಕ್ ಮೆಡಿಸಿನ್ ಆ್ಯಂಡ್ ಟಾಕ್ಸಿಕಾಲಜಿ ಡೆವಲಮ್‌ಮೆಂಟ್‌ನ ಪ್ರಯೋಗಾಲಯದಲ್ಲಿ ಹಾಗೂ ಅದೇ ಆಸ್ಪತ್ರೆಯಲ್ಲಿನ ಶವಾಗಾರದಲ್ಲಿ ಖಾಲಿ ಇರುವ ಒಟ್ಟು 6 ಸಹಾಯಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಒಟ್ಟು 8,000 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಮಾಸಿಕ ವೇತನ 15,000 ರೂ. ಇರುವ ಹುದ್ದೆಗಳಿಗೆ ಸುಮಾರು 100 ಎಂಜಿನಿಯರ್‌ಗಳು, 500 ಸ್ನಾತಕೋತ್ತರ ಹಾಗೂ 2,200 ಪದವೀಧರರೂ ಅರ್ಜಿ ಸಲ್ಲಿಸಿದ್ದಾರೆ. ಒಟ್ಟಾರೆ, 8,000 ಅರ್ಜಿಗಳಲ್ಲಿ 784 ಅರ್ಜಿಗಳನ್ನು ಅಂತಿಮಗೊಳಿಸಿ, ಅವರನ್ನು ಆ. 1ರಂದು ನಡೆಯುವ ಪ್ರವೇಶ ಪರೀಕ್ಷೆಗೆ ಆಹ್ವಾನಿಸಲಾಗಿದೆ. ಇದೇ ರೀತಿ, 2019ರಲ್ಲಿ ಕರೆಯಲಾಗಿದ್ದ ತಮಿಳುನಾಡಿನ ಸಚಿವಾಲಯಗಳಲ್ಲಿನ ಶೌಚಾಲಯ ಸ್ವಚ್ಛಗೊಳಿಸುವ ಪೌರಕಾರ್ಮಿಕರ ಹುದ್ದೆಗಳಿಗೆ ಬಂದಿದ್ದ 7,000 ಅರ್ಜಿಗಳಲ್ಲಿ ನೂರಾರು ಎಂಜಿನಿಯರ್‌ಗಳು, ಸ್ನಾತಕೋತ್ತರ ಪದವೀಧರರೂ ಇದ್ದರು. **(ಉದಯವಾಣಿ 25–7–2021)**

## ಗಲ್ಲು ಶಿಕ್ಷೆ ಅಭ್ಯಾಸಕ್ಕೆ ಹೋಗಿ ಬಾಲಕ ಸಾವು

**ಬದೌನ್:** ಭಗತ್‌ಸಿಂಗ್ ನಾಟಕ ಅಭ್ಯಾಸ ಮಾಡುತ್ತಿದ್ದ ವೇಳೆ ಕುತ್ತಿಗೆಗೆ ಹಾಕಿಕೊಂಡಿದ್ದ ಕುಣಿಕೆ ಆಕಸ್ಮಿಕವಾಗಿ ಬಿಗಿದುಕೊಂಡು ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಬಾಬತ್ ಗ್ರಾಮದ ಶಿವಂ (10) ಮೃತ ಬಾಲಕ. ಸ್ವಾತಂತ್ರ್ಯ ದಿನಾಚರಣೆಗೆಂದು ಇತರ ಮಕ್ಕಳೊಂದಿಗೆ ಸೇರಿ ನಾಟಕ ಅಭ್ಯಾಸ ಮಾಡುತ್ತಿದ್ದ. ಗಲ್ಲು ಶಿಕ್ಷೆಯ ಸನ್ನಿವೇಶ ಪ್ರದರ್ಶನದ ವೇಳೆ ಕಾಲ ಕೆಳಗೆ ಹಾಕಿದ್ದ ಸ್ಟೂಲ್ ಜಾರಿದ್ದು, ಕುತ್ತಿಗೆಗೆ ಹಾಕಿಕೊಂಡಿದ್ದ ಕುಣಿಕೆ ಬಿಗಿದುಕೊಂಡು ಬಾಲಕ ಒದ್ದಾಡುತ್ತಿದ್ದಾಗ ಅಲ್ಲೇ ಇದ್ದ ಮಕ್ಕಳು ಕಿರುಚಿಕೊಂಡಿದ್ದಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಸ್ಥಳೀಯರು ಕುಣಿಕೆ ಕತ್ತರಿಸಿದ್ದಾರೆ. ಆದರೆ ಅಷ್ಟರಲ್ಲಿ ಬಾಲಕ ಅಸುನೀಗಿದ್ದ ಎನ್ನಲಾಗಿದೆ.

**(ಉದಯವಾಣಿ 1–8–2021)**

## ಅಂತೂ ಬದುಕುಳಿಯಿತು ವಿಶ್ವದ ಅತೀ ಕಡಿಮೆ ತೂಕದ ಶಿಶು!

**ಸಿಂಗಾಪುರ:** 13 ತಿಂಗಳ ಹಿಂದೆ ಜನಿಸಿದ್ದ ವಿಶ್ವದ ಅತೀ ಕಡಿಮೆ ತೂಕದ ಶಿಶು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದೆ. ಕ್ವೆಕ್ ಯು ಕ್ಸುಯಾನ್ ಹೆಸರಿನ ಈ ಮಗು ಸಿಂಗಾಪುರದ ನ್ಯಾಷನಲ್ ಯುನಿವರ್ಸಿಟಿ ಆಸ್ಪತ್ರೆಯಲ್ಲಿ ಜೂ. 9ರಂದು ಜನಿಸಿತ್ತು. ಕೇವಲ 212 ಗ್ರಾಂ ಅಂದರೆ ಒಂದು ಆ್ಯಪಲ್‌ನಷ್ಟು ತೂಕವಿದ್ದು, ಇಡೀ ವಿಶ್ವದಲ್ಲೆ ದಾಖಲೆ ಬರೆದಿತ್ತು.

ಕ್ವೆಕ್ ತಾಯಿ 7 ತಿಂಗಳ ಗರ್ಭಿಣಿ (25 ವಾರಗಳು) ಆಗಿದ್ದಾಗಲೇ ಮಗು ಜನಿಸಿತ್ತು. ಹೆರಿಗೆಯಾದ ತತ್‌ಕ್ಷಣವೇ ಮಗುವನ್ನು ಐಸಿಯುಗೆ ದಾಖಲಿಸಲಾಗಿದ್ದು, ಅಲ್ಲಿಂದ ಬರೋಬ್ಬರಿ 13 ತಿಂಗಳುಗಳ ಕಾಲ ಐಸಿಯುವಿನಲ್ಲಿ ಚಿಕಿತ್ಸೆ ನೀಡಲಾಗಿದೆ. ಕೇವಲ 24 ಸೆಂ.ಮೀ ಉದ್ದವಿದ್ದ ಮಗುವಿನ ಚರ್ಮಕ್ಕೆ ಬ್ಯಾಂಡೆಡ್ ಹಾಕುವುದರಿಂದ ಹಿಡಿದು, ಡೈಪರ್ ಹಾಕುವವರೆಗೆ ಎಲ್ಲವೂ ಒಂದು ಸಾಹಸವಾಗಿತ್ತು ಎನ್ನುತ್ತಾರೆ ಚಿಕಿತ್ಸೆ ನೀಡಿದ ವೈದ್ಯಕೀಯ ಸಿಬಂದಿ. ಇದೀಗ ಮಗು 6.3 ಕೆಜಿ ತೂಕವಾಗಿದೆ. ಆಕೆಯ ಪೋಷಕರಿಗೆ ಕೆಲವು ವೈದ್ಯಕೀಯ ಸಲಕರಣೆಗಳ ಬಳಕೆಯ ಬಗ್ಗೆ ತರಬೇತಿ ನೀಡಲಾಗಿದ್ದು, ಮನೆಯಲ್ಲಿ ಚಿಕಿತ್ಸೆ ಮುಂದುವರಿಸುವುದಾಗಿ ತಿಳಿಸಲಾಗಿದೆ.

**(ಉದಯವಾಣಿ 10–8–2021)**

## ಧರ್ಮನಿಂದನೆ ಸುಳಿಗೆ 8ರ ಬಾಲಕ!

**ಇಸ್ಲಾಮಾಬಾದ್:** ಪಾಕಿಸ್ಥಾನದಲ್ಲಿ ಕೇವಲ 8 ವರ್ಷದ ಹಿಂದೂ ಬಾಲಕನೊಬ್ಬನ ಮೇಲೆ ಧರ್ಮನಿಂದನೆ ಆರೋಪ ಹೊರಿಸಲಾಗಿದೆ. ಈ ಹುಡುಗ ಈಗ ಪಾಕ್ ಪೊಲೀಸರ ರಕ್ಷಣೆಯಲ್ಲಿದ್ದು, ದೇಶದಲ್ಲೇ ಧರ್ಮನಿಂದನೆ ಆರೋಪ ಹೊತ್ತ ಅತೀ ಕಿರಿಯ ವ್ಯಕ್ತಿಯಾಗಿದ್ದಾನೆ.

ಪಂಜಾಬ್ ಪ್ರಾಂತ್ಯದ ರಹಿಮ್ ಯಾರ್‌ಖಾನ್ ಸಂಪ್ರದಾಯವಾದಿ ಜಿಲ್ಲೆಯೊಂದರಲ್ಲಿ ಕಳೆದ ತಿಂಗಳು, ಧಾರ್ಮಿಕ ಗ್ರಂಥಗಳನ್ನು ಇಟ್ಟಿರುವ ಮದರಸಾದ ಕಾರ್ಪೆಟ್ ಮೇಲೆ ಉದ್ದೇಶಪೂರ್ವಕವಾಗಿ ಮೂತ್ರ ವಿಸರ್ಜನೆ ಮಾಡಿದ ಆರೋಪ ಈತನ ಮೇಲಿದೆ. ಪಾಕ್ ಕಾನೂನಿನಂತೆ ಈ ಅಪರಾಧಕ್ಕೆ ಮರಣದಂಡನೆ ವಿಧಿಸಬಹುದಾಗಿದೆ. ಕಳೆದ ವಾರ ಬಾಲಕನಿಗೆ ಜಾಮೀನು ಸಿಕ್ಕಿತ್ತು. ಆತನಿಗೆ ಧರ್ಮನಿಂದನೆ ಬಗ್ಗೆ ಗೊತ್ತಿಲ್ಲ. ಅಪರಾಧವನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಕುಟುಂಬ ಸದಸ್ಯರು ಹೇಳಿದ್ದಾರೆ. **(ಉದಯವಾಣಿ 10–8–2021)**

==========================================================

## ವ್ಯಕ್ತಿಯ ದೇಹದಲ್ಲಿ ಐದು ಕಿಡ್ನಿ

**ಚೆನ್ನೈ:** ಮನುಷ್ಯರಿಗೆ 2 ಕಿಡ್ನಿ ಇರುವುದು ಸಾಮಾನ್ಯ. ಚೆನ್ನೈಯಲ್ಲಿರುವ ವ್ಯಕ್ತಿಗೆ ಐದು ಕಿಡ್ನಿಗಳಿವೆ. 14ನೇ ವರ್ಷದಲ್ಲೇ ಕಸಿ ಮಾಡಿಸಿಕೊಂಡಿದ್ದ 41 ವರ್ಷದ ಅವರಿಗೆ ಮೂರನೇ ಬಾರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 1994ರಲ್ಲಿ ಮೊದಲ ಕಿಡ್ನಿ ಕಸಿ ಮಾಡಿಸಿಕೊಂಡಿದ್ದ ಆತನಿಗೆ 2004ರ ವೇಳೆಗೆ ಅದು ಕೆಲಸ ನಿಲ್ಲಿಸಿತ್ತು. ಅದೇ ವರ್ಷ ಮತ್ತೊಂದು ಕಿಡ್ನಿಯನ್ನು ಆತನಿಗೆ ಕಸಿ ಮಾಡಿಸಲಾಗಿತ್ತು. ಒಂದು ಹಂತದಲ್ಲಿ ಎರಡನೇ ಶಸ್ತ್ರಚಿಕಿತ್ಸೆಯಲ್ಲಿ ಅಳವಡಿಸಿದ್ದೂ ಕೆಲಸ ಮಾಡುತ್ತಿರಲಿಲ್ಲ. ಜು. 10ರಂದು ಮೂರನೇ ಬಾರಿಗೆ ಕಿಡ್ನಿ ಕಸಿ ಮಾಡಲಾಯಿತು. ಕಾರ್ಯ ಮಾಡದ ಕಿಡ್ನಿಗಳನ್ನು ಹೊರತೆಗೆದರೆ ಅಧಿಕ ರಕ್ತ ಸ್ರಾವ ಉಂಟಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಹಳೆ ಕಿಡ್ನಿ ತೆಗೆಯದೇ ಅಪರೇಷನ್ ಮಾಡಲಾಗಿದೆ ಎಂದು ಡಾ। ಶರವಣನ್ ತಿಳಿಸಿದ್ದಾರೆ. **(ಉದಯವಾಣಿ 12–8–2021)**

==========================================================

## ಗರ್ಭಿಣಿ ಬೆಕ್ಕನ್ನು ರಕ್ಷಿಸಿದವರಿಗೆ ತಲಾ 10 ಲಕ್ಷ ರೂ. ಬಹುಮಾನ!

ದುಬೈಯಲ್ಲಿ ಕಟ್ಟಡದಿಂದ ಕೆಳಕ್ಕೆ ಬೀಳುತ್ತಿದ್ದ ಗರ್ಭಿಣಿ ಬೆಕ್ಕೊಂದನ್ನು ಕೇರಳದ ಇಬ್ಬರು ಸೇರಿ ನಾಲ್ವರು ಯುವಕರು ರಕ್ಷಿಸಿದ ವೀಡಿಯೋವೊಂದು ಭಾರೀ ವೈರಲ್ ಆಗಿತ್ತು. ಈ ವೀಡಿಯೋ ಈಗ ದುಬೈ ದೊರೆಯನ್ನೂ ತಲುಪಿದ್ದು, ದೊರೆ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಖ್ತೂಮ್ ಅವರು ಯುವಕರ ಮಾನವೀಯ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿ, ತಲಾ 10 ಲಕ್ಷ ರೂ. ನಗದು ಬಹುಮಾನ ನೀಡಿದ್ದಾರೆ. ಕೇರಳದ ನಸೀರ್ ಶಿಹಾಬ್, ಮುಹಮ್ಮದ್ ರಶೀದ್, ಪಾಕಿಸ್ಥಾನದ ಆತಿಫ್, ಮೊರೊಕ್ಕೋದ ಅಶ್ರಫ್ ಈ ಬಹುಮಾನ ಪಡೆದರು. **(ಉದಯವಾಣಿ 29–8–2021)**

==========================================================

## ಸೌದಿಯಲ್ಲೀಗ ಸೇನೆಯಲ್ಲೂ ಮಹಿಳೆ

**ರಿಯಾದ್:** ಸೌದಿ ಅರೇಬಿಯಾದ ಮಹಿಳಾ ಯೋಧರ ಮೊದಲ ಬ್ಯಾಚ್ ಸೇನೆಗೆ ಸೇರ್ಪಡೆಯಾಗಲು ಸಜ್ಜಾಗಿದೆ. ಈ ತಂಡವು ಸಶಸ್ತ್ರ ಪಡೆಗಳ ಮಹಿಳಾ ಕೇಡರ್ ತರಬೇತಿ ಕೇಂದ್ರದಲ್ಲಿ 14 ವಾರಗಳ ಬೇಸಿಕ್ ತರಬೇತಿ ಮುಗಿಸಿದೆ. ಸೌದಿ ಅರೇಬಿಯಾವು ಮಹಿಳೆಯರ ಸಶಕ್ತೀಕರಣ ನಿಟ್ಟಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಹೆಜ್ಜೆಗಳನ್ನು ಇಟ್ಟಿತ್ತು. ಅದಕ್ಕೆ ಹೊಸ ಸೇರ್ಪಡೆಯೆಂಬಂತೆ, ಸ್ತ್ರೀಯರನ್ನೂ ಸೇನೆಗೆ ನೇಮಕ ನಿರ್ಧಾರವನ್ನು ಪ್ರಸಕ್ತ ವರ್ಷದ ಫೆಬ್ರವರಿಯಲ್ಲಿ ಘೋಷಿಸಿತ್ತು. ಅದರಂತೆ, ಈಗ ಸೌದಿ ಸೇನೆಯಲ್ಲಿ ಸೈನಿಕನಿಂದ ಹಿಡಿದು ಮೇಲ್ದರ್ಜೆ ಅಧಿಕಾರಿಯವರೆಗೆ ವಿವಿಧ ಹುದ್ದೆಗಳನ್ನು ಮಹಿಳೆಯರೂ ಪಡೆಯಬಹುದು. **(ಉದಯವಾಣಿ 4–9–2021)**

==========================================================

## ಮಾಜಿ ಸಿಎಂ ಎಸೆಸೆಲ್ಸಿ ಪಾಸ್!

**ಚಂಡಿಗಢ:** ಹರಿಯಾಣ ಮಾಜಿ ಮುಖ್ಯಮಂತ್ರಿ, ಇಂಡಿಯನ್ ನ್ಯಾಶನಲ್ ಲೋಕ ದಳ (ಐಎನ್‌ಎಲ್‌ಡಿ) ಮುಖ್ಯಸ್ಥ ಒಪಿ ಚೌಟಾಲ (86) ಈ ವರ್ಷ 10ನೇ ತರಗತಿಯ ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದಾರೆ. ಆ.18ರಂದು ಇಂಗ್ಲಿಷ್ ವಿಷಯದಲ್ಲಿ ಪರೀಕ್ಷೆ ಬರೆದಿದ್ದ ಅವರು 88 ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ. ರಾಜ್ಯದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಅತ್ಯಂತ ಹಿರಿಯ ವಯಸ್ಸಿನಲ್ಲಿ 10ನೇ ತರಗತಿ ಪರೀಕ್ಷೆ ಬರೆದು ಪಾಸಾದವರೆಂಬ ಹೆಗ್ಗಳಿಕೆ ಪಡೆದಿದ್ದಾರೆ. 2017ರಲ್ಲಿ ತಿಹಾರ್ ಜೈಲಿನಲ್ಲಿದ್ದಾಗಲೇ ಎಸೆಸೆಲ್ಸಿ ಪರೀಕ್ಷೆ ಬರೆದಿದ್ದರು. ಆಗ ಇಂಗ್ಲಿಷ್‌ನಲ್ಲಿ ಫೇಲ್ ಆಗಿದ್ದರು. **(ಉದಯವಾಣಿ 6–9–2021)**

==========================================================

## ತಾಲಿಬಾನಿಗಳ ಆದಾಯ

ತಾಲಿಬಾನಿಗಳಿಗೆ, 'ದೋ ನಂಬರ್ ಕಾ ದಂಧೆ'ಯಿಂದ ಬರುವ ಲಾಭವೇ ಅಧಿಕ. ಅಫ್ಘಾನಿಸ್ಥಾನ – ಪಾಕಿಸ್ಥಾನ ಗಡಿಭಾಗದ ಪ್ರದೇಶದಲ್ಲಿರುವ ನಂಗಹಾರ್ ಪ್ರಾಂತ್ಯದ ಡರ್ರಾ–ಐ–ನೂರ್ ಎಂಬ ಊರು ಹಾಗೂ ಸುತ್ತಲಿನ ಪ್ರಾಂತ್ಯಗಳಲ್ಲಿ ಹೇರಳವಾಗಿ ಗಾಂಜಾ ಬೆಳೆಯುತ್ತಾರೆ. ಜಗತ್ತಿನಲ್ಲಿ ಬಳಕೆಯಾಗುವ ಶೇ. 84ರಷ್ಟು ಗಾಂಜಾ ಇಲ್ಲೇ ಬೆಳೆಯುತ್ತದೆ ಎಂದು '2020ರ ವಿಶ್ವಸಂಸ್ಥೆಯ ಜಾಗತಿಕ ಮಾದಕವಸ್ತು ವರದಿ' ಹೇಳುತ್ತದೆ. ಅದರಿಂದಲೇ ಕೋಟಿಗಟ್ಟಲೆ ದುಡ್ಡು ಬರುತ್ತದೆ. 2001ರಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ, ತಾಲಿಬಾನಿಗಳಿಗೆ ವಾರ್ಷಿಕ 2.9 ಲಕ್ಷ ಕೋಟಿ ರೂ. ಹಣ ಹರಿದು ಬರುತ್ತಿರುವುದು ತಿಳಿದುಬಂದಿತ್ತು. ಈಗ ಅದು, 11 ಸಾವಿರ ಕೋಟಿ ರೂ. ಮೀರಿದೆ ಎನ್ನಲಾಗಿದೆ. **(ಉದಯವಾಣಿ 16–8–2021)**

**ವಾರ್ಷಿಕ ಆದಾಯ: ಎಲ್ಲಿಂದ, ಎಷ್ಟೆಷ್ಟು?: 3,100 ಕೋಟಿ ರೂ. ಡ್ರಗ್ಸ್ ದಂಧೆ. 3,400 ಕೋಟಿ ರೂ ಗಣಿಗಾರಿಕೆ. 1,193 ಕೋಟಿ ರೂ ತೆರಿಗೆ ಮತ್ತು ವಸೂಲಿ. 1,790 ಕೋಟಿ ರೂ. ಮುಸ್ಲಿಂ ದೇಶಗಳ ದೇಣಿಗೆ. 1,700 ಕೋಟಿ ರೂ. ರಫ್ತು. 596 ಕೋಟಿ ರೂ. ರಿಯಲ್ ಎಸ್ಟೇಟ್.**

# ಕ್ರಾಂತಿಕಾರಿ ನಟ ನಾನಾ ಪಾಟೇಕರ್



ನೇರ ನಡೆನುಡಿಯ ಬಾಲಿವುಡ್ ಕ್ರಾಂತಿಕಾರಿ ನಟ ನಾನಾ ಪಾಟೇಕರ್ ಇವರು ವಲಸೆ ಕಾರ್ಮಿಕರಿಗೆ ಕೊಟ್ಟ ಸಲಹೆ ಏನೆಂದರೆ? ದೇಶದಲ್ಲಿ ಪುನಃ ಲಾಕ್‌ಡೌನ್ ಆದರೆ ನೀವು ನಿಮ್ಮ ತವರೂರಿಗೆ ಸಾವಿರಾರು ಕಿಮಿ ದೂರ ಮಕ್ಕಳು ಮರಿಗಳೊಂದಿಗೆ ನಡೆದು ಹೋಗುವ ಸಂದರ್ಭ ಬಂದರೆ ಆಗತ್ಯವಾಗಿ ಮುಸ್ಲಿಮರ ಮನೆಗಳಿರುವ ದಾರಿಯಲ್ಲಿಯೇ ನಡೆದುಕೊಂಡು ಹೋಗಿ. ಯಾಕೆಂದರೆ ದಾರಿಯಲ್ಲಿ ನಿಮಗೆ ಹಸಿವು ನೀರಡಿಕೆಯಾದರೆ ಮುಸ್ಲಿಮರ ಓಣಿಯಲ್ಲಿ ನಿಮಗೆ ಒಂದು ಹಿಡಿ ಅನ್ನಕ್ಕೆ ಒಂದು ಲೋಟ ನೀರಿಗೆ ಎಂದೂ ಕೊರತೆ ಬಾರದು.

ಒಂದು ವೇಳೆ ನೀವು ಹಿಂದೂ ಮೇಲ್ಜಾತಿಯವರ ಓಣಿಯಲ್ಲಿ ನಡೆದು ಹೋದರೆ, ನಿಮ್ಮ ಮಗು ಬಾಯಾರಿಕೆಯಿಂದ ಜನರ ಕಣ್ಣೆದುರಿಗೇ ವಿಲಿ ವಿಲಿ ಒದ್ದಾಡಿ ಸಾಯುತ್ತಿದ್ದರೂ ನಿಮಗೆ ಒಂದು ಬೊಗಸೆ ನೀರು ಸಿಗಲಾರದು! ಶತ ಶತಮಾನಗಳಿಂದ ನಡೆದು ಬಂದಿರುವ ಹಿಂದೂ ಮೇಲ್ಜಾತಿಯವರ ಅವಮಾನವೀಯ ವರ್ತನೆಯನ್ನು ಬಿಂಬಿಸುವ ಮಾರ್ಮಿಕ ಮಾತಿದು.

ನಮ್ಮ ನಗರ ಪ್ರದೇಶದ ವಲಸೆ ಕಾರ್ಮಿಕರಲ್ಲಿ ಹೆಚ್ಚಿನವರು ಕೆಳ ಜಾತಿಯವರಾದುದರಿಂದ ನಾನಾ ಪಾಟೇಕರರ ನೇರ ಮಾತು ಅತಿ ಸಮಯೋಚಿತ.

ದಿನೇಶ್ ಪೂಜಾರಿ
ಅಳಕೆ

# ದೇಶಪ್ರೇಮ ಎಂದರೇನು ಗೊತ್ತಾ?



ಒಬ್ಬ ಲಾಯರ್ 46 ಜನ ಅಪರಾಧಿಗಳನ್ನು ಗಲ್ಲುಶಿಕ್ಷೆಯಿಂದ ಪಾರು ಮಾಡುವುದಕ್ಕೆ ವಾದ ಮಾಡುತ್ತಿದ್ದ.

ಆಗಲೇ ಆತನ ಸಹಾಯಕ ಬಂದು ಸಣ್ಣ ಚೀಟಿಯನ್ನು ಆತನ ಕೈಗೆ ತುರುಕಿದ. ಅದನ್ನು ನೋಡಿದ ಆ ನ್ಯಾಯವಾದಿ, ತನ್ನ ಜೇಬಿನಲ್ಲಿ ಅದನ್ನು ಇಟ್ಟು–ಕೊಂಡು, ವಾದವನ್ನು ಮುಂದುವರಿಸಿದ. ಮಧ್ಯಾಹ್ನದ ಊಟದ ವೇಳೆಯಾಯಿತು. ಆಗ ಜಡ್ಜ್ ನ್ಯಾಯವಾದಿಯನ್ನು ಕರೆಸಿ, 'ವಾದ ಮಾಡುವಾಗ ನಿಮಗೆ ಒಂದು ಸಂದೇಶ ಬಂದಿದ್ದು ನಾನು ನೋಡಿದೆ. ಏನದು?' ಎಂದು ಕೇಳಿದರು. ಆಗ ಆ ಲಾಯರ್, 'ನನ್ನ ಹೆಂಡತಿ ಸತ್ತಿದ್ದಾಳೆ ಜಡ್ಜ್ ಸಾಹೇಬರೇ' ಎಂದರು. ಆ ಜಡ್ಜ್ ಆಘಾತ ಮತ್ತು ಆಶ್ಚರ್ಯದಿಂದ, 'ಇಲ್ಲೇನು ಮಾಡುತ್ತಿದ್ದೀರಿ ಮೊದಲು ಮನೆಗೆ ಹೋಗಿ.' ಎಂದರು. ಆಗ ಆ ಲಾಯರ್, ನಾನು ನನ್ನ ಹೆಂಡತಿಯ ಜೀವವನ್ನು ಮರಳಿ ತರಲಾರೆ, ಆದರೆ ಈ 46 ಜನರ ಜೀವವನ್ನಾದರೂ ಉಳಿಸಬಹುದು ಅಲ್ಲವೇ? ಎಂದರು.
ಆ ಜಡ್ಜ್ ಒಬ್ಬ ಬ್ರಿಟಿಷ್ ಆಗಿದ್ದ, ಆ ಎಲ್ಲಾ 46 ಜನರನ್ನು ಬಿಡುಗಡೆ ಮಾಡುವುದಕ್ಕೆ ಆದೇಶಿಸಿದರು.

ಅವರೆಲ್ಲ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಆ ಲಾಯರ್ ಮತ್ಯಾರು ಅಲ್ಲ ಸಂವಿಧಾನ ಶಿಲ್ಪಿ ಮಹಾನ್ ಚೇತನ 'ಡಾ.ಬಾಬಾಸಾಹೇಬ್ ಅಂಬೇಡ್ಕರ್'
ಇಂದು ಅವರನ್ನು ವಿರೋಧಿಸುವ ಸ್ವಘೋಷಿತ ದೇಶಪ್ರೇಮಿಗಳು ಅಂಬೇಡ್ಕರ್ ಅವರಿಗೆ ದೇಶದ, ದೇಶಪ್ರೇಮಿಗಳ ಬಗೆಗಿದ್ದ ತುಡಿತವನ್ನು ಅರಿಯಬೇಕು.

ಪ್ರತಿಯೊಬ್ಬ ಭಾರತೀಯರಿಗೂ ಈ ಸತ್ಯ ಕತೆ ಗೊತ್ತಾಗಬೇಕು. ಇತಿಹಾಸ ಅರಿಯದವನು ಇತಿಹಾಸ ನಿರ್ಮಿಸಲಾರ ಎಂಬ ಅಂಬೇಡ್ಕರರ ವಾಣಿಯಂತೆ ಇತಿಹಾಸವನ್ನು ಅರಿಯುವುದನ್ನು ಕಲಿತುಕೊಳ್ಳಬೇಕು. ಪ್ರಚೋದಕರ ಮಾತು ಕೇಳಿ ಪ್ರಚೊದನೆಗೊಳಗಾಗಿ ಇತಿಹಾಸ ತಿರುಚುವಂತ ನೀಚ ಕೆಲಸಕ್ಕೆ ಇಳಿಯಬಾರದು.



ಮುಸ್ಲಿಂ ಸಮಾಜ ಮಾಡುತ್ತಿರುವ ಉಪಕಾರವನ್ನು
ದೇಶ ಯಾವತ್ತೂ ಮರೆಯಲಾಗದು..
-ಮಸೀದಿಗಳನ್ನು ಕ್ವಾರಂಟೈನ್
ಸೆಂಟರ್‌ಗಳಾಗಿ ಮಾರ್ಪಾಡು ಮಾಡಿ ಕೊಟ್ಟರು.
- ರಕ್ತ ಮತ್ತು ಪ್ಲಾಸ್ಮಾ ನೀಡಿ ದೊಡ್ಡ
ಸಂಖ್ಯೆಯಲ್ಲಿ ಪ್ರಾಣಗಳನ್ನು ರಕ್ಷಿಸಿದರು.
-ಬಡವರಿಗೆ ವಿವಿಧ ವಿಧಗಳಲ್ಲಿ ಸಹಾಯ ಮಾಡಿದರು.
ಅವರು ಎಲ್ಲಾ ವಿಧದಲ್ಲೂ ಪ್ರಶಂಸೆಗೆ ಅರ್ಹರು.
*ಉದ್ಧವ್ ಠಾಕ್ರೆ*
*ಮಹಾರಾಷ್ಟ್ರ ಮುಖ್ಯಮಂತ್ರಿ..*






ಚೀನಾ ತಾಂತ್ರಿಕ ನೆರವು ನೀಡಲು ಮುಂದೆ ಬಂದಿದೆ, ಜರ್ಮನಿ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ನೀಡುತ್ತೇನೆ ಎಂದಿದೆ, ಪಾಕಿಸ್ತಾನ ಆಂಬುಲೆನ್ಸ್ ನೀಡುವ ಕೊಡುಗೆ ಮುಂದಿಟ್ಟಿದೆ. ಈಗ ನ್ಯೂಝಿಲ್ಯಾಂಡ್ ತನ್ನ ಪ್ರಧಾನ ಮಂತ್ರಿಯನ್ನು ನಮಗೆ ಕೊಟ್ಟರೆ ಈಗ ಎದುರಾಗಿರುವ ವಿಪತ್ತಿನಿಂದ ನಾವು ಬಹುಬೇಗ ಪಾರಾಗಬಹುದು.

**ಜವಾಹರ್ ಸರ್ಕಾರ್**
ಕೇಂದ್ರದ ಮಾಜಿ ಸಂಸ್ಕೃತಿ ಕಾರ್ಯದರ್ಶಿ

varthabharati

# ಕೃತಕ ಸೂರ್ಯ ಪ್ರಯೋಗದಲ್ಲಿ ಹೊಸ ದಾಖಲೆ

## ಈಸ್ಟ್ ಪ್ರಯೋಗದಲ್ಲಿ ಚೀನ ವಿಜ್ಞಾನಿಗಳ ಸಾಧನೆ

**ಬೀಜಿಂಗ್:** ಕೃತಕ ಸೂರ್ಯನನ್ನು ಸೃಷ್ಟಿಸಲು ಚೀನ ವಿಜ್ಞಾನಿಗಳು ದಶಕಗಳಿಂದ ನಡೆಸುತ್ತಿದ್ದ ಪ್ರಯೋಗದಲ್ಲಿ ಆಶಾಕಿರಣವೊಂದು ಮೂಡಿ ಬಂದಿದೆ. ಕೃತಕ ಸೂರ್ಯನ ಸೃಷ್ಟಿಗೆ ಎಕ್ಸ್‌ಪೆರಿಮೆಂಟಲ್ ಅಡ್ವಾನ್ಸ್‌ಡ್ ಸೂಪರ್ ಕಂಡಕ್ಟಿಂಗ್ ಟೋಕಮ್ಯಾಕ್ (ಈಸ್ಟ್) ಎಂಬ ಪ್ರಯೋಗವನ್ನು ವಿಜ್ಞಾನಿಗಳು ಕೈಗೊಂಡಿದ್ದಾರೆ.

ಪರಮಾಣು ಸಮ್ಮಿಲನ (ನ್ಯೂಕ್ಲಿಯರ್ ಫ್ಯೂಷನ್) ತಂತ್ರದಡಿ ಈ ಪ್ರಯೋಗ ನಡೆಸಲಾಗುತ್ತಿದೆ. ಇತ್ತೀಚೆಗೆ, ಈ ಪ್ರಯೋಗದಲ್ಲಿ ಬಳಸಲಾಗುವ ಪ್ಲಾಸ್ಮಾವು 101 ಸೆಕೆಂಡ್‌ಗಳ ಕಾಲ ಉರಿದು 120 ಮಿಲಿಯನ್ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖವನ್ನು ಉತ್ಪಾದಿಸಿದೆ. ಅನಂತರ, 20 ಸೆಕೆಂಡ್ ಹೆಚ್ಚುವರಿಯಾಗಿ ಉರಿದ ಪ್ಲಾಸ್ಮಾ, ಸೂರ್ಯನಿಗಿಂತ 10 ಪಟ್ಟು ಶಾಖವನ್ನು ಅಂದರೆ, 160 ಮಿಲಿಯನ್ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಉತ್ಪಾದಿಸಿದೆ.

**ಮಹತ್ವವೇನು?:** ಕೃತಕ ಸೂರ್ಯನನ್ನು ಸೃಷ್ಟಿಸುವ ಉದ್ದೇಶದಿಂದ ಈವರೆಗೆ ನಡೆದಿರುವ ಹಲವು ಪ್ರಯೋಗಗಳಲ್ಲಿ ಈ ಮಟ್ಟಗಿನ ಯಶಸ್ಸು ಸಿಕ್ಕಿರಲಿಲ್ಲ. 2017ರಲ್ಲಿ ದೊಡ್ಡ ಮಟ್ಟದಲ್ಲಿ ಪ್ಲಾಸ್ಮಾವನ್ನು ಉರಿಸಿದರೂ, ಕೇವಲ 50 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖವನ್ನು ಮಾತ್ರ ಉತ್ಪಾದಿಸಲಾಗಿತ್ತು. 2018ರಲ್ಲಿ 101 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಉತ್ಪಾದಿಸುವಲ್ಲಿ ವಿಜ್ಞಾನಿಗಳು ಯಶಸ್ವಿಯಾದರಾದರೂ, ಅದಕ್ಕೆ ಬಳಸಲಾಗಿದ್ದ ಹೇರಳ ಪ್ರಮಾಣದ ಪ್ಲಾಸ್ಮಾ ಮಾತ್ರ ಕೇವಲ 10 ಸೆಕೆಂಡ್‌ಗಳಲ್ಲಿ ಉರಿದು ಖಾಲಿಯಾಗಿತ್ತು. ಇದೇ ಮೊದಲ ಬಾರಿಗೆ, 101 ಸೆಕೆಂಡ್‌ಗಳವರೆಗೆ ಪ್ಲಾಸ್ಮಾ ನಿಧಾನವಾಗಿ ಉರಿದಿದೆ. ಜತೆಗೆ ಸೂರ್ಯನಿಗಿಂತ 10 ಪಟ್ಟು ಹೆಚ್ಚು ಶಾಖ ಉತ್ಪತ್ತಿಯಾಗಿದೆ. ಹಾಗಾಗಿ ಈ ಪ್ರಯೋಗದಲ್ಲಿ ಇದೊಂದು ಮೈಲುಗಲ್ಲು ಎನ್ನಬಹುದು.

## ಏಕೆ ಈ ಪ್ರಯೋಗ?

ಸೀಮಿತವಾದ ಪರಮಾಣು ತ್ಯಾಜಗಳನ್ನು ಬಳಸಿ ಸೂರ್ಯನಿಂದ ಹೆಚ್ಚು ಬೆಳಕು, ಶಾಖವನ್ನು ದೀರ್ಘಕಾಲ ಪಡೆಯುವಂತೆ ಮಾಡುವ ವಿಧಾನ ಆವಿಷ್ಕರಿಸಲು ಚೀನ ಪ್ರಯತ್ನಿಸುತ್ತಿದೆ. ಸದರ್ನ್ ಯೂನಿವರ್ಸಿಟಿ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿಯ ತಜ್ಞರು ಈ ಪ್ರಯೋಗ ನಡೆಸುತ್ತಿದ್ದಾರೆ. ಈಗ 101 ಸೆಕೆಂಡ್ ಪ್ಲಾಸ್ಮಾ ಉರಿದಿದ್ದಕ್ಕೆ ವಿಜ್ಞಾನಿಗಳು ದೊಡ್ಡ ಮೈಲುಗಲ್ಲನ್ನು ಸಾಧಿಸಿರುವ ಬಗ್ಗೆ ಖುಷಿಯಾಗಿದ್ದಾರೆ. ಆದರೆ ತಜ್ಞರು ಈ ಬಗ್ಗೆ ಈಗಲೇ ಖುಷಿಪಡುವ ಹಾಗಿಲ್ಲ. ಕೃತಕ ಸೂರ್ಯನನ್ನು ಸಾಧಿಸಲು ಇನ್ನೂ ದೀರ್ಘಕಾಲದ ಪ್ರಯಾಣ ಮುಂದುವರಿಸಬೇಕಾಗಿದೆ ಎಂದು ಹೇಳಿದ್ದಾರೆ. **(ಉದಯವಾಣಿ 5–6–2021)**

==================================================================

# ಕಪ್ಪುರಂಧ್ರ: ಅಧ್ಯಯನಕ್ಕೆ ಹೊಸ ತಿರುವು

**ಹೊಸದಿಲ್ಲಿ:** ಖಗೋಳ ವಿಜ್ಞಾನಿಗಳಿಗೆ ಇಂದಿಗೂ ಸೋಜಿಗದ ಗೂಡೆನಿಸಿರುವ ಕಪ್ಪು ರಂಧ್ರಗಳ ಮೂಲಕ ಬೆಳಕು ಹರಿದು ಹೋಗುವುದನ್ನು ಭೂಮಿಯಿಂದ ಸುಮಾರು 80 ಕೋಟಿ ಜ್ಯೋತಿರ್ವರ್ಷಗಳಷ್ಟು ದೂರವಿರುವ ಕಪ್ಪುರಂಧ್ರವೊಂದರ ಅಧ್ಯಯನದಲ್ಲಿ ತೊಡಗಿದ್ದ ಅಮೆರಿಕದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಡ್ಯಾನ್ ವಿಲ್ಕಿನ್ಸ್ ಪತ್ತೆ ಹಚ್ಚಿದ್ದಾರೆ. ಖಗೋಳ ವಿಜ್ಞಾನದಲ್ಲಿ ಇಂಥ ಮಹತ್ವದ ಸಂಶೋಧನೆಯಾಗಿರುವುದು ಇದೇ ಮೊದಲು.

**ಐನ್‌ಸ್ಟೀನ್ ಸಿದ್ಧಾಂತ ಮರು ಸಾಬೀತು!:** ಕಪ್ಪು ರಂಧ್ರಗಳ ಸುತ್ತ ಸುತ್ತುವ ಧೂಳು ಮತ್ತಿತರ ಕಣಗಳ ದ್ರವ್ಯರಾಶಿ (ಮಾಸ್) ಎಷ್ಟರಮಟ್ಟಿಗೆ ಬಾಗಿ ಸಾಗುವುದರಿಂದ ಆ ಕಪ್ಪು ರಂಧ್ರದಲ್ಲಿ ಗುರುತ್ವಾಕರ್ಷಣ ಶಕ್ತಿ ಸೃಷ್ಟಿಯಾಗುತ್ತದೆ. ಗುರುತ್ವಾಕರ್ಷಣ ಶಕ್ತಿಯ ಪ್ರಾಬಲ್ಯ ಆ ದ್ರವ್ಯರಾಶಿ ವ್ಯಾಪ್ತಿಗೆ ಅನುಗುಣವಾಗಿರುತ್ತದೆ ಎಂದು ಅಮೆರಿಕದ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್, ತಮ್ಮ 'ಥಿಯರಿ ಆಫ್ ರಿಲೇಟಿವಿಟಿ' ಸಿದ್ಧಾಂತದಲ್ಲಿ ಪ್ರತಿಪಾದಿಸಿದ್ದರು. ಈಗ, ಕಪ್ಪು ರಂಧ್ರಗಳ ಮೂಲಕ ಬೆಳಕು ಹಾದು ಹೋಗಿರುವುದು ಆ ರಂಧ್ರದ ಗುರುತ್ವಾಕರ್ಷಣ ಶಕ್ತಿ ಕ್ಷೀಣವಾಗಿರುವುದನ್ನು ತೋರಿಸಿದೆ. ಈಗ ಅಧ್ಯಯನ ಮಾಡಿರುವ ಕಪ್ಪು ರಂಧ್ರದಲ್ಲಿ ಗುರುತ್ವಾಕರ್ಷಣ ಶಕ್ತಿ ಕ್ಷೀಣವಾಗಿದ್ದರಿಂದಲೇ ಅಂಥ ಕಪ್ಪು ರಂಧ್ರದಲ್ಲಿ ಬೆಳಕು ಹಾದು ಹೋಗಲು ಸಾಧ್ಯವಾಗಿದೆ.

ಅಂದರೆ ಆ ಕಪ್ಪು ರಂಧ್ರದ ದ್ರವ್ಯರಾಶಿ ಹಾಗೂ ಅದರ ಬಾಗುವಿಕೆ ಎರಡೂ ಕ್ಷೀಣಿಸಿವೆ ಎಂದರ್ಥ. ಈ ಆವಿಷ್ಕಾರ ಮುಂದೆ ವಿವಿಧ ಕ್ಷೀರಪಥಗಳ, ವಿವಿಧ ಗ್ರಹಗಳ ಗುರುತ್ವಾಕರ್ಷಣ ಅಧ್ಯಯನಕ್ಕೂ ಸಹಾಯವಾಗಲಿದೆ' ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

## ಐಐಎಸ್ಸಿ ವಿಜ್ಞಾನಿಯ ಮಹತ್ವದ ಸಾಧನೆ

ಹೊಸದಿಲ್ಲಿ: ಸೂರ್ಯನಲ್ಲಿ ಅಗಾಧ ಪ್ರಮಾಣದ ಬೆಳಕು ಮತ್ತು ಶಾಖವನ್ನು ಉತ್ಪತ್ತಿ ಮಾಡುವ ಸೂರ್ಯನ ಒಳಪದರದ ಪರಿಭ್ರಮಣ ಪದರವನ್ನು ಪತ್ತೆ ಹಚ್ಚುವಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಪ್ರಾಧ್ಯಾಪಕರಾದ ಅರ್ನಾಬ್ ರೈ ಚೌಧರಿ ಹಾಗೂ ಆರ್ಯಭಟ ಸಂಶೋಧನ ಸಂಸ್ಥೆಯ (ಎಆರ್‌ಐಇಎಸ್) ವಿಭೂತಿ ಕುಮಾರ್ ಝಾ ಯಶಸ್ವಿಯಾಗಿದ್ದಾರೆ. ಸೂರ್ಯನ ಮೇಲ್ಮೈನ

ಒಳಭಾಗದಲ್ಲಿ ಮೇಲ್ಮೈಗೆ ತೀರಾ ಹತ್ತಿರವಿರುವ ನಿಯರ್ ಸರ್ಫೇಸ್ ಶಿಯರ್ ಲೇಯರ್ (ಎನ್‌ಎಸ್‌ಎಲ್) ಎಂಬ ಹೆಸರಿನ ಈ ಪದರದಿಂದಾಗಿ ಸೂರ್ಯನಲ್ಲಿ ಅಗಾಧ ಪ್ರಮಾಣದ ಶಾಖ ಮತ್ತು ಬೆಳಕು ಉತ್ಪತ್ತಿಯಾಗುತ್ತದಲ್ಲದೆ, ಸೂರ್ಯದ ಧ್ರುವಗಳು, ಭೂಮಿಯ ಧ್ರುವಗಳಿಗಿಂತಲೂ ಅತ್ಯಂತ ವೇಗವಾಗಿ ಬದಲಾವಣೆಗೊಳ್ಳಲು ಮೂಲ ಕಾರಣವಾಗಿದೆ ಎಂದು ಈ ವಿಜ್ಞಾನಿಗಳು ತಿಳಿಸಿದ್ದಾರೆ.

**(ಉದಯವಾಣಿ 30–7–2021)**

================================================================

## ಮಂಗಳೂರು ಸೇರಿ 12 ನಗರ ಮುಳುಗಡೆ?

**ಜಾಗತಿಕ ತಾಪಮಾನ ಹೆಚ್ಚಳದ ಎಫೆಕ್ಟ್: ನಾಸಾದಿಂದ ಎಚ್ಚರಿಕೆ. ವಿಶ್ವಸಂಸ್ಥೆಯ ಪರಿಸರ ತಜ್ಞರ ವರದಿ ಆಧಾರದಲ್ಲಿ ಸಂಶೋಧನೆ**

**ಹೊಸದಿಲ್ಲಿ:** ಜಾಗತಿಕ ತಾಪಮಾನದ ದುಷ್ಪರಿಣಾಮಗಳ ಬಗ್ಗೆ ವಿಶ್ವಸಂಸ್ಥೆಯ 195 ಪರಿಸರ ತಜ್ಞರ ಸಮಿತಿ, ಸೋಮವಾರ ಬಿಡುಗಡೆ ಮಾಡಿರುವ ಎಚ್ಚರಿಕೆಯ ವರದಿಯನ್ನು (ಐಪಿಸಿಸಿ ವರದಿ) ಅವಲೋಕನ ಮಾಡಿರುವ ಅಮೆರಿಕ ಬಾಹ್ಯಾಕಾಶ ಸಂಸ್ಥೆ (ನಾಸಾ), ಭಾರತಕ್ಕೆ ಮುನ್ನೆಚ್ಚರಿಕೆ ನೀಡಿದೆ. ಮಂಗಳೂರು ಸೇರಿದಂತೆ ಭಾರತದ ಕರಾವಳಿ ತೀರಗಳಲ್ಲಿರುವ 12 ನಗರಗಳು ಈ ಶತಮಾನದ ಅಂತ್ಯಕ್ಕೆ ಮುಳುಗಲಿವೆ ಎಂಬ ಎಚ್ಚರಿಕೆಯನ್ನೂ ನೀಡಿದೆ.

ಐಪಿಸಿಸಿ ವರದಿ ಹಾಗೂ ತನ್ನ ಉಪಗ್ರಹಗಳು ನೀಡಿರುವ ಮಾಹಿತಿಗಳನ್ನು ತಾಳೆ ಹಾಕಿರುವ ನಾಸಾ, 1988ರಿಂದೀಚೆಗೆ, ಜಾಗತಿಕ ತಾಪಮಾನ ಗಣನೀಯವಾಗಿ ಹೆಚ್ಚಾಗಿದ್ದರಿಂದ ಹಿಮಚ್ಛಾದಿತ ಪ್ರದೇಶಗಳಲ್ಲಿ ಹಿಮ ಕರಗಿ ಸಮುದ್ರ ಸೇರುತ್ತಿದೆ. ಈ ಹಿಂದೆ ಪ್ರತೀ 100 ವರ್ಷಗಳಿಗೊಮ್ಮೆ ಸಮುದ್ರದಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ಈಗ ಹತ್ತಾರು ವರ್ಷಗಳಿಗೊಮ್ಮೆ ಏರಿಕೆಯಾಗುತ್ತಿದೆ. 2050ರೊಳಗೆ ಸಮುದ್ರದ ನೀರಿನ ಮಟ್ಟ ಪ್ರತೀ 5ರಿಂದ 7 ವರ್ಷದಲ್ಲಿ ಹೆಚ್ಚಾಗಬಹುದು. ಇದರಿಂದ ಈ ಶತಮಾನದ ಅಂತ್ಯಕ್ಕೆ ಮಂಗಳೂರು, ಮುಂಬಯಿ, ಚೆನ್ನೈ, ಕೊಚ್ಚಿ, ವಿಶಾಖಪಟ್ಟಣ ಸೇರಿದಂತೆ ದೇಶದ 12 ಕರಾವಳಿ ನಗರಗಳು ಮುಳುಗಡೆಯಾಗುತ್ತವೆ ಎಂದಿದೆ.

ಇದಲ್ಲದೆ, ತಗ್ಗು ಪ್ರದೇಶಗಳಿಗೆ ಸಾಗರ ನೀರು ನುಗ್ಗುವುದು, ಪ್ರತೀ 100 ವರ್ಷಕ್ಕೊಮ್ಮೆ ಆಗುತ್ತಿದ್ದ ಕರಾವಳಿ ಭೂ ಸವಕಳಿ ಇನ್ನು ಪ್ರತೀ ವರ್ಷ ಘಟಿಸುವುದು ಜರಗುತ್ತವೆ. ಕರಾವಳಿಯಲ್ಲಾಗುವ ಈ ಬದಲಾವಣೆ, ಗುಡ್ಡಗಾಡು ಪ್ರದೇಶ, ಬಯಲು ಸೀಮೆಗಳಲ್ಲಿನ ಹವಾಗುಣದ ಮೇಲೂ ದುಷ್ಪರಿಣಾಮ ಬೀರಿ, ಅತೀ ಶೀತ ಗಾಳಿ, ಅತ್ಯುಷ್ಣ ಗಾಳಿಯ ಹಾವಳಿ ಜಾಸ್ತಿಯಾಗುತ್ತದೆ ಎಂದು ನಾಸಾ ವಿವರಿಸಿದೆ.

**(ಉದಯವಾಣಿ 11–8–2021)**

================================================================

## ಬಾಯಿ ಇಲ್ಲದಿದ್ದರೂ ಆಹಾರ ಸೇವಿಸುವ, ಕಾಲಿಲ್ಲದಿದ್ದರೂ ನಡೆಯುವ ಅಚ್ಚರಿಯ ಏಕಾಣು ರೂಪಿ!

## ಬಾಹ್ಯಾಕಾಶ ನಿಲ್ದಾಣಕ್ಕೆ ಕಾಲಿಟ್ಟ ವಿಶೇಷ ಜೀವಿ!

ಅಂತರಿಕ್ಷದಲ್ಲಿ ತೇಲಾಡುತ್ತಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್), ಗುರುವಾರ ಹೊಸ ಜೀವಿಯೊಂದು ಸೇರ್ಪಡೆಗೊಂಡಿದೆ. ಅದರ ಹೆಸರು 'ಬ್ಲಾಬ್'! ಇದರ ವಿಶೇಷವೇನು ಗೊತ್ತೇ? ಇದು ಮನುಷ್ಯನಲ್ಲ, ಪ್ರಾಣಿಯೂ ಅಲ್ಲ; ಸಸ್ಯ ಅಲ್ಲ ಅಥವಾ ಶಿಲೀಂಧ್ರವೂ ಅಲ್ಲ... ಹಾಗಿದ್ದರೆ ಏನಿದು? ಏಕೆ ಇದನ್ನು ಐಎಸ್‌ಎಸ್‌ಗೆ ಕಳುಹಿಸಲಾಗಿದೆ? ಇಲ್ಲಿದೆ ಕುತೂಹಲಕರ ಮಾಹಿತಿ.

### ಯಾವ ವರ್ಗಕ್ಕೂ ಸೇರದ್ದು!

ನೋಡಲು ಹಳದಿ ಬಣ್ಣದ, ಸ್ಪಾಂಜಿನ ಗುಣ ಲಕ್ಷಣಗಳಿರುವ ಇದರ ವೈಜ್ಞಾನಿಕ ಹೆಸರು, ಫೈಸೂರಮ್ ಪಾಲಿಸೆಫಾಲಮ್ (Physarum polycephalum). ಸುಮಾರು 50 ಕೋಟಿ ವರ್ಷಗಳ ಹಿಂದೆ ಇದು ಭೂಮಿಯಲ್ಲಿ ಉಗಮವಾಗಿದೆ ಎಂದು ನಂಬಲಾಗಿದೆ. ಇದೊಂದು ಏಕಾಣು ಜೀವಿ. ಆದರೆ ಏಕಾಣು ಜೀವಿಗಳಲ್ಲಿರುವಂತೆ ಇದರಲ್ಲಿ ನ್ಯೂಕ್ಲಿಯಸ್ ಇರುವುದಿಲ್ಲ. ಇದನ್ನು ಈ ಹಿಂದೆ, ಶಿಲೀಂಧ್ರಗಳ ವರ್ಗಕ್ಕೆ ಸೇರಿಸಲಾಗಿತ್ತಾದರೂ, ಅನಂತರ ಅದರ ಜೈವಿಕ ವ್ಯತ್ಯಾಸಗಳಿಂದಾಗಿ ಅದನ್ನು ಆ ವರ್ಗದಿಂದ ಹೊರಗಿಡಲಾಯಿತು. ಅಂದಿನಿಂದ ಇಲ್ಲಿಯವರೆಗೂ ಅದು 'ಅವರ್ಗೀಯ'ವಾಗಿಯೇ ಉಳಿದಿದೆ.

### ಸೋಜಿಗಜೀವಿ 'ಬ್ಲಾಬ್'ನ ವಿಚಿತ್ರ ಜೀವನ, ವಿಶೇಷಣ!

ಸಾಮಾನ್ಯವಾಗಿ ಯಾವುದೇ ಜೀವಿಯಲ್ಲಿ ಗಂಡು–ಹೆಣ್ಣು ಎಂಬ ಪ್ರಭೇದವಿರುತ್ತದೆ. ಆದರೆ ಇದರಲ್ಲಿ 720 ಪ್ರಭೇದಗಳಿವೆ! ಇದಕ್ಕೆ ಬಾಯಿ, ಅಂಗಾಂಗಗಳು, ಮೆದುಳು ಇಲ್ಲ. ಆದರೆ ಇದು ಆಹಾರ ಸೇವಿಸುತ್ತದೆ. ಅತ್ಯಂತ ನಿಧಾನವಾಗಿ ಚಲಿಸುತ್ತದೆ. ಇನ್ನೊಂದು ವಿಶೇಷವೆಂದರೆ, ಸಾಮಾನ್ಯವಾಗಿ ಏಕಾಣು ಜೀವಿಗಳು ಜೀವಕೋಶಗಳ ವಿಭಜನೆಯಿಂದ ತಮ್ಮ ಸಂತಾನೋತ್ಪತ್ತಿ ಮಾಡುತ್ತವೆ. ಆದರೆ ಬ್ಲಾಬ್‌ನಲ್ಲಿ ಈ ಪ್ರಕ್ರಿಯೆ ನಡೆಯದೇ ಸಂತಾನೋತ್ಪತ್ತಿ ಮಾಡಿಕೊಳ್ಳುತ್ತದೆ.

### ಐಎಸ್‌ಎಸ್‌ಗೆ ಕಳುಹಿಸಿದ್ದೇಕೆ?

ಭೂಮಿಯ ಮೇಲಿನ ಯಾವುದೇ ಜೀವಿಗೆ ಇರದಂಥ ಸೋಜಿಗಗಳನ್ನು ಹೊಂದಿರುವ ಇದು ಗುರುತ್ವಾಕರ್ಷಣವಿಲ್ಲದ ಕಡೆ ಹೇಗೆ ಬೆಳೆಯಬಲ್ಲದು ಎಂಬ ಕುತೂಹಲ ವಿಜ್ಞಾನಿಗಳದ್ದು. ಹಾಗಾಗಿ, ಇದನ್ನು ಐಎಸ್‌ಎಸ್‌ಗೆ ಕಳುಹಿಸಲಾಗಿದೆ. ಅಲ್ಲಿ ಖಗೋಳ ಯಾತ್ರಿಕರು ಇದನ್ನು ಆಳವಾಗಿ ಅಧ್ಯಯನ ಮಾಡಲಿದ್ದಾರೆ. ಇದೇ ಅಧ್ಯಯನವನ್ನು ಫ್ರಾನ್ಸ್‌ನ ಶಾಲಾ ವಿದ್ಯಾರ್ಥಿಗಳು ಫ್ರಾನ್ಸ್‌ನಲ್ಲಿ ಕೈಗೊಳ್ಳಲಿದ್ದಾರೆ. ಎರಡೂ ಕಡೆಗಳಲ್ಲಿ ಈ ಜೀವಿಯ ಜೀವನ ಶೈಲಿಯಲ್ಲಿ ಕಾಣುವ ವ್ಯತ್ಯಾಸವನ್ನು ಗ್ರಹಿಸಲು ಉದ್ದೇಶಿಸಲಾಗಿದೆ.

**(ಉದಯವಾಣಿ 13–8–2021)**

ನಿಧನ ವಾರ್ತೆಗಳು

## ಸಯ್ಯದ್ ತಾಲಿಶ್ ಅಹ್ಮದ್ ಸಾಹಿಬ್




ವಖ್‌ಫೇ ಝಿಂದಗಿಯಾದ ಸಯ್ಯದ್ ತಾಲಿಶ್ ಅಹ್ಮದ್ ಇಬ್ನು ಸಯ್ಯದ್ ಹಾಶಿಂ ಅಕ್ಬರ್ ಘಾನದಲ್ಲಿ ಶಹೀದ್ ಆದರು. ("ಇನ್ನಾ ಲಿಲ್ಲಾಹಿವಇನ್ನಾ ಇಲೈಹಿರಾಜಿಊನ್.") ಆಗಸ್ಟ್ 23 ಮತ್ತು 24ರ ರಾತ್ರಿ ಎಂ.ಟಿ.ಎ.ಯ ಮೂವರು ಸದಸ್ಯರ ಸಂಘವು ಘಾನದ ನಾರ್ಥನ್ ರೀಜನಿನಲ್ಲಿ ರಿಕಾರ್ಡಿಂಗ್ ಮಾಡಿ ಕುಮಾಸಿಗೆ ಹಿಂದಿರುಗುತ್ತಿದ್ದಾಗ ರಸ್ತೆಯಲ್ಲಿ ಸುಮಾರು 7.15ಕ್ಕೆ ದರೋಡೆಗಾರರ ಫೈರಿಂಗ್‌ನಿಂದ ಸಯ್ಯದ್ ತಾಲಿಶ್ ಅಹ್ಮದ್ ಮತ್ತು ಉಮರ್ ಫಾರೂಖ್ ಗಾಯಗೊಂಡರು. ಸಯ್ಯದ್ ತಾಲಿಶ್ ಅಹ್ಮದ್ ಸಾಹಿಬರು ಸನ್ಮಾನ್ಯ ಅಮತುಲ್ಲತೀಫ್ ಬೇಗಂ ಸಾಹಿಬ ಮತ್ತು ಸಯ್ಯದ್ ಮೀರ್ ಮುಹಮ್ಮದ್ ಅಹ್ಮದ್ ಸಾಹಿಬ್‌ರ ಮೊಮ್ಮಗನೂ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ[ರ] ಹಾಗೂ ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್‌ರ ಮೊಮ್ಮಗನ ಮಗನೂ ಆಗಿದ್ದರು. ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್[ರ] ಹಝ್ರತ್ ಅಮ್ಮಾಜಾನ್‌ರ[ರ] ಕಿರಿಯ ಸಹೋದರ ಆಗಿದ್ದರು. ಈ ರೀತಿಯಲ್ಲಿ ಅವರ ಕುಟುಂಬ ಪರಂಪರೆಯು ಹಝ್ರತ್ ಅಮ್ಮಾಜಾನ್‌ರಿಗೆ[ರ] ಬಂದು ಸೇರುತ್ತದೆ ಹಾಗೂ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ[ರ] ಕಾರಣದಿಂದ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಸಂಬಂಧ ಸ್ಥಾಪಿತವಾಗುತ್ತದೆ. ತಾಲಿಶ್ ಸಾಹಿಬ್‌ರು ದಿವಂಗತ ಮಿರ್ಝಾ ಗ್ಹುಲಾಂ ಖಾದಿರ್ ಶಹೀದ್ ಸಾಹಿಬ್‌ರ ಅಳಿಯನೂ ಆಗಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯೂ ವಖ್ಫೇ ನೌ ಯೋಜನೆಯಲ್ಲಿ ಭಾಗಿಯೂ ಆಗಿದ್ದರು. ಅವರಿಗೆ 31 ವರ್ಷ ಪ್ರಾಯವಾಗಿತ್ತು.

ಅವರು ಬಯೋ ಮೆಡಿಕಲ್ ಸಯನ್ಸ್‌ನಲ್ಲಿ ಡಿಗ್ರಿ ಪಡೆದ ನಂತರ ಜರ್ನಲಿಸಂನಲ್ಲಿ ಮಾಸ್ಟರ್ ಮಾಡಿದ್ದರು. 2013ರಲ್ಲಿ ಜೀವಿತವನ್ನು ವಖ್ಫ್ ಮಾಡಿದರು. ಅನಂತರ ವಿವಿಧ ಆಫೀಸ್‌ಗಳಲ್ಲಿ ಕೆಲಸ ಮಾಡಿದ ನಂತರ 2016ರಲ್ಲಿ ಎಂ.ಟಿ.ಎ. ನ್ಯೂಸ್‌ನಲ್ಲಿ ಪೂರ್ಣಾವಧಿಗೆ ನಿಯುಕ್ತಿಗೊಂಡರು. ಅಲ್ಲಿ ಅವರು ಡೊಕ್ಯುಮೆಂಟರಿ ಪ್ರೋಗ್ರಾಮುಗಳನ್ನು ತಯಾರಿಸುತ್ತಿದ್ದರು. ವಾರಕ್ಕೊಮ್ಮೆ ಪ್ರಸಾರಗೊಳ್ಳುವ ದಿಸ್ ವೀಕ್ ವಿತ್ ಹುಝೂರ್ ಕಾರ್ಯಕ್ರಮವನ್ನು ಇವರೇ ಶುರುಮಾಡಿದ್ದರು. ತನ್ನ ಲೋಕಲ್ ಜಮಾಅತ್ ಮತ್ತು ಖುದ್ದಾಮುಲ್ ಅಹ್ಮದಿಯಾದ ಅಡಿಯಲ್ಲೂ ಅವರಿಗೆ ಸೇವೆ ಸಲ್ಲಿಸಲು ಸಂದರ್ಭ ಸಿಕ್ಕಿತ್ತು.

ಸಯ್ಯದ್ ತಾಲಿಶ್ ಅಹ್ಮದ್‌ರಿಗೆ ಉತ್ತಮ ಗುಣಮಟ್ಟಕ್ಕೆ ಅನುಸಾರ ತನ್ನ ಕೆಲಸವನ್ನು ಕೊನೆಗೊಳಿಸುವ ಅಸಾಮಾನ್ಯ ಆವೇಶವಿತ್ತು. ಅದಕ್ಕಾಗಿ ಅವರು ಯಾವುದೇ ಅಪಾಯದ ಪರಿವೆ ಮಾಡುತ್ತಿರಲಿಲ್ಲ. ಅವರ ಶಹಾದತಿನ ಘಟನೆಯಿಂದಲೂ ಇದು ಸ್ಪಷ್ಟವಾಗುತ್ತದೆ. ಟಮಾಲೆಯ ಝೋನಲ್ ಮಿಶನರಿಯ ಹೇಳಿಕೆ ಪ್ರಕಾರ ಅವರೊಡನೆ ರಾತ್ರಿಯ ಯಾತ್ರೆಯಿಂದ ಬಿಟ್ಟುನಿಲ್ಲಲು ಸಲಹೆ ನೀಡಲಾಗಿತ್ತು. ಆದಾಗ್ಯೂ ಅವರು ಸಮಯದ ಕೊರತೆಯ ಕಾರಣ ಮತ್ತು ಬಹಳಷ್ಟು ಕೆಲಸದ ಕಾರಣದಿಂದ ಯಾತ್ರೆ ಮಾಡುವುದೇ ಲೇಸು ಎಂದು ಭಾವಿಸಿದ್ದರು. ಜಮಾಅತಿನ ಸಂಪತ್ತು ಮತ್ತು ಸಮಯಕ್ಕೆ ಅವರು ಎಷ್ಟು ಬೆಲೆಕೊಡುತ್ತಿದ್ದರು ಎಂದರೆ ರಸ್ತೆಯಲ್ಲೂ ಲ್ಯಾಪ್‌ಟಾಪಿನಲ್ಲಿ ತನ್ನ ಕೆಲಸವನ್ನು ಮಾಡುತ್ತಿದ್ದರು. ಎಂಪಾಹ ಜಂಕ್ಷನಿನ ಸಮೀಪ ದರೋಡೆಕೋರರು ವಾಹನದ ಮೇಲೆ ಫೈರಿಂಗ್ ಮಾಡಿದರು. ಅವರ ಸೊಂಟದಲ್ಲಿ ಗುಂಡು ತಗುಲಿತು ಮತ್ತು ಬಹಳಷ್ಟು ರಕ್ತ ಹರಿಯಿತು. ಮೊದಲು ಪೋಲಿ ಕ್ಲಿನಿಕ್‌ನಲ್ಲಿ ಅವರ ಮೆಡಿಕಲ್ ಚಿಕಿತ್ಸೆ ನಡೆಯಿತು. ಅನಂತರ ಟಮಾಲೆ ಟೀಚಿಂಗ್ ಆಸ್ಪತ್ರೆಗೆ ಹೋಗುವ ಮಾರ್ಗದಲ್ಲಿ ಘಟನೆ ನಡೆದ ಸುಮಾರು ನಾಲ್ಕುವರೆ ಗಂಟೆಗಳ ನಂತರ ಅವರು ನಿಧನಗೊಂಡರು. ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ಕರುಣಿಸಲಿ – ಆಮೀನ್.

=================================================================

## ಮೌಲವಿ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್



ಮೌಲವಿ ಮಖ್‌ಸೂದ್ ಅಹ್ಮದ್ ಭಟ್ಟಿ ಸಾಹಿಬ್ 18–5–21ರಂದು ತನ್ನ 52ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.") ಅವರು ಮೂಲತಃ ಚಾರ್‌ಕೋಟ್ (ಜಮ್ಮು ಕಾಶ್ಮೀರ) ಜಮಾಅತಿಗೆ ಸೇರಿದ್ದವರಾಗಿದ್ದರು.

ಅವರು 30 ವರ್ಷಗಳ ಕಾಲ ಜಮಾಅತಿಗೆ ಸೇವೆ ಸಲ್ಲಿಸಿದರು. ಅವರು ಲಕ್ನೋ ಝೋನ್ ಅಮೀರ್ ಆಗಿಯೂ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ. 2017ರಿಂದ ಅವರು ಮರ್ಕಝಿ ಖಾಝಿಯಾಗಿದ್ದರು. ಅವರು ಶ್ರೀನಗರದಲ್ಲಿ ಒಂದು ವರ್ಷ, ಶಿವಮೊಗ್ಗದಲ್ಲಿ 5 ವರ್ಷ, ಬೆಂಗಳೂರಿನಲ್ಲಿ 8 ವರ್ಷ, ಹೈದರಾಬಾದಿನಲ್ಲಿ 5 ವರ್ಷ, ಉತ್ತರ ಪ್ರದೇಶದಲ್ಲಿ 7 ವರ್ಷ ಕಾಲ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದ್ದರು. ಮಾತ್ರವಲ್ಲ, ಜಮಾಅತಿನ ವಿವಿಧ ಹುದ್ದೆಗಳನ್ನು ವಹಿಸಿಕೊಂಡಿದ್ದರು. ಅವರು ಪತ್ನಿ ಮತ್ತು ಮೂವರು ಹೆಣ್ಮಕ್ಕಳನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

## ಮೌಲವಿ ಪಿ. ಮುಹಮ್ಮದ್ ಯೂಸುಫ್ ಸಾಹಿಬ್



ಮೌಲವಿ ಪಿ. ಮುಹಮ್ಮದ್ ಸಾಹಿಬರು ತನ್ನ 68ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್").

ಮೌಲವಿ ಸಾಹಿಬರು ತನ್ನ 18ನೇ ವಯಸ್ಸಿನಲ್ಲಿ ಜಮಾಅತಿಗೆ ಪ್ರವೇಶಿಸಿದರು. ಅವರು ಖಾದಿಯಾನಿನಲ್ಲಿ ಧಾರ್ಮಿಕ ಅಧ್ಯಯನ ಮಾಡಿದ ನಂತರ ಕೇರಳದ ಅನೇಕ ಜಮಾಅತುಗಳಲ್ಲಿ (ಮಂಜೇಶ್ವರ, ಮೊಗ್ರಾಲ್ ಸಹಿತ) ಮುಅಲ್ಲಿಮರಾಗಿ ಸೇವೆ ಸಲ್ಲಿಸಿದ್ದಾರೆ. ಅಹ್ಮದಿಯಾ ಸಂದೇಶವನ್ನು ಎಲ್ಲೆಡೆ ತಲಪಿಸಬೇಕೆಂಬ ಅವರ ಅತ್ಯುತ್ಸಾಹ ಕಾರಣ ಅವರು ಪೇಟೆಗಳ ಮಧ್ಯದಲ್ಲಿ ಹೋಗಿ ಭಾಷಣ ಮಾಡುತ್ತಿದ್ದರು. ಸುಮಾರು 40 ವರ್ಷಗಳ ಕಾಲ ಅವರು ಜಮಾಅತಿಗೆ ಸೇವೆ ಸಲ್ಲಿಸಿದರು. 2012ರಲ್ಲಿ ಅವರು ಯು.ಕೆ ಜಲ್ಸಾ ಸಾಲಾನದಲ್ಲಿ ಭಾಗವಹಿಸಿದ್ದರು. ಅವರು ಪತ್ನಿ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ಅನುಗ್ರಹಿಸಲಿ – ಆಮೀನ್.

==========================================================================

## ಜನಾಬ್ ಸಿ.ಪಿ. ಮುಹಮ್ಮದ್ ಸಾಹಿಬ್



ಮೂಲತಃ ಅಲನಲ್ಲೂರ್‌ನವರಾದ, ಮಾತ್ತೋಟ್ಟಂ (ಕಲ್ಲಿಕೋಟೆ) ಜಮಾಅತಿನ ಸದಸ್ಯರಾಗಿದ್ದ ಸಿ.ಪಿ. ಮುಹಮ್ಮದ್ ಸಾಹಿಬ್ 8–5–2021ರಂದು ತನ್ನ 80ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್").

ಸಿ.ಪಿ. ಕುಞಾಪ್ಪ ಮೌಲವಿ ಸಾಹಿಬರ ಪುತ್ರನಾದ ಅವರು ತನ್ನ ಪಿತ ಬೈಅತ್ ಮಾಡಿದ ಕೆಲವು ವರ್ಷಗಳ ನಂತರ ಬೈಅತ್ ಮಾಡಿದರು. ಮಂಜೇಶ್ವರ, ಮೊಗ್ರಾಲ್ ಮತ್ತು ಕೇರಳದ ಕೆಲವೆಡೆಗಳಲ್ಲಿ ಕೆಲವು ವರ್ಷಗಳ ಕಾಲ ಅವರು ಮುಅಲ್ಲಿಂ ಆಗಿ ಸೇವೆ ಸಲ್ಲಿಸಿದ್ದಾರೆ. ಅವರು ಪತ್ನಿ, 7 ಪುತ್ರಿಯರು ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ಕರುಣಿಸಲಿ – ಆಮೀನ್.

==========================================================================

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

**ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು**
**ಆದರೆ ಹೃದಯಗಳನ್ನಲ್ಲ.**
**ಬಲದಿಂದ ಶಿರಗಳನ್ನು ಬಾಗಿಸಬಹುದು**
**ಆದರೆ ಮನಸ್ಸುಗಳನ್ನಲ್ಲ.**

**– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ**

**“ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ.”**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

**“ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ”**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

# LOVE FOR ALL
# HATRED FOR NONE
# LET’S MAKE IT HEAVEN


**Contact Details:** Ahmadiyya Muslim Jama’at India

**Head Office**

Shoba Noor-ul-Islam
Qadian, Distt. Gurdaspur, Punjab, Pin:143516

**Branch Office:**

No1 3rd Cross, Wilson Garden, Bangalore-560027

Darussalam, Near Railway Level Crossing Pandeshwar, Mangalore -575001

**www.alislam.org /www.ahmadiyyamuslimjamaat.in**

Feedback **www.ahmadiyyamuslimjamaat.in/feedback**

/islaminind /islaminind /+islaminindia /islaminindia /c/islaminindia


**official blog: www.lightofislam.in**

National Toll Free Number: 1800 103 2131 (9:00AM to 10:30PM)

**MUSLIM TELEVISION AHMADIYYA INTERNATIONAL**

**ww.mta.tv**

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna


تفسیرِ صغیر
THE HOLY QUR'AN
Introduction To
The Study Of
The Holy Qur'ān
اسوۂ انسانِ کامل
منتخب
احادیث
ಅಹ್ಮದಿಯಾ ಸಂದೇಶ
JESUS
IN
INDIA
NEW PUBLICATIONS
Contact:
NAZARAT NASHRO-ISHA'AT
Sadr Anjuman Ahmadiyya
Qadian-143516 (Punjab)
Phone: 01872- 500970

## READ AHMADIYYA PERIODICALS

**THE REVIEW OF RELIGIONS**

English Monthly

Annual Subscription : Rs. 500/-

Contact: The Editor

The Review of Religions

Mohalla Ahmadiyya,

QADIAN – 143516 (Punjab)

=====================================================

**BADAR – Urdu Weekly**

Annual Subscription : Rs. 700/-

Contact: The Manager

The Badar Weekly

Mohalla Ahmadiyya,

QADIAN – 143516 (Punjab)

=====================================================

**ANSARULLAH**

Hindi & Urdu Bi-monthly

Annual Subscription : Rs. 210/-

Contact: The Editor, "ANSARULLAH"

Mohalla Ahmadiyya,

QADIAN – 143516 (Punjab)

=====================================================

**MISHKAT – Urdu Monthly**

Annual Subscription : Rs. 220/-

Contact: The Editor, "MISHKAT"

Mohalla Ahmadiyya,

QADIAN – 143516 (Punjab)

=====================================================

**SATHYADOOTHAN**

Malayalam Monthly

Annual Subscription : Rs. 360/-

Contact: The Manager


The Sathyadoothan Monthly


Masjid Umar


St. Benedict Road

Ernakulam North, KOCHI – 682018

************















**NEW PUBLICATIONS**

**Contact:**

**NAZARAT NASHRO - ISHA'AT**

**Sadr Anjuman Ahmadiyya**

**Qadian – 143516 (Punjab)**

**Phone: 01872 - 500970**

Registered with the Registrar of Newspapers for India No. R.N. 27354/75
**Yugarashmi** Kannada Quarterly, **September - 2021.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone, ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages

**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore